ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 15 ಸೋಮವಾರ 2022


₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 121 | ಪುಟಗಳು: 12+XII

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

Promotional Feature



ಸರ್ವರಿಗೂ

75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು



ಮೈಷುಗರ್ ಪುನರಾರಂಭದ ರೂವಾರಿ ಮಳವಳ್ಳಿಯ ಜನಪ್ರಿಯ ಶಾಸಕ

ಡಾ.ಕೆ.ಅನ್ನದಾನಿ

ಕಳೆದ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಮಂಡ್ಯ ಜಿಲ್ಲೆಯ ಜೀವನಾಡಿ ಮೈಷುಗರ್ ಸಕ್ಕರೆ ಕಾರ್ಖಾನೆ ಪುನರಾರಂಭವಾಗುವಲ್ಲಿ ಜನಪ್ರತಿನಿಧಿಗಳು, ಹೋರಾಟಗಾರರು, ಸರ್ಕಾರದ ಪಾತ್ರ ಮಹತ್ವದ್ದಾಗಿದ್ದರೂ ಎಲ್ಲಕ್ಕಿಂತ ಹೆಚ್ಚಾಗಿ ಕಾರ್ಖಾನೆ ಆರಂಭಕ್ಕೆ ಬಹುದೊಡ್ಡ ಹೋರಾಟ ಮಾಡಿದ್ದು ಮಳವಳ್ಳಿ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಡಾ.ಕೆ.ಅನ್ನದಾನಿ.ಹೌದು. ಮೈಷುಗರ್ ಸರ್ಕಾರಿ ಸ್ವಾಮ್ಯದಲ್ಲೇ ನಡೆಯಬೇಕು. ಶೀಘ್ರ ಪುನರಾಂಭವಾಗಬೇಕೆಂದು ಹಲವರು ಹಲವು ರೀತಿಯಲ್ಲಿ ಹೋರಾಟ ಮಾಡಿದರೆ ಡಾ.ಕೆ. ಅನ್ನದಾನಿ ಒಂದು ಹೆಜ್ಜೆ ಮುಂದೆ ಹೋಗಿ. ಕಳೆದ ಎಂಟು ತಿಂಗಳ ಹಿಂದೆ ಮಳವಳ್ಳಿಯಿಂದ ಮಂಡ್ಯದವರೆಗೆ ಪಾದಯಾತ್ರೆ ಹಮ್ಮಿಕೊಂಡಿದ್ದರು. ಬೆಳಿಗ್ಗೆ ಮಳವಳ್ಳಿ ಪಟ್ಟಣದಿಂದ ಆರಂಭವಾದ ಪಾದಯಾತ್ರೆ ಮಳವಳ್ಳಿ, ಹಿಟ್ಟನಹಳ್ಳಿ ಕೊಪ್ಪಲು, ಹನಿಯಂಬಾಡಿ, ಹೊಸಹಳ್ಳಿ ಮಾರ್ಗವಾಗಿ ಮಂಡ್ಯದ ಡಿಸಿ ಕಚೇರಿ ತಲುಪಿತು.

ಅಂದು ಭಾರೀ ಮಳೆಯಿದ್ದರೂ ಎದೆಗುಂದದ ಶಾಸಕರು, ರೈತರಿಗಾಗಿ ಮೈಷುಗರ್ ಆರಂಭವಾಗಲೇಬೇಕೆಂದು 40 ಕಿಲೋ ಮೀಟರ್ ನಡೆದಿದ್ದರು. ಶಾಸಕರಿಗೆ ಮಳವಳ್ಳಿ, ಮಂಡ್ಯ, ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಾವಿರಾರು ಜೆಡಿಎಸ್ ಕಾರ್ಯಕರ್ತರು ಸಾಥ್ ನೀಡಿದ್ದರು. ಈ ಪಾದಯಾತ್ರೆ ಸರ್ಕಾರದ ಗಮನ ಸೆಳೆಯಿತು. ಇದಾದ ಕೆಲವೇ ದಿನಗಳಲ್ಲಿ ಕಾರ್ಖಾನೆಗೆ ಪುನರಾರಂಭಕ್ಕೆ ಸರ್ಕಾರ 50 ಕೋಟಿ ಮೀಸಲಿಟ್ಟು, ಮೊನ್ನೆ ಕಾರ್ಖಾನೆ ಪುನರಾರಂಭವಾಗಿದೆ. ಪುನರಾರಂಭ ಕಾರ್ಯಕ್ರಮದಲ್ಲಿ ಸಚಿವ ಕೆ.ಸಿ.ನಾರಾಯಣಗೌಡ ಅನ್ನದಾನಿ ಪಾದಯಾತ್ರೆಯನ್ನು ಶ್ಲಾಘಿಸಿದ್ದರು.

ಇದರ ಜೊತೆಗೆ ಮಳವಳ್ಳಿ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶಾಸಕ ಡಾ.ಕೆ. ಅನ್ನದಾನಿ ಅವರು ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಮೊದಲ ಬಾರಿ ಶಾಸಕರಾಗಿದ್ದ ಸಂದರ್ಭದಲ್ಲಿ ತಾಲೂಕಿಗೆ ವಿವಿಧ ಯೋಜನೆಗಳನ್ನು ಜಾರಿಗೊಳಿಸಿದ್ದರು. ಅದನ್ನು ನಂತರ ಎರಡನೇ ಬಾರಿಗೆ ಶಾಸಕರಾದ ಬಳಿಕ ಯೋಜನೆಗಳನ್ನು ಪೂರ್ಣಗೊಳಿಸಲು ಮುಂದಾಗಿದ್ದಾರೆ.

ರಸ್ತೆ, ಶುದ್ಧ ಕುಡಿಯುವ ನೀರು, ಅಂಬೇಡ್ಕರ್ ಭವನಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ, ಕನಕ ಭವನ ನಿರ್ಮಾಣಕ್ಕೆ ಚಾಲನೆ, ಕೆರೆಗಳಿಗೆ ನೀರು, ಜಲಜೀವನ್ ಮಿಷನ್‌ಗೆ ಚಾಲನೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದಾರೆ. ಅಲ್ಲದೆ, ಬಾಕಿ ಇರುವ ಯೋಜನೆಗಳನ್ನು ಪೂರ್ಣಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದಾರೆ. ಅಲ್ಲದೆ, ತಾಲೂಕಿನ ಗ್ರಾಮಗಳ ಅಭಿವೃದ್ಧಿಗೆ ಒತ್ತು ನೀಡಿದ್ದಾರೆ.

ಮಳವಳ್ಳಿ ತಾಲೂಕಿಗೆ ತಂದ ಯೋಜನೆಗಳು

ಮಳವಳ್ಳಿ ತಾಲೂಕಿನ ಹಲಗೂರು ಹೋಬಳಿಯ ವ್ಯಾಪ್ತಿಗೆ ಹನಿ ನೀರಾವರಿ ಯೋಜನೆ 200 ಕೋಟಿ ರೂ. ವೆಚ್ಚದ ಕಾಮಗಾರಿ, 8.27 ಕೋಟಿ ರೂ. ವೆಚ್ಚದಲ್ಲಿ ಬೆಳಕವಾಡಿಯ ಮಾಧವ ಮಂತ್ರಿ ನಾಲೆಯ ಆಧುನೀಕರಣ, 70 ಲಕ್ಷ ರೂ. ವೆಚ್ಚದಲ್ಲಿ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಕೃತಕ ಆಮ್ಲಜನಕ ಘಟಕ ಸ್ಥಾಪನೆ, 30 ಕೋಟಿ ರೂ. ವೆಚ್ಚದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಕಾರ್ಯಾಗಾರ, 36 ಲಕ್ಷ ರೂ. ವೆಚ್ಚದಲ್ಲಿ ಹಲಗೂರು ಹಾಗೂ ಕಿರುಗಾವಲು ಆಸ್ಪತ್ರೆಗಳಿಗೆ ಎರಡು ಆಂಬ್ಯುಲೆನ್ಸ್ ಬಿಡುಗಡೆ, 1 ಕೋಟಿ ರೂ. ವೆಚ್ಚದಲ್ಲಿ ಕನಕ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ, 7.80 ಕೋಟಿ ರೂ. ವೆಚ್ಚದಲ್ಲಿ ಬ್ಯಾಡರಹಳ್ಳಿ ಏತ ನೀರಾವರಿ ಯೋಜನೆ, 78 ಲಕ್ಷ ರೂ. ವೆಚ್ಚದಲ್ಲಿ ಪ್ರಥಮ ದರ್ಜೆ ಕಾಲೇಜಿನ ಮೊದಲ ಅಂತಸ್ತು ನಿರ್ಮಾಣ, 18 ಕೋಟಿ ರೂ. ವೆಚ್ಚದಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮೇಲ್ದರ್ಜೆ ಕಾಮಗಾರಿ, 32 ಕೋಟಿ ರೂ. ವೆಚ್ಚದಲ್ಲಿ ಅಕ್ರಮ-ಸಕ್ರಮ ಯೋಜನೆಯಡಿ ಐಪಿ ಸೆಟ್ ಮೂಲಭೂತ ಸೌಕರ್ಯ, 49 ಕೋಟಿ ರೂ. ವೆಚ್ಚದಲ್ಲಿ ಕಾವೇರಿ ನೀರಾವರಿ ನಿಗಮದ ನಾಲೆ ಆಧುನೀಕರಣ ಸೇರಿದಂತೆ ವಿವಿಧ ಕಾಮಗಾರಿಗಳನ್ನು ನಡೆಸಲಾಗಿದೆ. 3 ಕೋಟಿ ರೂ. ವೆಚ್ಚದಲ್ಲಿ ಹಾಡ್ಲಿ ಹಾಗೂ ಯತ್ತಂಬಾಡಿ ಗ್ರಾಮದಲ್ಲಿ ಅಡಚಣೆ ರಹಿತ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪನೆ, ಮಳವಳ್ಳಿ ಪಟ್ಟಣದಲ್ಲಿ ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ, ಹುಸ್ಕೂರು ಹಾಗೂ ನಿಟ್ಟೂರು ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು, ಬೆಳಕವಾಡಿ ಹಾಗೂ ಹಲಗೂರು ಗ್ರಾಮಗಳಿಗೆ ಸಾರಿಗೆ ಬಸ್ ನಿಲ್ದಾಣ, ಮಳವಳ್ಳಿ-ಮದ್ದೂರು ಮುಖ್ಯರಸ್ತೆ ಅಗಲೀಕರಣ, ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ, ಸ್ಲಂ ಬೋರ್ಡ್‌ನಿಂದ 500 ಮನೆಗಳ ನಿರ್ಮಾಣ, ಪಟ್ಟಣದಲ್ಲಿ ಅಂಬೇಡ್ಕರ್ ಭವನ ಹಾಗೂ ಕನಕದಾಸ ಕ್ರೀಡಾಂಗಣ ಅಭಿವೃದ್ಧಿಗೆ ನಿವೇಶನ ಮಂಜೂರಾತಿ, ಚಿಕ್ಕಬಾಗಿಲು, ಸರಗೂರು, ಹೊಸಹಳ್ಳಿ ಗ್ರಾಮಗಳಿಗೆ ಪ್ರೌಢಶಾಲೆಗಳ ಮಂಜೂರಾತಿ, ಸುವರ್ಣ ಗ್ರಾಮ ಯೋಜನೆಯಡಿ ವಿವಿಧ ಗ್ರಾಮಗಳ ಅಭಿವೃದ್ಧಿ, ಬಿ.ಜಿ.ಪುರ ಹೋಬಳಿಯ 56 ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆ ಸೇರಿದಂತೆ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ.



ಮೈಷುಗರ್‌ಗಾಗಿ ಶಾಸಕರ ಪಾದಯಾತ್ರೆ

ಮಾಜಿ ಸಿಎಂ ಕುಮಾರಸ್ವಾಮಿಯ ಅತ್ಯಾಪ್ತ

ಮಂಡ್ಯ ಜಿಲ್ಲೆಯ ಜೆಡಿಎಸ್ ಶಾಸಕರ ಪೈಕಿ ಡಾ.ಕೆ.ಅನ್ನದಾನಿ ಎಂದರೆ ಕುಮಾರಸ್ವಾಮಿ ಅವರಿಗೆ ಎಲ್ಲಿಲ್ಲದ ಪ್ರೀತಿ. ಅದೆಷ್ಟೋ ವೇದಿಕೆಗಳಲ್ಲಿ ಅನ್ನದಾನಿ ಅವರನ್ನ ಸ್ವತ: ನನ್ನ ತಮ್ಮನಂತೆ ಎಂದು ಹೇಳಿದ್ದು ಉಂಟು. ಕುಮಾರಸ್ವಾಮಿ ಸಿಎಂ ಆಗಿದ್ದ ಅವಧಿಯಲ್ಲಿ ಮಳವಳ್ಳಿಗೆ ಅಭಿವೃದ್ಧಿಗಾಗಿ ಅನೇಕ ಅನುದಾನವನ್ನು ಕೊಟ್ಟಿದ್ದಾರೆ. 2008ರ ಸಮ್ಮಿಶ್ರ ಸರ್ಕಾರದಲ್ಲಿ ಅನ್ನದಾನಿ ಅವರನ್ನು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರನ್ನಾಗಿಯೂ ಕುಮಾರಸ್ವಾಮಿ ಮಾಡಿದ್ದರು.



ಕೊರೋನಾ ಸಂದರ್ಭದಲ್ಲಿ ಕೋವಿಡ್ ಸೆಂಟರ್‌ನಲ್ಲಿ ಕೊರೋನಾ ಸೋಂಕಿತರಿಗೆ ಸ್ವತ: ಶಾಸಕರೇ ಹಾಡನ್ನು ಹೇಳಿ ಮನರಂಜಿಸುತ್ತಿರುವುದು.

ಗ್ರಾಮ ವಾಸ್ತವ್ಯ: ಮೊದಲು ಹಾಗೂ ಎರಡನೇ ಬಾರಿ ಶಾಸಕರಾಗಿ ಆಯ್ಕೆಯಾದ ಬಳಿಕ ಡಾ.ಕೆ.ಅನ್ನದಾನಿ ಅವರು, ಗ್ರಾಮ ವಾಸ್ತವ್ಯ ಹೂಡುವ ಮೂಲಕ ಗ್ರಾಮಗಳ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಕೆಲಸ ಮಾಡುತ್ತಿದ್ದಾರೆ. ಗ್ರಾಮಗಳಲ್ಲಿ ರಾತ್ರಿ ವಾಸ್ತವ್ಯ ಹೂಡುವ ಶಾಸಕರು ಗ್ರಾಮಸ್ಥರ ಸಭೆ ನಡೆಸಿ ಗ್ರಾಮಕ್ಕೆ ಬೇಕಾದ ಅಗತ್ಯ ಸೌಲಭ್ಯ, ರೈತರ ಸಮಸ್ಯೆಗಳನ್ನು ಆಲಿಸಿ ಬಗೆಹರಿಸುವ ಕೆಲಸ ಮಾಡುತ್ತಿದ್ದಾರೆ.

ಗ್ರಾಮಗಳ ಅಭಿವೃದ್ಧಿಗೆ ಒತ್ತು

ಮಳವಳ್ಳಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 289.86 ಲಕ್ಷ ರೂ. ವೆಚ್ಚದ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಗ್ರಾಮಗಳ ಅಭಿವೃದ್ಧಿಗೆ ಒತ್ತು ನೀಡಿದ್ದಾರೆ. ಸಿಸಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ, ಬಿ.ಆರ್.ಅಂಬೇಡ್ಕರ್ ಭವನಗಳ ನಿರ್ಮಾಣ ಕಾಮಗಾರಿ, ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ 249.86 ಲಕ್ಷ ರೂ. ವೆಚ್ಚದಲ್ಲಿ ತಾಲೂಕಿನ ವಿವಿಧ ಗ್ರಾಮಗಳ 802 ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸುವ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಇದರ ಜತೆಗೆ ಮಳವಳ್ಳಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ 45 ಲಕ್ಷ ರೂ. ವೆಚ್ಚದ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ.



ಅಭಿವೃದ್ಧಿ ಕಾಮಗಾರಿಯೊಂದಕ್ಕೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ನೇತೃತ್ವದಲ್ಲಿ ಗುದ್ದಲಿ ಪೂಜೆ ಮಾಡುತ್ತಿರುವ ಶಾಸಕ ಅನ್ನದಾನಿ.

ಗಗನಚುಕ್ಕಿ ಜಲಪಾತೋತ್ಸವ ತಂದ ಕೀರ್ತಿ:

ಮೊದಲ ಬಾರಿಗೆ ಶಿವನಸಮುದ್ರ ಗಗನಚುಕ್ಕಿ ಜಲಪಾತೋತ್ಸವ ಆಚರಿಸಿದ ಕೀರ್ತಿ ಡಾ.ಕೆ.ಅನ್ನದಾನಿ ಅವರಿಗೆ ಸಲ್ಲುತ್ತದೆ. ಕುಮಾರಸ್ವಾಮಿ ಮೊದಲ ಬಾರಿಗೆ ಸಿಎಂ ಆದಾಗ 2005ರಲ್ಲಿ ಅದ್ದೂರಿಯಾಗಿ ಜಲಪಾತೋತ್ಸವ ನಡೆಸಿ, ರಾಜ್ಯದ ಗಮನ ಸೆಳೆದಿದ್ದರು. ಗಗನಚುಕ್ಕಿ ಜಲಪಾತೋತ್ಸವ ನಡೆಸುವ ಸ್ಥಳವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ 7 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಕಳೆದ ಎರಡು ವರ್ಷಗಳಿಂದ ಕೊರೋನಾ ಹಿನ್ನಲೆಯಲ್ಲಿ ಜಲಪಾತೋತ್ಸವ ನಡೆದಿಲ್ಲ. ಈ ಬಾರಿ ಅದ್ದೂರಿಯಾಗಿ ಜಲಪಾತೋತ್ಸವ ನಡೆಸಲು ಅನ್ನದಾನಿ ತೀರ್ಮಾನಿಸಿದ್ದಾರೆ.

ಸೋಂಕಿತರಿಗೆ ಆತ್ಮಸ್ಥೈರ್ಯ ತುಂಬಿದ ಶಾಸಕ: ಕೊರೊನಾ ಮೊದಲ ಹಾಗೂ ಎರಡನೇ ಅಲೆಯಲ್ಲಿ ಸೋಂಕಿತರಿಗೆ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು. ಅಲ್ಲದೆ, ಆಸ್ಪತ್ರೆಗಳಲ್ಲೂ ಆಕ್ಸಿಜನ್ ಕೊರತೆಯಾಗದಂತೆ ಕ್ರಮ ವಹಿಸಲು ತಾಲೂಕಿನಲ್ಲಿಯೇ ವಾಸ್ತವ್ಯ ಹೂಡಿ ಸೋಂಕಿತರ ಕಷ್ಟಗಳಿಗೆ ಸ್ಪಂದಿಸಿದರು. ಅಲ್ಲದೆ, ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಸೋಂಕಿತರಿಗೆ ಆತ್ಮಸ್ಥೈರ್ಯ ತುಂಬಲು ಸಂಗೀತ ಮನರಂಜನೆ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ತಾವೇ ಖುದ್ದಾಗಿ ಹಾಡು-ನೃತ್ಯ ಮಾಡಿ ರಂಜಿಸುವ ಮೂಲಕ ಸೋಂಕಿತರೊಂದಿಗೆ ನಾವಿದ್ದೇವೆ ಯಾವುದೇ ಆತಂಕ ಬೇಡ ಎಂಬ ಮನೋಸ್ಥೈರ್ಯ ತುಂಬಿದರು. ಅಲ್ಲದೆ, ಬಡವರು, ನಿರ್ಗತಿಕರು, ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಕಾರ್ಮಿಕರು, ಅಂಗವಿಕಲರು, ಕಲಾವಿದರು, ದಿನಗೂಲಿ ನೌಕರರು, ಪೌರಕಾರ್ಮಿಕರು ಸೇರಿದಂತೆ ಮುತ್ತತ್ತಿಯ ಕಾಡಂಚಿನ ಗ್ರಾಮಗಳಿಗೆ ತೆರಳಿ ಸಮಸ್ಯೆ ಆಲಿಸಿ ಆಹಾರ ಕಿಟ್‌ಗಳನ್ನು ವಿತರಿಸಿದ್ದಾರೆ. ಜೊತೆಗೆ ಮುತ್ತತ್ತಿಯ ಕಾಡಂಚಿನ ಪ್ರಾಣಿಗಳಿಗೆ ಮೂರು ದಿನಕ್ಕೊಮ್ಮೆ ತೆರಳಿ ಸ್ವತ: ಶಾಸಕರೇ ಹಣ್ಣು, ಬ್ರೆಡ್ ಹಂಚಿ ಬರುತ್ತಿದ್ದರು. ಪ್ರವಾಸಿಗರು ಹಾಕುತ್ತಿದ್ದ ಆಹಾರದಿಂದಲೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಪ್ರಾಣಿಗಳು ಆಹಾರವಿಲ್ಲದೇ ಸೊರಗಿದಾಗ ಅವುಗಳಿಗೆ ಆಹಾರ ಒದಗಿಸುವ ಕಾರ್ಯಕ್ಕೆ ಶಾಸಕರು ಮುಂದಾಗಿದ್ದರು.









ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 15 ಸೋಮವಾರ 2022

ಸಂಪುಟ: 43 | ಸಂಚಿಕೆ: 121 | ಪುಟಗಳು: 12 + XII

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

75 ವರ್ಷಗಳಾದರೂ, ನಮ್ಮದು ನಿಷ್ಕ್ರಿಯ **ಪ್ರಜಾಪ್ರಭುತ್ವ...!** ■ ಪುಟ–4

ಜಗತ್ತಿಗೆ ಪ್ರಜಾಪ್ರಭುತ್ವದ ಸಾಮರ್ಥ್ಯ ತಿಳಿಸಿದ ಕೀರ್ತಿ

ಭಾರತಕ್ಕೆ ಸಲ್ಲುತ್ತದೆ

ರಾಷ್ಟ್ರಪತಿ ದ್ರೌಪದಿ ಮುರ್ಮು, ಭಾಷಣದಲ್ಲಿ ರಾಷ್ಟ್ರಕವಿ ಕುವೆಂಪು ಕರೆ ಉಲ್ಲೇಖ



ನವದೆಹಲಿ: ಪ್ರಜಾಪ್ರಭುತ್ವದ ನಿಜವಾದ ಸಾಮರ್ಥ್ಯ ತಿಳಿಯಲು ಜಗತ್ತಿಗೆ ಸಹಾಯ ಮಾಡಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಅವರು ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನದಂದು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಚೊಚ್ಚಲ ಭಾಷಣ ದಲ್ಲಿ, ಹಲವು ವಿಚಾರಗಳ ಕುರಿತು ಮಾತನಾಡಿದ್ದಾರೆ. 'ದೇಶದ ಆರ್ಥಿಕತೆ ಕ್ಷಿಪ್ರ ಗತಿಯಲ್ಲಿ ಪ್ರಗತಿ ಕಾಣುತ್ತಿದೆ. ಸ್ವಾತಂತ್ರ್ಯ ದಿನವನ್ನು ಆಚರಿಸುವಾಗ ನಾವು 'ಭಾರತೀಯತೆ' ಯನ್ನು ಆಚರಿಸುತ್ತೇವೆ. ಭಾರತವು ವೈವಿಧ್ಯತೆಯಿಂದ ಕೂಡಿದೆ. 'ಏಕ ಭಾರತ, ಶ್ರೇಷ್ಠ ಭಾರತ' ಎಂಬ ಪರಿಕಲ್ಪನೆಯು ಒಗ್ಗಟ್ಟಾಗಿ ಮುಂದೆ ಸಾಗಲು ಪ್ರೇರೇಪಿಸುತ್ತದೆ ಎಂದು ಹೇಳಿದರು.

76ನೇ ಸ್ವಾತಂತ್ರ್ಯ ದಿನದ ಈ ಸಂದರ್ಭದಲ್ಲಿ ವಸಾಹತುಶಾಹಿ ಆಡಳಿತದಿಂದ ದೇಶವನ್ನು ಮುಕ್ತಗೊಳಿಸಿದ ಸ್ವಾತಂತ್ರ್ಯ ಹೋರಾಟಗಾರರ ಅಪಾರ ತ್ಯಾಗವನ್ನು ದ್ರೌಪದಿ ಮುರ್ಮು ಸ್ಮರಿಸಿದರು. ಸ್ವಾತಂತ್ರ್ಯ ದಿನವು ನಮ್ಮೆಲ್ಲರಿಗೂ ಮಾತ್ರವಲ್ಲದೆ ಪ್ರಪಂಚದಾದ್ಯಂತದ ಪ್ರತಿಯೊಬ್ಬ ಪ್ರಜಾಪ್ರಭುತ್ವದ ಪ್ರತಿಪಾದಕರಿಗೂ ಸಂಭ್ರಮಾಚರಣೆಯಾಗಿದೆ. ಭಾರತವು ಸ್ವಾತಂತ್ರ್ಯವನ್ನು ಗೆದ್ದಾಗ, ಪ್ರಜಾಪ್ರಭುತ್ವದ ಸರ್ಕಾರದ ಯಶಸ್ಸಿನ ಬಗ್ಗೆ ಸಂಶಯ ವ್ಯಕ್ತಪಡಿಸಿದ ಅನೇಕ ಅಂತರರಾಷ್ಟ್ರೀಯ ನಾಯಕರು ಮತ್ತು ತಜ್ಞರು ಇದ್ದರು. ಅವರು ಅನುಮಾನಿಸಲು ಕಾರಣ ಗಳಿದ್ದವು. ಆ ದಿನಗಳಲ್ಲಿ ಪ್ರಜಾಪ್ರಭುತ್ವವು ಆರ್ಥಿಕವಾಗಿ ಮುಂದುವರಿದ ರಾಷ್ಟ್ರಗಳಿಗೆ ಸೀಮಿತವಾಗಿತ್ತು. ಭಾರತವು ವಿದೇಶಿ ಆಡಳಿತಗಾರರಿಂದ ಹಲವು ವರ್ಷಗಳ ಶೋಷಣೆಯ ನಂತರ ಬಡತನ ಮತ್ತು ಅನಕ್ಷರತೆಯಿಂದ ಗುರುತಿಸಲ್ಪಟ್ಟಿದೆ. ಆದರೆ ನಾವು ಭಾರತೀಯರು ಸಂದೇಹವಾದಿಗಳನ್ನು ಸಾಬೀತುಪಡಿಸಿದ್ದೇವೆ. ತಪ್ಪು, ಪ್ರಜಾಪ್ರಭುತ್ವವು ಈ ಮಣ್ಣಿನಲ್ಲಿ ಬೇರುಗಳನ್ನು ಮಾತ್ರ ಬೆಳೆಸಲಿಲ್ಲ, ಆದರೆ ಅದು ಸಮೃದ್ಧವಾಗಿದೆ ಎಂದರು.

'ಕೋವಿಡ್ ಸಂಕಷ್ಟದ ಬಳಿಕ ಭಾರತವು ಕ್ಷಿಪ್ರ ಗತಿಯಲ್ಲಿ ಪ್ರಗತಿ ಸಾಧಿಸುತ್ತಿರುವುದನ್ನು ಜಗತ್ತು ಗಮನಿಸುತ್ತಿದೆ. ಪ್ರಾದೇಶಿಕ ಅಸಮಾನತೆ ಕಡಿಮೆಯಾಗುತ್ತಿದೆ. ಸಂಕಷ್ಟದ ಸಮಯದಲ್ಲೂ ದೇಶದ ಏಳಿಗೆಗಾಗಿ ಪ್ರಯತ್ನ ಮಾಡಿದ್ದಕ್ಕಾಗಿ ಸರ್ಕಾರ ಮನ್ನಣೆಗೆ ಅರ್ಹವಾಗಿದೆ. ಕೋವಿಡ್ ಸಂಕಷ್ಟದ ನಡುವೆ ಇತಿಹಾಸದಲ್ಲೇ ಅತಿದೊಡ್ಡ ಲಸಿಕೆ ಅಭಿಯಾನವನ್ನು ಪ್ರಾರಂಭಿಸಿದ್ದೇವೆ. 200 ಕೋಟಿ ಡೋಸ್‌ಗಳ ಒಟ್ಟು ಲಸಿಕೆ ವ್ಯಾಪ್ತಿಯನ್ನು ದಾಟಿದ್ದೇವೆ. ಲಿಂಗ ಅಸಮಾನತೆ ಕಡಿಮೆಯಾಗುತ್ತಿದೆ. ಹೆಣ್ಣು ಮಕ್ಕಳು ದೇಶದ ಭವಿಷ್ಯದ ದೊಡ್ಡ ಭರವಸೆಯಾಗಿದ್ದಾರೆ. ಆಧುನಿಕ ಭಾರತದ ನಿರ್ಮಾಪಕರು ಪ್ರತಿಯೊಬ್ಬ ವಯಸ್ಕ ನಾಗರಿಕರಿಗೂ ರಾಷ್ಟ್ರ ನಿರ್ಮಾಣದ ಸಾಮೂಹಿಕ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟರು ಈ ಕೀರ್ತಿ ಭಾರತಕ್ಕೆ ಸಲ್ಲುತ್ತದೆ ಎಂದು ಪ್ರತಿಪಾದಿಸಿದರು. ಪ್ರಜಾಪ್ರಭುತ್ವದ ನಿಜವಾದ ಸಾಮರ್ಥ್ಯವನ್ನು ಕಂಡು ಹಿಡಿಯಲು ಜಗತ್ತಿಗೆ ಸಹಾಯ ಮಾಡಿದೆ ಎಂದು ಹೇಳಿದ್ದಾರೆ. ಪ್ರಜಾಪ್ರಭುತ್ವದ ನೈಜ ಸಾಮರ್ಥ್ಯವನ್ನು ಕಂಡು ಹಿಡಿಯಲು ಜಗತ್ತಿಗೆ ಸಹಾಯ ಮಾಡಿದ ಕೀರ್ತಿ ಭಾರತಕ್ಕೆ ಸಲ್ಲುತ್ತದೆ. ಪ್ರಜಾಪ್ರಭುತ್ವವು ದೇಶದ ಮಣ್ಣಿನಲ್ಲಿ ಆಳವಾಗಿ ಬೇರೂರಿದ್ದು, ಶ್ರೀಮಂತವಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯು ಮುಂದಿನ ಹಂತದ ಕೈಗಾರಿಕಾ ಕ್ರಾಂತಿಗೆ ಭವಿಷ್ಯದ ಪೀಳಿಗೆಯನ್ನು ಸಿದ್ಧಪಡಿಸುವ ಗುರಿಯನ್ನು ಹೊಂದಿದ್ದು, ದೇಶದ ಪರಂಪರೆಯೊಂದಿಗೆ ಮರು ಸಂಪರ್ಕಿಸುತ್ತದೆ. ಅನೇಕ ವೀರರು ಹಾಗೂ ಅವರ ಹೋರಾಟವನ್ನು ಮರೆತು ಬಿಟ್ಟಿದ್ದೇವೆ. ವಿಶೇಷವಾಗಿಯೂ ಬುಡಕಟ್ಟು ಜನಾಂಗದ ನಾಯಕರು ಪ್ರಾದೇಶಿಕ ಐಕಾನ್‌ಗಳಾಗಿದ್ದಾರೆ. ನವೆಂಬರ್ 15 ಅನ್ನು 'ಜನಜಾತಿಯ ಗೌರವ ದಿವಸ'ವಾಗಿ ಆಚರಿಸಲು ಸರ್ಕಾರ ನಿರ್ಧರಿಸಿರುವುದು ಸ್ವಾಗತಾರ್ಹವಾಗಿದೆ ಎಂದು ಮುರ್ಮು ಹೇಳಿದ್ದಾರೆ. ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ದೇಶಕ್ಕೆ ▶ 10ನೇ ಪುಟಕ್ಕೆ

ಆಜಾದಿ ಕಾ ಅಮೃತ್ ಮಹೋತ್ಸವ

ಶುಭಾಶಯಗಳು ಹಾಗೂ ಬಿಡುವು

'ಮೈಸೂರು ಮಿತ್ರ' ಓದುಗರಿಗೆ 75ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು.

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಆ. 15, 2022 ರಂದು ನಮ್ಮ ಕಚೇರಿಗೆ ರಜೆ ಘೋಷಿಸಲಾಗಿದ್ದು, ಆ.16ರ **ಮೈಸೂರು ಮಿತ್ರ** ಸಂಚಿಕೆ ಪ್ರಕಟವಾಗುವುದಿಲ್ಲ.

– ವ್ಯವಸ್ಥಾಪಕರು

ಪ್ರಿಯ ಓದುಗರೇ,

ಇಂದಿನ ಸಂಚಿಕೆಯೊಂದಿಗೆ ಸ್ವಾತಂತ್ರ್ಯದ ಮಹತ್ವವನ್ನು ಸಾರುವ ಮಹಾಪುರುಷರು, ಸ್ಥಳ ಹಾಗೂ ಚಾರಿತ್ರಿಕ ಘಟನಾವಳಿಗಳನ್ನು ಒಳಗೊಂಡ 12 ಪುಟಗಳ ಸ್ವಾತಂತ್ರ್ಯ ಅಮೃತ ಮಹೋತ್ಸವದ ವರ್ಣರಂಜಿತ ವಿಶೇಷಾಂಕವನ್ನು ನೀಡುತ್ತಿದ್ದೇವೆ. –ಸಂ.

ಅದ್ಧೂರಿ ಸ್ವಾತಂತ್ರ್ಯೋತ್ಸವಕ್ಕೆ ಮೈಸೂರು ಸಜ್ಜು



ಮೈಸೂರು, ಆ.14(ಎಸ್‌ಪಿಎನ್)– ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಮೈಸೂರು ಜಿಲ್ಲಾಡಳಿತದ ವತಿಯಿಂದ ಆ.15 ರಂದು ಬೆಳಗ್ಗೆ 9 ಗಂಟೆಗೆ ಬನ್ನಿಮಂಟಪದ ಪಂಜಿನ ಕವಾಯಿತು ಮೈದಾನದಲ್ಲಿ ಅದ್ಧೂರಿಯಾಗಿ 76ನೇ ಸ್ವಾತಂತ್ರ್ಯೋತ್ಸವ ದಿನ ಆಚರಿಸಲು ಸಜ್ಜಾಗಿದೆ. ಕಳೆದೆರಡು ವರ್ಷ ಕೊರೊನಾದಿಂದಾಗಿ ಸರಳವಾಗಿ ಆಚರಣೆ ಮಾಡಲಾಗಿತ್ತು. ಈ ವೇಳೆ ಸಾರ್ವಜನಿಕರಿಗೆ ಪ್ರವೇಶವಿರಲಿಲ್ಲ. ಪ್ರಸ್ತುತ ಸೋಂಕು ಇಳಿಕೆ ಆಗಿರುವ ಹಿನ್ನೆಲೆಯಲ್ಲಿ ಈ ಬಾರಿ ಎಂದಿನಂತೆ ಆಚರಣೆ ಮಾಡಲಾಗುತ್ತಿದೆ. ಸ್ವಾತಂತ್ರ್ಯ ಬಂದು 75 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಅದ್ಧೂರಿ ಆಚರಣೆಗೆ ಜಿಲ್ಲಾಡಳಿತ ಎಲ್ಲಾ ಕ್ರಮ ಕೈಗೊಂಡಿದೆ. ಬೆಳಗ್ಗೆ 9 ಗಂಟೆಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಧ್ವಜಾರೋಹಣ ▶ 10ನೇ ಪುಟಕ್ಕೆ





ನಕ್ಕರೆ ಅದೇ ಸ್ವರ್ಗ

ಗುಂಡ : (ಎಲೆಕ್ಟ್ರಿಕ್ ಅಂಗಡಿಗೆ ಬಂದು) "ಒಂದು ಕಪ್ಪು ಬಲ್ಬ್ ಕೊಡಿ".
ಅಂಗಡಿಯವ : "ಕಪ್ಪು ಬಲ್ಬ್! ಅದ್ಯಾಕೆ ಸಾರ್?"
ಗುಂಡ : "ಮಧ್ಯಾಹ್ನದ ಹೊತ್ತು ಕತ್ತಲು ಮಾಡಿಕೊಂಡು ಟೈಮ್ ಪಾಸ್ ಮಾಡೋ ಮಜಾನೆ ಬೇರೆ ಗುರು".

ಮೈಸೂರು ಮಿತ್ರ

ಸೋಮವಾರ, 15 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಯಶಸ್ವಿಯಾಗುತ್ತೇನೆ ಎಂಬ ನಿರ್ಧಾರ ನಿಮ್ಮಲ್ಲಿ ಪ್ರಬಲವಾಗಿದ್ದರೆ ಸೋಲು ನಿಮ್ಮನ್ನು ಎಂದಿಗೂ ಹಿಮ್ಮೆಟ್ಟಿಸುವುದಿಲ್ಲ.

– ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹತ್ತೋಕೆ ಮೊದಲು ಕುದುರೆ ನೋಡು, ಬಿತ್ತೋಕೆ ಮೊದಲು ನೆಲ ನೋಡು.

ನಿಮ್ಮ ಪತ್ರಗಳು

ಪಡಿತರ ವಿತರಣೆಯಲ್ಲಿ ಲೋಪ

ಮಾನ್ಯರೆ,

ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ಪ್ರಧಾನಮಂತ್ರಿ ಗರೀಬ್ ಕಲ್ಯಾಣ್' ಯೋಜನೆಯಡಿ ಹಾಗೂ ಕರ್ನಾಟಕ ಸರ್ಕಾರದ ವತಿಯಿಂದ ಪಡಿತರದಾರರಿಗೆ ಪ್ರತೀ ತಿಂಗಳು ಆಹಾರ ಧಾನ್ಯಗಳನ್ನು ವಿತರಿಸುತ್ತಿರುವುದು ಸರಿಯಷ್ಟೆ. ಈ ಮೊದಲು ಆಹಾರ ಇಲಾಖೆಯಿಂದ ಪಡಿತರದಾರರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಪಡಿತರ ವಿತರಣೆಯ ಪ್ರಮಾಣದ ಮಾಹಿತಿ ತಿಂಗಳ ಮೊದಲನೇ ತಾರೀಖಿಗೆ ರವಾನೆಯಾಗುತ್ತಿತ್ತು. ಹಾಗೆಯೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಪಡೆದ ತಕ್ಷಣ ಮಾಹಿತಿಯೂ ದೊರಕುತ್ತಿತ್ತು. ಜೊತೆಗೆ 'ನೀವು ಪಡಿತರ ಪದಾರ್ಥವನ್ನು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಉಚಿತವಾಗಿ ಪಡೆಯಬಹುದು ಎಂಬುದಾಗಿಯೂ ಸಂದೇಶ ಬರುತ್ತಿದ್ದುದು ಪ್ರಮುಖ ಹಾಗೂ ಸಂತಸದ ವಿಚಾರ.



ಅಂತೆಯೇ ಮಾಹಿತಿಗಳೆಲ್ಲವೂ ರದ್ದಾಗಿ ವರ್ಷಗಳೇ ಕಳೆದಿವೆ. ಕಳೆದೆರಡು ವರ್ಷಗಳ ಹಿಂದೆ 'ಕೋವಿಡ್' ಎಂಬ ಮಹಾಮಾರಿ ನಮ್ಮ ಭಾರತ ದೇಶಕ್ಕೂ ದಾಳಿ ಇಟ್ಟಾಗ ಮಾತ್ರ ಪ್ರಧಾನ ಮಂತ್ರಿಗಳು ವಲಸೆ ಕಾರ್ಮಿಕರು ಹಾಗೂ ವಲಸೆ ಕುಟುಂಬಸ್ಥರು ತಾವು ವಾಸವಿರುವಲ್ಲಿಯೇ ಪಡಿತರ ಪಡೆಯುವ ಸಲುವಾಗಿ "ಒಂದು ದೇಶ ಒಂದು ಪಡಿತರ" ಎಂಬ ಮಹತ್ತರ ಯೋಜನೆಯನ್ನು ಜಾರಿಗೆ ತಂದರು. ಹಾಗೆಯೇ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆಯಡಿ ಪಡಿತರದಾರರ ಪ್ರತೀ ಸದಸ್ಯರಿಗೆ ತಿಂಗಳಿಗೆ 5 ಕೆಜಿ ಅಕ್ಕಿಯನ್ನು ಸಹ ವಿತರಿಸುತ್ತಿರುವುದು ಸ್ವಾಗತಾರ್ಹ. ಮುಖ್ಯವಾಗಿ ಕೇಂದ್ರ ಸರ್ಕಾರದ ಈ ಉಚಿತವಾದ ಅಕ್ಕಿ ಪಡಿತರದಾರರಿಗೆ ನಿಗದಿತ ಪ್ರಮಾಣದಲ್ಲಿ ದೊರಕುತ್ತಿಲ್ಲ. ಕೆಲವೊಂದು ಗ್ರಾಮೀಣ ಪ್ರದೇಶದ ನ್ಯಾಯ ಬೆಲೆ ಅಂಗಡಿಗಳಲ್ಲಿ ಅಕ್ಕಿಯ ಬದಲು ಪೂರ್ಣ ಪ್ರಮಾಣದಲ್ಲಿ ರಾಗಿಯನ್ನೇ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಾರೆ. ಹಾಗೂ ಅವರ ಮಾತಿಗೆ ಸಮ್ಮತಿಸದಿದ್ದಲ್ಲಿ ದೂರ ಪ್ರದೇಶದ ಅಥವಾ ಬೇರೆ ಊರಿನ ಪಡಿತರ ಚೀಟಿ ಹೊಂದಿದ್ದಲ್ಲಿ ಈ ಕಾರ್ಡು ನಮ್ಮ ಡಿಪೋವಿನದಲ್ಲ, ಹೋಗಿ ನಿಮ್ಮ ಡಿಪೋನಲ್ಲೇ ತೆಗೆದುಕೊಳ್ಳಿ ಎಂದು ಬೆದರಿಸುತ್ತಾರೆ. ಬೇರೆ ಗತಿ ಇಲ್ಲದೆ ಇವರು ಹೇಳಿದಂತೆ ಕೇಳಬೇಕಾಗಿದೆ. ಇದರಿಂದ ಕೇಂದ್ರ ಸರ್ಕಾರ ನೀಡುತ್ತಿರುವ ಅಕ್ಕಿ ದೊರಕದೆ, ಪಡಿತರದಾರರು ವಂಚಿತರಾಗುತ್ತಿದ್ದಾರೆ. ಈ ಬಗ್ಗೆ ಆಹಾರ ಇಲಾಖೆ ಎಚ್ಚೆತ್ತುಕೊಳ್ಳಬೇಕಿದೆ. ಮುಖ್ಯವಾಗಿ ಪಡಿತರ ಪ್ರಮಾಣದ ಮಾಹಿತಿ, ಪಡಿತರ ಪಡೆದ ನಂತರದ ಮಾಹಿತಿ ನೋಂದಾಯಿತ ಮೊಬೈಲ್ ಸಂಖ್ಯೆಗೆ ಸಂದೇಶದ ಮೂಲಕ ದೊರಕುವಂತೆ ಹಾಗೂ ನ್ಯಾಯಬೆಲೆ ಅಂಗಡಿಯವರು ಪಡಿತರ ನೀಡಿದ ಪ್ರಮಾಣವನ್ನು ಪಡಿತರ ಚೀಟಿಯಲ್ಲಿ ನಮೂದಿಸುವಂತೆ ಮತ್ತು ಯಾವುದೇ ಊರಿನ ಪಡಿತರ ಚೀಟಿಗೂ ತಾವು ವಾಸವಿರುವ ನ್ಯಾಯಬೆಲೆ ಅಂಗಡಿಯಲ್ಲೇ ಆಹಾರ ಇಲಾಖೆ ಸೂಚಿಸಿರುವ ಪ್ರಮಾಣದಲ್ಲಿ ಅಕ್ಕಿ, ರಾಗಿ ಸಿಗುವಂತೆ ಸಂಬಂಧ ಪಟ್ಟವರು ಗಮನಹರಿಸಬೇಕಾಗಿ ಮನವಿ.

– ವಿ.ದೇವರಾಜು, ಅಳಗಂಚಿ ಗ್ರಾಮ, ನಂಜನಗೂಡು ತಾ.

ಪೆಟ್ರೋಲ್ ಮತ್ತು ಡೀಸೆಲ್ ಕಲಬೆರಕೆ ತಡೆಗಟ್ಟಿ

ಮಾನ್ಯರೆ,

ಕರ್ನಾಟಕದಲ್ಲಿ ನಕಲಿ ಉತ್ಪನ್ನಗಳು ಮಾರುಕಟ್ಟೆ ವ್ಯಾಪಕವಾಗಿ ಹರಡಿರುವುದು ಮಾತ್ರವಲ್ಲದೆ ಅದು ನಮ್ಮ ವಾಹನದ ಇಂಧನ ಟ್ಯಾಂಕ್‌ಗೂ ತಲುಪಿದೆ.



ಮೊದಲೇ ಡೀಸೆಲ್ ಮತ್ತು ಪೆಟ್ರೋಲ್ ದರ ಗಗನಕ್ಕೇರಿದ್ದನ್ನು ಬಂಡವಾಳ ಮಾಡಿಕೊಂಡ ಕೆಲ ಕ್ರಿಮಿನಲ್‌ಗಳು ಕಲಬೆರಕೆಯನ್ನು ಕಲೆಬೆರಕೆಯನ್ನು ಹವ್ಯಾಹತವಾಗಿ ನಡೆಸುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ, ರಾಜ್ಯದಲ್ಲಿ ಅತೀ ಹೆಚ್ಚು ಇಂಧನ ಅದರಲ್ಲಿ ಮುಖ್ಯವಾಗಿ ಪೆಟ್ರೋಲ್ ಮತ್ತು ಡೀಸೆಲ್ ಕಲಬೆರಕೆ ಪ್ರಕರಣಗಳು ದಾಖಲಾಗಿವೆ, ಅವುಗಳಲ್ಲಿ ಯಾವುದೊಂದು ಮಾರಾಟ ಮಳಿಗೆಗಳನ್ನು ಗುರುತಿಸಿ ಶಾಶ್ವತವಾಗಿ ಮುಚ್ಚಲಾಗಿಲ್ಲ ಎಂಬುದು ದುಃಖಕರ ಸಂಗತಿ. ಇಂಧನದಲ್ಲಿನ ಕಲಬೆರಕೆಯು ವಾಹನಕ್ಕೆ ಹಾನಿ ಉಂಟು ಮಾಡುತ್ತಲ್ಲದೆ, ನಮ್ಮ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಕಲಬೆರಕೆ ಪೆಟ್ರೋಲ್ ಮತ್ತು ಡೀಸೆಲ್ ಅಪಾಯಕಾರಿ ಹೈಡ್ರೋಕಾರ್ಬನ್‌ಗಳು, ಕಾರ್ಬನ್ ಮಾನಾಕ್ಸೈಡ್, ಸಾರಜನಕದ ಆಕ್ಸೈಡ್‌ಗಳು, ಕಣಗಳ ಅಂಶವನ್ನು ಹೊರಸೂಸುತ್ತವೆ ಮತ್ತು ಗಾಳಿಯ ಹೆಚ್ಚಿನ ವಿಷಕಾರಿ ವಸ್ತುಗಳನ್ನು ಹೊರ ಹಾಕುವುದರಿಂದ ಮಾನವನ ದೇಹದಲ್ಲಿ ಕ್ಯಾನ್ಸರ್ ಮತ್ತಿತರ ಗಂಭೀರ ಆರೋಗ್ಯ ಸಮಸ್ಯೆ ತಂದೊಡ್ಡುತ್ತವೆ. ಇಂಧನ ಕಲಬೆರಕೆ ವಿರುದ್ಧ ಸರ್ಕಾರ ಕಠಿಣ ಕಾನೂನುಗಳನ್ನು ರೂಪಿಸಿದ್ದರೂ ಸಹ, ಭಾರತದಲ್ಲಿ ವಾರ್ಷಿಕವಾಗಿ ಸುಮಾರು 10,000 ಕೋಟಿ ರೂಪಾಯಿಗಳಷ್ಟು ನಷ್ಟವನ್ನು ಉಂಟುಮಾಡುತ್ತದೆ ಎಂದು ಕೇಂದ್ರ ಸ್ಪಷ್ಟಪಡಿಸಿದೆ. ಕೇಂದ್ರ ಸರ್ಕಾರವು ಮೋಟಾರ್ ಸ್ಪಿರಿಟ್ ಮತ್ತು ಹೈ–ಸ್ಪೀಡ್ ಡೀಸೆಲ್ ಆದೇಶ, 2005ರ ಅಗತ್ಯ ಸರಕುಗಳ ಕಾಯಿದೆ, 1955ರ ಅಡಿಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಕಲಬೆರಕೆಯಂತಹ ದುಷ್ಕೃತ್ಯಗಳ ವಿರುದ್ಧ ಕಠಿಣ ಕ್ರಮವನ್ನು ತೆಗೆದುಕೊಂಡರು ಏನೂ ಪ್ರಯೋಜನವಾಗಿಲ್ಲ ಅರ್ಥಾತ್ ಕಲಬೆರಕೆ ನಿಲ್ಲಿಸುವುದರಲ್ಲಿ ಸಫಲಗೊಂಡಿಲ್ಲ. ಹೀಗಾಗಿ ಇಂಧನ ಕಲಬೆರಕೆ ಶೀಘ್ರವಾಗಿ ನಿಲ್ಲಿಸಲು ಕೇಂದ್ರ ಮತ್ತು ರಾಜ್ಯ ಎಚ್ಚೆತ್ತುಕೊಳ್ಳಬೇಕು.

–ವಿಜಯಕುಮಾರ್ ಎಚ್.ಕೆ., ರಾಯಚೂರು

ಜಾಲತಾಣಗಳಿಗೆ ಅಂಕುಶ ಅನಿವಾರ್ಯ

ಮಾನ್ಯರೆ,

ಅಂತರ್ಜಾಲ ಅಥವಾ ಇಂಟರ್‌ನೆಟ್ ಈ ಪದ ಜಗತ್ತಿನ ಎಲ್ಲರಿಗೂ ಚಿರಪರಿಚಿತವಾಗಿದೆ ಜಾಗತಿಕ ಅಂಕಿ ಅಂಶದ ಪ್ರಕಾರ ಪ್ರಪಂಚದ ಜನಸಂಖ್ಯೆಯ ಶೇ. 69ರಷ್ಟು ಅಂದರೆ 4.9 ಬಿಲಿಯನ್ ಜನ ಅಂತರ್ಜಾಲವನ್ನು ಬಳಸುತ್ತಾರೆ. 2000ನೇ ದಶಕದ ನಂತರ ಮೊಬೈಲ್ ಫೋನ್‌ಗಳಲ್ಲಿನ ಅಭಿವೃದ್ಧಿ ಅಂತರ್ಜಾಲದ ಬಳಕೆಯನ್ನು ಸುಲಭಗೊಳಿಸಿತು. ಪ್ರಸ್ತುತ ಅಂತರ್ಜಾಲವನ್ನು ಬಳಸಿ, ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ವಾಟ್ಸಾಪ್, ಲಿಂಕ್ ಡೆನ್, ಇನ್‌ಸ್ಟಾಗ್ರಾಮ್, ಯೂಟ್ಯೂಬ್, ಟಿಕ್ ಟಾಕ್, ವಿಚಾಟ್, ಫ್ಲೀಕರ್, ಫೇಸ್‌ಬುಕ್ ಮೆಸೆಂಜರ್ ಮುಂತಾದವುಗಳನ್ನು ತಮ್ಮ ಅಭಿವೃದ್ಧಿಗೆ ಬಳಕೆ ಮಾಡುವ ಬದಲು ಬೇರೆಯವರ ತೇಜೋವಧೆಗೆ ಬಳಸುತ್ತಿರುವುದು ದುರದೃಷ್ಟಕರವಾಗಿದೆ.

ಈ ಸಾಮಾಜಿಕ ಮಾಧ್ಯಮಗಳ ಮೂಲಕ ಕೆಟ್ಟ ಕೆಟ್ಟ ಸಂದೇಶಗಳನ್ನು ಕಳುಹಿಸುವುದು, ಬೇರೆಯವರು ಹಾಕಿದ ಪೋಸ್ಟ್‌ಗಳಿಗೆ ಕೆಟ್ಟದಾಗಿ ಪ್ರತಿಕ್ರಿಯೆ ನೀಡುವುದು, ಈ ಮೂಲಕ ಮಾನಸಿಕವಾಗಿ ಹಿಂಸೆ ಮಾಡುವುದು, ಸಾಮಾಜಿಕ ಮಾಧ್ಯಮಗಳಲ್ಲಿನ ಖಾತೆಗಳಿಂದ ಚಿತ್ರಗಳನ್ನು ಬಳಸಿ ವಿರೂಪಗೊಳಿಸುವುದು ಮತ್ತು ಸಮಾಜಘಾತುಕ, ದೇಶವಿರೋಧಿ ಪೋಸ್ಟ್‌ಗಳನ್ನು ಮಾಡುವ ಮೂಲಕ ಸಮಾಜದಲ್ಲಿ ಅಶಾಂತಿ ಮೂಡಿಸುವುದು ಮುಂತಾದ ಬೆಳವಣಿಗೆಗಳು ಸಮಾಜಕ್ಕೆ ಮಾರಕವಾಗಿ ಪರಿಣಮಿಸಿದೆ. ಶೀಘ್ರವಾಗಿ ಸಾಮಾಜಿಕ ಮಾಧ್ಯಮಗಳನ್ನು ಸರ್ಕಾರ ನಿಯಂತ್ರಿಸುವ ಮೂಲಕ ಮಕ್ಕಳ ಉಜ್ವಲ ಭವಿಷ್ಯಕ್ಕೆ ತೊಂದರೆಯಾಗದಂತೆ ಎಚ್ಚರವಹಿಸಬೇಕು.

– ರಾಸುಮ ಭಟ್, ಚಿಕ್ಕಮಗಳೂರು.



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

75 ವರ್ಷಗಳಾದರೂ, ನಮ್ಮದು ನಿಷ್ಕ್ರಿಯ ಪ್ರಜಾಪ್ರಭುತ್ವ...!



'ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಈ ವ್ಯಂಗ್ಯ ಚಿತ್ರ 'ಚುನಾವಣೆಯಲ್ಲಿ ನಾಯಕನ ಸಾಮರ್ಥ್ಯಕ್ಕಿಂತ ಹಣ ಹಾಗೂ ಉಚಿತ ಕೊಡುಗೆಗಳು ಎಷ್ಟು ಮುಖ್ಯ' ಎಂಬುದನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತದೆ.

ಸ್ವತಂತ್ರ ದೇಶವಾಗಿ ಸ್ವಯಂ ಆಡಳಿತ ನಡೆಸಲು ಪ್ರಾರಂಭಿಸಿ 75 ವರ್ಷಗಳು ಕಳೆದಿವೆ. ನಾವು ಒಂದು ಪ್ರಜಾಸತ್ತಾತ್ಮಕ ಒಕ್ಕೂಟವಾಗಿ ಮುಂದುವರೆಯುತ್ತಿರುವುದಕ್ಕೆ ಹೆಮ್ಮೆಪಡಬೇಕು.

ವಿಭಿನ್ನತೆ ಹೊಂದಿರುವ ಒಂದು ದೇಶ ಇಷ್ಟೊಂದು ಸುದೀರ್ಘ ಕಾಲ ಏಕತೆಯಿಂದ ನಡೆದು ಬಂದಿರುವುದು ಸುಲಭದ ಮಾತಲ್ಲ. ಆದರೆ, ಎಲ್ಲಕ್ಕಿಂತ ಹೆಚ್ಚಾಗಿ ಹಣ ಮತ್ತು ಅಧಿಕಾರದತ್ತ ವಾಲುವ ನಮ್ಮ ಆಸಕ್ತಿ, ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಯಾವಾಗಲೂ ಕಾರ್ಯಹೀನವಾಗುವಂತೆ ಮಾಡಿದೆ.

ನಮ್ಮ ಅಧಿಕಾರಿ ವರ್ಗದವರು, ರಾಜಕಾರಣಿಗಳು ಮತ್ತು ವ್ಯಾಪಾರಸ್ಥರು ಮಾತ್ರ ಭ್ರಷ್ಟರು ಎನ್ನುವ ಒಂದು ತಪ್ಪು ಕಲ್ಪನೆ ನಮ್ಮಲ್ಲಿದೆ. ಆದರೆ ವಾಸ್ತವ ಸಂಗತಿ ಏನೆಂದರೆ, ಸಾಮಾನ್ಯ ಭಾರತೀಯನೂ ಸಹ ಭ್ರಷ್ಟನಾಗಿದ್ದಾನೆ. ಇದರಿಂದಾಗಿಯೇ ನಮ್ಮ ಪ್ರಜಾಪ್ರಭುತ್ವ ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ.

ಭಾರತದ ಮುಖ್ಯ ವಿಚಕ್ಷಣಾ ಆಯುಕ್ತ (Central Vigilance Commissioner)ರಾಗಿದ್ದ ಪ್ರತ್ಯುಶ್ ಸಿನ್ಹರವರು ಶೇಕಡಾ 30ರಷ್ಟು ಭಾರತೀಯರು ಸಂಪೂರ್ಣವಾಗಿ ಭ್ರಷ್ಟರು, ಶೇಕಡಾ 50ರಷ್ಟು ಗಡಿರೇಖೆಯಲ್ಲಿರುವ, ನಂಬಲು ಅನರ್ಹರಾದ ಭಾರತೀಯರು. ಇನ್ನುಳಿದ ಶೇಕಡಾ 20ರಷ್ಟು ಮಾತ್ರ ನಂಬಿಕೆಗೆ ಅರ್ಹರಾಗಲು ಸಮೀಪದಲ್ಲಿರುವವರು ಎಂದು 2012ರಲ್ಲಿ ಹೇಳಿದ್ದಾರೆ.

ಪ್ರಾರಂಭದಿಂದಲೂ ಸಹ ನಮ್ಮ ಮೌಲ್ಯಗಳ ಹೊದಿಕೆಯು ಹೊಂದಿಕೊಳ್ಳುವ ಸ್ವಭಾವ ಹೊಂದಿದೆ. ಈ ವಿಶಿಷ್ಟ ಸ್ವಭಾವ ನಮ್ಮ ಜನರನ್ನು ಸುಲಭವಾಗಿ ಆಳಬಹುದು ಎಂದು ತೋರಿಸಿಕೊಟ್ಟಿದೆ.

ನಮ್ಮ ಇತ್ತೀಚಿನ ಚರಿತ್ರೆಯನ್ನು ಒಮ್ಮೆ ನೋಡೋಣ.

'ಪ್ಲಾಸಿ ಕದನದ ಮೂಲಕ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಪ್ರಾರಂಭವಾಯಿತು. ಈಸ್ಟ್ ಇಂಡಿಯಾ ಕಂಪನಿಯ ನೌಕರನಾಗಿದ್ದ **ರಾಬರ್ಟ್ ಕ್ಲೈವ್** ಬಂಗಾಳದ ನವಾಬನ ಸೈನ್ಯದಲ್ಲಿ ಮುಖ್ಯ ಸೇನಾಧಿಕಾರಿಯಾಗಿದ್ದ **ಜಾಫರ್** ಎಂಬ ವ್ಯಕ್ತಿಗೆ ಲಂಚ ನೀಡಿ, ಮುಂದೆ ಬಂಗಾಳದ ಮುಂದಿನ ನವಾಬನನ್ನಾಗಿ ಆತನನ್ನು ಮಾಡುವ ಆಮಿಷ ಒಡ್ಡಿ ಪ್ಲಾಸಿ ಕದನದಲ್ಲಿ ಬ್ರಿಟಿಷ್ ಸೈನ್ಯ ಗೆಲ್ಲುವಂತೆ ಮಾಡಿದ.

1701ರ ಬ್ರಿಟಿಷರ ಆಳ್ವಿಕೆಗಿಂತ ಮುಂಚೆ, ಔರಂಗಜೇಬನು ಮರಾಠರ ಸೇನಾಧಿಪತಿಯಾಗಿದ್ದ **ತ್ರಿಂಬಕ್** ಎಂಬುವವನಿಗೆ ಲಂಚ ನೀಡಿ, ಕೋಟೆಗಳನ್ನು ವಶಪಡಿಸಿಕೊಳ್ಳಲು ಹೇಳಿದ. ಪರಿಣಾಮ ಯಾವುದೇ ಯುದ್ಧ ಮಾಡದೇ ಕೋಟೆಗಳ ವಶವಾದವು! ಛತ್ರಪತಿ ಶಿವಾಜಿ ಮೊಗಲರ ಕಮಾಂಡರ್ ಒಬ್ಬರಿಗೆ ಲಂಚ ನೀಡಿ 'ಕೊಂದಾಣ'ವನ್ನು ವಶಪಡಿಸಿಕೊಂಡ ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ಟಿಪ್ಪು ಸುಲ್ತಾನನ ಬಲಗೈ ಬಂಟನಾಗಿದ್ದ **ಮೀರ್ ಸಾಧ್** ಬ್ರಿಟಿಷರಿಂದ ಲಂಚ ಪಡೆದಿದ್ದರಿಂದ ಸೋಲಬೇಕಾಯಿತು.

ಬ್ರಿಟಿಷರ ಈಸ್ಟ್ ಇಂಡಿಯ ಕಂಪನಿಯು 'ಲಂಚ ನೀಡಿ ಆಳು' (Bribe and conquer) ಎಂಬ ತಂತ್ರವನ್ನು ಬಳಸಿತು. ಮುಂದೆ ಬ್ರಿಟಿಷರ ಆಳ್ವಿಕೆ ಪ್ರಾರಂಭವಾಯಿತು. ಬ್ರಿಟಿಷರು 'ಲಂಚ ನೀಡು, ವಿಭಜಿಸು' (Bribing and Dividing) ಅರ್ಥಾತ್ 'ಒಡೆದು ಆಳುವ ನೀತಿ' ಎಂಬ ತಂತ್ರ ಬಳಸಿಕೊಂಡರು. ದುರಂತ ಎಂದರೆ, ಸ್ವಾತಂತ್ರ್ಯ ಲಭಿಸಿ 75 ವರ್ಷಗಳಾದರೂ ಸಹ ಈ ಎರಡು ತಂತ್ರಗಳನ್ನು ಬಳಸಲಾಗುತ್ತಿದೆ. 21ನೇ ಶತಮಾನದ ಭಾರತದಲ್ಲಿ ಅಂದರೆ ಈಗಲೂ ಲಂಚ ಕೊಡುವುದು ಮತ್ತು ಜನರ ಒಗ್ಗಟ್ಟು ಒಡೆಯುವುದು ಚುನಾವಣಾ ಕಣಗಳಲ್ಲಿ ಗೆಲುವನ್ನು ತಂದುಕೊಡುವ ರಾಜಮಾರ್ಗವಾಗಿವೆ.

ತಮ್ಮ ಘನತೆ ಮತ್ತು ಆತ್ಮ ಗೌರವವನ್ನು ಒತ್ತೆ ಇರಿಸಿ ಈ ರೀತಿಯ ಗೆಲುವು ಸಾಧಿಸುವ ಭಾರತೀಯರ ನಡವಳಿಕೆ ನನಗೆ 'ಥಾಮಸ್ ಮಕಾಲೆ' ಅವರು ಊಟಿಗೆ ಭೇಟಿ ನೀಡಿದ ಸಂದರ್ಭದಲ್ಲಾದ 'ಲಂಚ'ದ ಕಥೆಯನ್ನು ನೆನಪಿಸುತ್ತವೆ. ಈ ಕಥೆಯನ್ನು 'Reminiscences of an Indian Judge' ಎಂಬ ಪುಸ್ತಕದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಭಾರತದ ಅನೇಕ ನಗರಗಳಲ್ಲಿ ನ್ಯಾಯಾಧೀಶರಾಗಿ ಕೆಲಸ ಮಾಡಿದ್ದ ಫ್ರಾನ್ಸಿಸ್ ಲಾಸ್ ಸೆಲ್ಲೆಸ್(Lascelles) ದಾಖಲಿಸಿದ್ದಾರೆ. ಇದನ್ನು 'ನೀಲಗಿರಿ ದಾಖಲೆ ಕೇಂದ್ರ' (Nilgiri Documentation Centre)ವು ಈ ವರ್ಷದ ಜೂನ್ ತಿಂಗಳಲ್ಲಿ ಬಹಿರಂಗಪಡಿಸಿದೆ.

1834ರ ಏಪ್ರಿಲ್‌ನಲ್ಲಿ ಲಾರ್ಡ್ ಮಕಾಲೆಯವರು ಅಂದಿನ ಕಲ್ಕತ್ತಾದ ಗವರ್ನರ್ 'ಲಾರ್ಡ್ ವಿಲಿಯಮ್ ಬೆಂಟಿಂಕ್ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿ ಪ್ರಮಾಣ ವಚನ ಸ್ವೀಕಾರ ಮಾಡುವ ಸಮಾರಂಭಕ್ಕೆ ಮದ್ರಾಸಿನಿಂದ ಊಟಿಗೆ ಪಲ್ಲಕ್ಕಿಯಲ್ಲಿ ಬಂದರು. ಆ ಸಮಾರಂಭ ಹೊಸದಾಗಿ ನಿರ್ಮಾಣಗೊಂಡಿದ್ದ ಉಟಕಮಂಡ್ ಕ್ಲಬ್ (Ootacamund Club)ನಲ್ಲಿ ಏರ್ಪಡಿಸಲಾಗಿತ್ತು. ಈಗ ಅದನ್ನು 'ಊಟಿ ಕ್ಲಬ್' ಎಂದು ಕರೆಯಲಾಗುತ್ತದೆ. ಸಮಾರಂಭದ ನಂತರ ಮಕಾಲೆಯವರು ಊಟಿಯಲ್ಲಿ ತಮ್ಮ ವಾಸ್ತವ್ಯವನ್ನು ಮೂರು ತಿಂಗಳ ಕಾಲ ವಿಸ್ತರಿಸಲು ನಿರ್ಧರಿಸಿದರು. ಈ ಸಮಯದಲ್ಲಿ, ಅವರ ಪಲ್ಲಕ್ಕಿಯನ್ನು ಹೊರುತ್ತಿದ್ದವರ ಪೈಕಿ ಒಬ್ಬನು ಓರ್ವ ಸ್ಥಳೀಯ ಹೆಂಗಸಿನ ಜೊತೆ ಪ್ರಣಯ ಪ್ರಾರಂಭಿಸಿ, ಮದುವೆಯಾಗುವ ಭರವಸೆ ನೀಡಿ ಸಂಬಂಧವನ್ನು ಬೆಳೆಸಿದನು. ಮೂರು ತಿಂಗಳ ನಂತರ ಮಕಾಲೆಯವರು ಊಟಿಯನ್ನು ಬಿಡುವ ಸಂದರ್ಭ ಬಂದಿತು.

ಮಕಾಲೆಯವರ ತಂಡ ಊಟಿಯನ್ನು ಬಿಟ್ಟು ಮದ್ರಾಸಿಗೆ ಹೋಗುವ ವೇಳೆಯಲ್ಲಿ ಪ್ರಸಿದ್ಧ ಸಂತ ಸ್ಟೀಫನ್ ಚರ್ಚಿನ ಬಳಿ ಉದ್ರಿಕ್ತಗೊಂಡ ಒಂದು ದೊಡ್ಡ ಗುಂಪು ಅವರನ್ನು ತಡೆಯಿತು.

ಈ ಗುಂಪು, ಸ್ಥಳೀಯ ಮಹಿಳೆಯನ್ನು ಮದುವೆಯಾಗುವುದಾಗಿ ಆಶ್ವಾಸನೆ ನೀಡಿದ್ದ ಪಲ್ಲಕ್ಕಿ ಹೊರುವವನನ್ನು ಹಿಡಿದು, ಸ್ಥಳೀಯ ಮಹಿಳೆಯನ್ನು ವಿವಾಹವಾಗಿ ಅವಳನ್ನು ಜೊತೆಯಲ್ಲಿ ಕರೆದುಕೊಂಡು

> ❝ ನಾವು ಗಾಂಧೀಜಿಯವರನ್ನು ಗೌರವಿಸುತ್ತೇವೆ. ಆದರೆ, ಅವರನ್ನು ಅನುಸರಿಸುವುದಿಲ್ಲ. ನಾವು ಗಾಂಧಿಜಿಯವರ ಗುಣಲಕ್ಷಣಗಳನ್ನು ಒಳ್ಳೆಯದು ಎಂದು ಮಾತ್ರ ಸೈದ್ಧಾಂತಿಕವಾಗಿ (ಥಿಯರಿ) ಹೇಳುತ್ತೇವೆ ಆದರೆ ಅದನ್ನೆಂದೂ ಆಚರಣೆಗೆ ತರುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಎಪ್ಪತ್ತೈದು ವರ್ಷಗಳಾದರೂ ಸಹ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಎಲ್ಲರನ್ನೂ ಒಗ್ಗೂಡಿಸಿದ ಮಹಾತ್ಮ ಗಾಂಧಿಯವರನ್ನು ಅಣಕಿಸುವ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ಯಾವ ರೀತಿ ? ನಾವು ಯಾರಾದರೂ ಆದರ್ಶ ವಾದಿಗೆ ಮೂರ್ಖ ಎಂಬ ಹಣೆ ಪಟ್ಟಿ ನೀಡುತ್ತೇವೆ ಹಾಗೂ ಅಂತಹವನನ್ನು 'ಗಾಂಧಿ ನನ್ನ ಮಗ' ಎಂದು ಲೇವಡಿ ಮಾಡುತ್ತೇವೆ. ಅಯ್ಯೋ ನಾವು ಎಂತಹ ಪ್ರಪಾತಕ್ಕೆ ಬಿದ್ದಿದ್ದೇವೆ, ಇನ್ನೂ ಬೀಳುತ್ತಿದ್ದೇವೆ.

ಹೋಗಲು ಆಗ್ರಹ ಪಡಿಸಿತು. ಇಲ್ಲವಾದರೆ, ಮಕಾಲೆಯವರ ತಂಡವನ್ನು ಮುಂದೆ ಸಾಗಲು ತಾವು ಬಿಡುವುದಿಲ್ಲವೆಂದು ಹೇಳಿತು.

ಉದ್ರಿಕ್ತ ಗುಂಪು ತಮ್ಮ ಸ್ಥಳೀಯ ಮಹಿಳೆಯ ಗೌರವ ಕಾಪಾಡಲು, ಹಾಗೂ ತಮ್ಮ ಪಟ್ಟಣದ ಹಿರಿಮೆಯನ್ನು ಎತ್ತಿ ಹಿಡಿಯಲು, ಹಿಂಸೆ ಸೇರಿದಂತೆ, ಏನನ್ನು ಬೇಕಾದರೂ ಮಾಡಬಹುದೆಂಬ ಭಯ, ಮಕಾಲೆಯವರಲ್ಲಿ ಉಂಟಾಯಿತು. ಆದ್ದರಿಂದ ಮಕಾಲೆಯವರು, ರಕ್ಷಣೆಗೋಸ್ಕರ ಹಾಗೂ ಸಮಸ್ಯೆಯನ್ನು ಬಗೆಹರಿಸಲು ತಮ್ಮ ತಂಡವನ್ನು ನೇರವಾಗಿ ಜಿಲ್ಲಾ ಕಮಾಂಡಿಂಗ್ ಆಫೀಸರ್‌ರವರ ಕಚೇರಿಯತ್ತ ಸಾಗಬೇಕೆಂಬ ನಿರ್ದೇಶನ ನೀಡಿದರು. ಜಿಲ್ಲಾ ಕಮಾಂಡಿಂಗ್ ಆಫೀಸರ್‌ರವರ ಕಚೇರಿಯಲ್ಲಿ ಪರಸ್ಪರ ಕಾದಾಟವಾಡುತ್ತಿದ್ದ ಎರಡು ಗುಂಪುಗಳು ಮಾತುಕತೆ ನಡೆಸಲು ಚೇಂಬರ್ ಒಳಗೆ ಹೋದವು. ಆದರೆ ಲಾಸ್ ಸೆಲ್ಸ್ ಬರೆಯುವ ಹಾಗೆ 'ಕೆಲವು ಕ್ಷಣಗಳ ನಂತರ, ಮಕಾಲೆಯವರ ತಂಡ ಹೊರಬಂದು ನಿರಾತಂಕವಾಗಿ ಮದ್ರಾಸಿನತ್ತ ತಮ್ಮ ಪ್ರಯಾಣವನ್ನು ಮುಂದುವರೆಸಿತು. ಉದ್ರಿಕ್ತ ಗುಂಪು ಯಾವುದೇ ಗದ್ದಲವಿಲ್ಲದೆ ಚದುರಿ, ತಾವು ಮಹಿಳೆಯ ಗೌರವಯುತವಾದ ಒಪ್ಪಂದಕ್ಕೆ ಎಲ್ಲಿಂದ ಬಂದಿದ್ದರೋ ಆ ಬೆಟ್ಟದ ಕಡೆಗೆ ವಾಪಸ್ಸು ತೆರಳಿತು".

ಹಾಗಾದರೆ ಏನು ನಡೆಯಿತು?

ಲಾಸ್ ಸೆಲ್ಸ್‌ರವರು ಮುಂದೆ ಬರೆಯುತ್ತಾರೆ : 'ನಾನು ಗುಂಪಿನ ಮುಖಂಡನೆಂದು ಕಂಡು ಬರುತ್ತಿದ್ದ ವ್ಯಕ್ತಿಯನ್ನು ಸಂಪರ್ಕಿಸಿ ಏನಾಯಿತು' ಎಂದು ಕೇಳಿದೆ. 'ಮಕಾಲೆ ಸಾಹೇಬರು ತುಂಬಾ ಒಳ್ಳೆಯ ಹಾಗೂ ಸಭ್ಯ ವ್ಯಕ್ತಿ. ಅವರು ನಮಗೆ ನೂರು ರೂಪಾಯಿಗಳನ್ನು ನೀಡಿದರು' ಎಂದು ಹೇಳಿದ.

ಎಲ್ಲಿಯವರೆಗೆ ಚಾರಿತ್ರ್ಯಹೀನ ಮತದಾರರು ಸ್ವಹಿತಾಸಕ್ತಿ ಕೇಂದ್ರಿತ ಜನಸಂಖ್ಯೆ ಇರುತ್ತದೆಯೋ ಅಲ್ಲಿಯ ತನಕ ಭಾರತೀಯ ಪ್ರಜಾಪ್ರಭುತ್ವ ಕಾರ್ಯರಹಿತವಾಗಿ ಇರುತ್ತದೆ. ಪವನ್ ವರ್ಮಾರವರು ತಮ್ಮ "Being Indian" ಎಂಬ ಪುಸ್ತಕದಲ್ಲಿ, 'ನೀತಿ ಪಾಠಗಳು ಮತ್ತು ಉನ್ನತವಾದ ಆದರ್ಶಗಳ ಪರಿಕಲ್ಪನೆಯು, ಭಾರತೀಯರಿಗೆ ತಾತ್ವಿಕವಾಗಿ ಹತ್ತಿರವಾಗಿದೆಯಾದರೂ ಸಹ, ನಿಜ ಜೀವನದಲ್ಲಿ ಇದು ತಮಗೆ ಕಾರ್ಯಸಾಧುವಲ್ಲವೆಂದು ಭಾವಿಸಿ ಹೆಚ್ಚಾಗಿ ಕಡೆಗಣಿಸಿದ್ದಾರೆ' ಎಂದು ಬರೆದಿದ್ದಾರೆ. ಹಾಗೆಯೇ ಅಧಿಕಾರದ ವ್ಯಾಮೋಹವನ್ನು ತ್ಯಜಿಸುವವರನ್ನು ಪೂಜಿಸಲಾಗುತ್ತದೆ, ಅವರು ಒಳ್ಳೆಯ ಉದಾಹರಣೆ ನೀಡಿದ್ದಾರೆ ಎಂಬುದಕ್ಕಲ್ಲ. ಅವರು ಪ್ರತಿರೋಧ ಪರಿಸ್ಥಿತಿಗೆ ತಮ್ಮ ವ್ಯಕ್ತಿತ್ವದ ಸಾಮರ್ಥ್ಯವನ್ನು ಬದಲಾಯಿಸಿಕೊಳ್ಳಲು ಸಾಧ್ಯವಾಗದವರಾಗಿದ್ದಾರೆ. ಆದ್ದರಿಂದಲೇ, ನಾವು ಗಾಂಧೀಜಿಯವರನ್ನು ಗೌರವಿಸುತ್ತೇವೆ. ಆದರೆ, ಅವರನ್ನು ಅನುಸರಿಸುವುದಿಲ್ಲ.

ನಾವು ಗಾಂಧಿಜಿಯವರ ಗುಣಲಕ್ಷಣಗಳನ್ನು ಒಳ್ಳೆಯದು ಎಂದು ಮಾತ್ರ ಸೈದ್ಧಾಂತಿಕವಾಗಿ (ಥಿಯರಿ) ಹೇಳುತ್ತೇವೆ ಆದರೆ ಅದನ್ನೆಂದೂ ಆಚರಣೆಗೆ ತರುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಎಪ್ಪತ್ತೈದು ವರ್ಷಗಳಾದರೂ ಸಹ ದೇಶದ **ಸ್ವಾತಂತ್ರ್ಯಕ್ಕಾಗಿ ಹೋರಾಡಲು ಎಲ್ಲರನ್ನೂ ಒಗ್ಗೂಡಿಸಿದ ಮಹಾತ್ಮ ಗಾಂಧಿಯವರನ್ನು ಅಣಕಿಸುವ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ಯಾವ ರೀತಿ ? ನಾವು ಯಾರಾದರೂ ಆದರ್ಶವಾದಿಗೆ ಮೂರ್ಖ ಎಂಬ ಹಣೆಪಟ್ಟಿ ನೀಡುತ್ತೇವೆ ಹಾಗೂ ಅಂತಹವನನ್ನು 'ಗಾಂಧಿ ನನ್ನ ಮಗ' ಎಂದು ಲೇವಡಿ ಮಾಡುತ್ತೇವೆ. ಅಯ್ಯೋ ನಾವು ಎಂತಹ ಪ್ರಪಾತಕ್ಕೆ ಬಿದ್ದಿದ್ದೇವೆ, ಇನ್ನೂ ಬೀಳುತ್ತಿದ್ದೇವೆ.**

ನಮ್ಮ ದೇಶ ಭಕ್ತಿ ಏನೇ ಇದ್ದರೂ ರಾಷ್ಟ್ರಗೀತೆಯನ್ನು ಹಾಡುವುದಕ್ಕೆ, ರಾಷ್ಟ್ರಗೀತೆಯನ್ನು ಗುನುಗುವುದಕ್ಕೆ ಹಾಗೂ ಸ್ವಾತಂತ್ರ್ಯ ದಿನದಂದು ನಮ್ಮ ಪ್ರದರ್ಶನ ಚಿತ್ರವನ್ನು (DP) ಬದಲಾಯಿಸುವುದಕ್ಕೆ ಮಾತ್ರ ಸೀಮಿತವಾಗಿದೆ. **ಪ್ರಾಮಾಣಿಕ ನಾಗರಿಕನಾಗುವುದು ದೇಶಭಕ್ತಿಯ ಕ್ರಿಯೆಗಳಿಗಿಂತ ಹೆಚ್ಚು ದೊಡ್ಡದು.**

ಈಗ, ನಾವು "ಹರ್ ಘರ್ ತಿರಂಗಾ" (ಪ್ರತಿ ಮನೆಯ ಮೇಲೂ ತ್ರಿವರ್ಣ ಧ್ವಜ) ಎಂಬ ಪ್ರಚಾರದಲ್ಲಿ ನಿರತರಾಗಿದ್ದೇವೆ. ಹಾಗೂ ನಮ್ಮ ಪ್ರದರ್ಶನ ಚಿತ್ರಗಳನ್ನು ಭಾರತೀಯ ತ್ರಿವರ್ಣದಲ್ಲಿ ರೂಪಿಸುವಲ್ಲಿ ತೊಡಗಿಸಿಕೊಂಡಿದ್ದೇವೆ. ನಮ್ಮ ರಾಷ್ಟ್ರಧ್ವಜದ ಮೂರು ವಿವಿಧ ಬಣ್ಣಗಳು ಏನನ್ನು ಸೂಚಿಸುತ್ತವೆ ಎಂಬುದು ಎಷ್ಟು ಜನರಿಗೆ ಗೊತ್ತು ?

ನಮ್ಮ ಎರಡನೆಯ ರಾಷ್ಟ್ರಪತಿಗಳಾಗಿದ್ದ ಡಾ.ಸರ್ವಪಲ್ಲಿ ರಾಧಾಕೃಷ್ಣನ್‌ರವರು ವಿವರಿಸಿದ್ದಾರೆ "ಕೇಸರಿ ಬಣ್ಣವು ತ್ಯಾಗದ ಸಂಕೇತವಾಗಿದೆ. ನಮ್ಮ ನೇತಾರರು, ಪ್ರಾಪಂಚಿಕ ಲಾಭಗಳಿಗೆ ಮರುಳಾಗದೆ ತಮ್ಮ ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು".

ಮಧ್ಯ ಭಾಗದಲ್ಲಿ ಇರುವ ಬಿಳಿಯ ಬಣ್ಣವು ಬೆಳಕಾಗಿದೆ. ಇದು ಸತ್ಯಮಾರ್ಗವಾಗಿದೆ ಹಾಗೂ ನಮ್ಮ ನಡವಳಿಕೆಯನ್ನು ನಿರ್ದೇಶಿಸಲು ಸಹಕಾರಿಯಾಗಿದೆ. ಹಸಿರು ಬಣ್ಣವು, ಮಣ್ಣಿನ ಜೊತೆಗಿನ, ಗಿಡಮರಗಳ ಜೊತೆಗಿನ ನಮ್ಮ ಸಂಬಂಧವನ್ನು ಪ್ರತಿಬಿಂಬಿಸುತ್ತದೆ. ಇದರ ಮೇಲೆಯೇ ಎಲ್ಲಾ ಜೀವಿಗಳ ಜೀವನವು ಅವಲಂಬಿತವಾಗಿದೆ.

ಧ್ವಜದ ಮಧ್ಯಭಾಗದಲ್ಲಿ ಇರುವ ಅಶೋಕ ಚಕ್ರವು ಧರ್ಮ ಚಕ್ರದ ಗಾಲಿಯಾಗಿದೆ. ಸತ್ಯ ಮತ್ತು ಧರ್ಮವು ಈ ಧ್ವಜದ ಅಡಿಯಲ್ಲಿ ಕಾರ್ಯನಿರ್ವಹಿಸುವಂತಹ ಜನರ ನಿಯಂತ್ರಿಸುವ ತತ್ವಗಳಾಗಿವೆ.

ಭಾರತೀಯರಾದ ನಾವು ಎಲ್ಲಿಯವರೆಗೆ ನೈತಿಕ ಅಧಃಪತನವನ್ನು ಹೊಂದಿರುತ್ತೇವೆಯೋ ಅಲ್ಲಿಯವರೆಗೆ ಖ್ಯಾತ ನ್ಯಾಯವಾದಿ ನಾನಿ ಪಾಲ್ಖಿವಾಲ ಹೇಳಿರುವಂತೆ **ಸ್ವಾತಂತ್ರ್ಯ ದಿನದಂದು ನಮ್ಮ ತ್ರಿವರ್ಣ ಧ್ವಜದ ಹಾರಾಟವು ಕೇಸರಿ, ಬಿಳಿ ಮತ್ತು ಹಸಿರು ಆಗಿರುವುದಿಲ್ಲ. ಆದರೆ, ಕಪ್ಪು, ಕೆಂಪು ಮತ್ತು ಕಡುಗೆಂಪು ಬಣ್ಣವಾಗಿರುತ್ತದೆ. ಅಂದರೆ, ಕಪ್ಪು ಹಣ, ವಿಳಂಬ ನೀತಿ ಮತ್ತು ಕಡುಕೆಂಪು ಭ್ರಷ್ಟಾಚಾರವಾಗಿರುತ್ತದೆ.**

e-mail: vikram@starofmysore.com

'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ-20 ಪಂದ್ಯಾವಳಿ

ಶಿವಮೊಗ್ಗ, ಮಂಗಳೂರಿಗೆ ಭರ್ಜರಿ ಜಯ

ಮೈಸೂರು, ಆ.14(ಎಂಕೆ)– ಇಲ್ಲಿನ ಮಾನಸಗಂಗೋತ್ರಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಅಂಗಳದಲ್ಲಿ ಭಾನುವಾರ ನಡೆದ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ವಿರುದ್ಧ ಶಿವಮೊಗ್ಗ ಸ್ಟ್ರೈಕರ್ಸ್ ಹಾಗೂ ಗುಲ್ಬರ್ಗಾ ಮೈಸ್ಟಿಕ್ಸ್ ವಿರುದ್ಧ ಮಂಗಳೂರು ಯುನೈಟೆಡ್ ಜಯ ಗಳಿಸಿದೆ.



ಶಿವಮೊಗ್ಗಕ್ಕೆ ಜಯ: ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಶಿವಮೊಗ್ಗ ಸ್ಟ್ರೈಕರ್ಸ್, ಮೈಸೂರು ವಾರಿಯರ್ಸ್ ವಿರುದ್ಧ 13 ರನ್‌ಗಳ ಜಯ ಗಳಿಸುವ ಮೂಲಕ ಟೂರ್ನಿಯಲ್ಲಿ ಚೊಚ್ಚಲ ಗೆಲುವು ದಾಖಲಿಸಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 174 ರನ್ ಪೇರಿಸಿತು. ತಂಡದ ಪರ ಬಿ.ಆರ್.ಶರತ್ 35 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್ ಸಹಿತ 53 ರನ್ ಗಳಿಸಿದರೆ, ಸಿದ್ದಾರ್ಥ 36, ಅವಿನಾಶ್.ಡಿ 25 ರನ್ ಕೊಡುಗೆ ನೀಡಿದರು. ಮೈಸೂರು ವಾರಿಯರ್ಸ್ ಪರ ವಿದ್ಯಾಧರ್ ಪಾಟೀಲ್ 3, ಆದಿತ್ಯ ಗೋಯಲ್ ಮತ್ತು ಶುಭಾಂಗ್ ಹೆಗ್ಡೆ ತಲಾ 2 ವಿಕೆಟ್ ಪಡೆದರು. 175 ರನ್ ಗೆಲುವಿನ ಗುರಿ ಬೆನ್ನತ್ತಿದ ಮೈಸೂರು ವಾರಿಯರ್ಸ್ ನಾಯಕ ಕರುಣ್ ನಾಯರ್ ಶೂನ್ಯಕ್ಕೆ ಔಟಾಗುವ ಮೂಲಕ ಮತ್ತೊಮ್ಮೆ ನಿರಾಸೆ ಮೂಡಿಸಿದರು. ಪವನ್ ದೇಶಪಾಂಡೆ 47 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್ ಸಹಿತ 64 ರನ್ ಗಳಿಸಿದರೆ, ಉಳಿದವರು ಪೆವಿಲಿಯನ್ ಪರೇಡ್ ನಡೆಸಿದರು. ಅಂತಿಮವಾಗಿ ವಾರಿಯರ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಶಿವಮೊಗ್ಗ ಪರ ಉತ್ತಮ್ ಅಯ್ಯಪ್ಪ, ಕೆ.ಗೌತಮ್, ಎಂಡಿ ದರ್ಶನ್ ತಲಾ 2 ವಿಕೆಟ್ ಪಡೆದರು. ಬಿ.ಆರ್.ಶರತ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮಂಗಳೂರಿಗೆ ಗೆಲುವು: ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ಮಂಗಳೂರು ಯುನೈಟೆಡ್ ಗುಲ್ಬರ್ಗಾ ಮೈಸ್ಟಿಕ್ಸ್ ವಿರುದ್ಧ 3 ವಿಕೆಟ್‌ಗಳ ಜಯ ಸಾಧಿಸಿದೆ.

193 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಮಂಗಳೂರು ಇನ್ನೂ 2 ಎಸೆತ ಬಾಕಿ ಇರುವಂತೆಯೇ 19.4 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 195 ರನ್ ಗಳಿಸಿ ಜಯ ಸಾಧಿಸಿತು. ಇನ್ನಿಂಗ್ಸ್ ಆರಂಭದಲ್ಲೇ ನಾಯಕ ಆರ್.ಸಮರ್ಥ್ ಶೂನ್ಯಕ್ಕೆ ಔಟಾದರು. ನಂತರ ಬಂದ ಮ್ಯಾಕ್ನೀಲ್ ಹ್ಯಾಡ್ಲಿ ನೊರೊನ್ಹಾ 24, ಅನೀಶ್ವರ್ ಗೌತಮ್ 30, ಸುಜಯ್ ಸಾತೇರಿ 29 ರನ್ ಗಳಿಸಿದರೆ, ಅಬ್ಬರದ ಬ್ಯಾಟಿಂಗ್ ಮಾಡಿದ ಅಭಿನವ್ ಮನೋಹರ್ 25 ಎಸೆತಗಳಲ್ಲಿ 5 ಬೌಂಡರಿ, 3 ಸಿಕ್ಸರ್ ಒಳಗೊಂಡ 55 ರನ್‌ಗಳಿಸಿ ತಂಡಕ್ಕೆ ಜಯ ತಂದರು. ಗುಲ್ಬರ್ಗಾ ಪರ ಶ್ರೀಶ ಆಚಾರ್ 3, ಕೋದಂಡ ಅಜಿತ್ ಕಾರ್ತಿಕ್ 2 ವಿಕೆಟ್ ಪಡೆದರು.

ಪಾಂಡೆ ಅರ್ಧಶತಕ ವ್ಯರ್ಥ: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ ಮೈಸ್ಟಿಕ್ಸ್ ನಾಯಕ ಮನೀಶ್ ಪಾಂಡೆ ಅದ್ಭುತ ಬ್ಯಾಟಿಂಗ್ ಪ್ರದರ್ಶನ ನೀಡಿದರು. 45 ಎಸೆತಗಳಲ್ಲಿ 7 ಬೌಂಡರಿ, 4 ಸಿಕ್ಸರ್ ಸಿಡಿಸಿದ ಪಾಂಡೆ 86 ಗಳಿಸಿ ಅಜೇಯರಾಗುಳಿದರು. ಕೃಷ್ಣನ್ ಶ್ರೀಜಿತ್ 36, ಮನೋಜ್ ಭಾಂಡಗೆ 29 ರನ್ ಕೊಡುಗೆ ನೀಡಿದರು. ಅಂತಿಮವಾಗಿ ಗುಲ್ಬರ್ಗಾ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 192 ರನ್ ಗಳಿಸಿತು. ಮಂಗಳೂರು ಪರ ವಿಜಯ್ ಕುಮಾರ್ ವೈಶಾಕ್ 3, ಹೆಚ್‌ಎಸ್ ಶರತ್ 2 ವಿಕೆಟ್ ಪಡೆದರು. ಅಭಿನವ್ ಮನೋಹರ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಶಕ್ತಿನಗರದಲ್ಲಿ ದೇಶಕ್ಕಾಗಿ ವಾಕಥಾನ್

ಮೈಸೂರು, ಆ.14(ಆರ್‌ಕೆ)–75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಮೈಸೂರಿನ ಶಕ್ತಿನಗರದಲ್ಲಿ ದೇಶಕ್ಕಾಗಿ ವಾಕಥಾನ್ ಕಾರ್ಯಕ್ರಮ ಆಯೋಜಿಸಲಾಗಿತ್ತು. ಅಲ್ಲಿನ ಉದ್ಯಾನವನದಿಂದ ರಾಷ್ಟ್ರಧ್ವಜ ಹಿಡಿದು ಕಾಲ್ನಡಿಗೆ ಜಾಥಾ ನಡೆಸಿದ ಬಡಾವಣೆ ನಿವಾಸಿಗಳು, ಟೀಚರ್ಸ್ ಲೇಔಟ್, ವಿದ್ಯಾಶಂಕರ ಬಡಾವಣೆಗಳಲ್ಲಿ ಒಂದೇ ಮಾತರಂ ಘೋಷಣೆಗಳನ್ನು ಕೂಗಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಮನೆ–ಮನೆಗಳಲ್ಲಿ ತ್ರಿವರ್ಣ ಧ್ವಜ ಹಾರಿಸುವಂತೆ ಜಾಗೃತಿ ಮೂಡಿಸಿದರು.

ಕಾವೇರಿ ಆಸ್ಪತ್ರೆ ಸಂಸ್ಥಾಪಕ ಡಾ. ಚಂದ್ರಶೇಖರ, ನಾರಾಯಣ ಹೃದಯಾಲಯದ ಡಾ.ಸತೀಶ್‌ರಾವ್, ಪರಿಸರ ಪ್ರೇಮಿ ಪ್ರವೀಣ್ ಸುಭೋದ, ಮೈಕ್ ಪ್ರಕಾಶ್, ಉದಯಗಿರಿ ಠಾಣೆಯ ಶಂಕರ್, ಪಾಪಣ್ಣ, ತುಳಸಿ ಅಂಕಯ್ಯ, ಶೋಭಾ, ಉಮಾ ಇತರರು ಜಾಥಾದಲ್ಲಿ ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com


Sandesh The Prince
ನಾಡಿನ ಸಮಸ್ತ ಜನತೆಗೆ 75ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು
ಹುಟ್ಟುಹಬ್ಬದ ಶುಭಾಶಯಗಳು
'ಆಳಾಗಬಲ್ಲವನು ಅರಸನಾಗಬಲ್ಲ...'
ಜೀವನ ತತ್ವದ ಸತ್ಯ ಸಂದೇಶದಂತೆ ಬಾಳಿ-ಬದುಕಿ
ನಮ್ಮಂತಹ ಸಾವಿರಾರು ಜನರ ಬದುಕಿಗೆ ಬೆಳಕಾದ
ನೀವು ಯಾವಾಗಲೂ ಸುಖವಾಗಿರಬೇಕು
ಹುಟ್ಟುಹಬ್ಬದ ಸಂದರ್ಭದಲ್ಲಿ ನಿಮಗೆ ವಂದನೆ-ಅಭಿನಂದನೆ.
ತಾಯಿ ಚಾಮುಂಡೇಶ್ವರಿ ನಿಮಗೆ ಆಯುರಾರೋಗ್ಯ
ಭಾಗ್ಯ ಕಲ್ಪಿಸಲಿ ಎಂದು ಸದಾ ಪ್ರಾರ್ಥಿಸುವ,
ಮ್ಯಾನೇಜ್‌ಮೆಂಟ್ ಹಾಗೂ ಸಿಬ್ಬಂದಿ
ಸಂದೇಶ್ ದಿ ಪ್ರಿನ್ಸ್
ಸಂದೇಶ್ ನಾಗರಾಜ್
ವಿಧಾನ ಪರಿಷತ್ ಮಾಜಿ ಸದಸ್ಯರು

ನಗರಸಭಾ ಕಾರ್ಯಾಲಯ, ಹಾಸನ, ಬಿ.ಎಂ. ರಸ್ತೆ, ಸಂತೇಪೇಟೆ ವೃತ್ತ, ಹಾಸನ.

Email:commn_hassan@yahoo.com ದೂರವಾಣಿ: 08172-268276, 263033
web: http://www.hassancity.gov.in ಸಹಾಯವಾಣಿ: 233702 ಫ್ಯಾಕ್ಸ್: 234792
ಸಂ:ಪೌಆ/ಹಾಸನ/ಇ.ವಿ/ಜೆ.ಇ-1/ಟೆಂಡರ್ ಶಾಖೆ/2022-23 ದಿನಾಂಕ:08.08.2022

ಮರು ಟೆಂಡರ್ ಪ್ರಕಟಣೆ : ಇ ಪ್ರೊಕ್ಯೂರ್‌ಮೆಂಟ್ ಮೂಲಕ :

ಹಾಸನ ನಗರಸಭಾ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯ ಅನುದಾನಗಳಡಿಯಲ್ಲಿ ಕಾಮಗಾರಿ/ಕೆಲಸಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಅಧ್ಯಾದೇಶ-2000ರ ಅನ್ವಯ ಐಟಂವಾರು ದರಗಳ ಮರು ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರು ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:**23-08-2022** ರ ಸಂಜೆ 5.30 ಗಂಟೆಯೊಳಗೆ ಕೆಲಸಗಳಿಗೆ ಅನ್ವಯಿಸುವ ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ನಗರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ:08172-268276, ಕಾಮಗಾರಿ ವಿವರ ಈ ಕೆಳಕಂಡಂತಿದೆ. **ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆದಾರ ಫಲಾನುಭವಿಗಳಿಗೆ ಕಾಯ್ದಿರಿಸಿದ ಕಾಮಗಾರಿಗಳು. 2021-22ನೇ ಸಾಲಿನ ಡೆ-ನಲ್ಮ್ ಅಭಿಯಾನದ ಅನುದಾನ** ಕ್ರ.ಸಂ.1)ಕಾಮಗಾರಿ ಹೆಸರು: ಹಾಸನ ನಗರ ಗೊರೂರು ರಸ್ತೆ ಬೂಸ್ಟರ್ ಪಂಪ್‌ಹೌಸ್ ಹಿಂಭಾಗದಲ್ಲಿರುವ ನಗರಸಭೆಯ ವಸತಿ ಗೃಹ ಕಟ್ಟಡ (ಕ್ವಾಟ್ರಸ್)ದಲ್ಲಿ ಆಶ್ರಯ ಕೇಂದ್ರವನ್ನು ತೆರೆಯುವ ಬಗ್ಗೆ. ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):9.00 ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-1 **2019-20ನೇ ಸಾಲಿನ ನಗರಸಭಾ ನಿಧಿ ಶೇ.7.25 ಅನುದಾನ** 2)ಹಾಸನ ನಗರದ ಷರೀಫ್ ಕಾಲೋನಿ ಬಡಾವಣೆಯ ಮಸೀದಿ ಮುಖ್ಯ ರಸ್ತೆ ಹಾಗು ಮಸ್ಜಿದ್ ಎ ಖುಬಾ ಮುಂಭಾಗ ಕಾಂಕ್ರೀಟ್ ರಸ್ತೆ ಹಾಗೂ ಕಾಂಕ್ರೀಟ್ ಚರಂಡಿ ನಿರ್ಮಿಸುವ ಕೆಲಸ. ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):10.00 ಕಾಲಾವಧಿ: 03 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-1 **ಇತರೆ ವರ್ಗದ ಗುತ್ತಿಗೆದಾರ ಫಲಾನುಭವಿಗಳಿಗೆ ಕಾಯ್ದಿರಿಸಿದ ಕಾಮಗಾರಿಗಳು. 2221-22ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನ** 03)ಹಾಸನ ನಗರಸಭೆಯ ನೀರು ಸರಬರಾಜು ವ್ಯವಸ್ಥೆಯಲ್ಲಿರುವ ಮಿನಿ ಕ್ಯಾಂಟರ್ ವಾಹನ ಸಂಖ್ಯೆ: ಕೆಎ-13-2345 ವಾಹನವು ನಾ-ದುರಸ್ಥಿ ಸ್ಥಿತಿಯಲ್ಲಿರುವುದರಿಂದ ಬದಲಿಗೆ ಹೊಸದಾಗಿ ಮಿನಿ ಕ್ಯಾಂಟರ್ ವಾಹನ ಖರೀದಿಸುವ ಕೆಲಸ. ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):10.00 ಕಾಲಾವಧಿ: 03 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಜಿ-1 04)ಹಾಸನ ನಗರದ 13ನೇ ವಾರ್ಡ್ ವಿದ್ಯುತ್ ನಗರ ಬಡಾವಣೆಯಲ್ಲಿನ ಪಾರ್ಕ್ ಅಭಿವೃದ್ಧಿ ಕಾಮಗಾರಿ. ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):5.50 ಕಾಲಾವಧಿ: 02 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಜಿ-1 **2020-21ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನ 05)**ಹಾಸನ ನಗರಸಭೆಯ ಖರಿಕೊಳವೆಯ ವಿವಿಧ ಅಳತೆಯ ಪೈಪುಗಳು ಮತ್ತು ಮೆಕ್ಯಾನಿಕಲ್ ಜಾಯಿಂಟ್ ಕಾಲರ್‌ಗಳಲ್ಲಿ ಖರೀದಿಸಿ ವಿವಿಧ ಸ್ಥಳಗಳಲ್ಲಿ ಅಳವಡಿಸುವ ಕೆಲಸ. ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):6.00 ಕಾಲಾವಧಿ: 02 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಜಿ-1 06)ಹಾಸನ ನಗರದ 15ನೇ ವಾರ್ಡಿನ ಸಂಗಮೇಶ್ವರ ಬಡಾವಣೆಯ 1ನೇ ರಸ್ತೆಯಲ್ಲಿ ಬಿ.ಎಸ್.ಎನ್.ಎಲ್. ನಾಗರಾಜು ಮನೆಯಿಂದ ಅಡ್ಡಿಮನೆ ರಸ್ತೆಯವರೆಗೆ ಒಳಚರಂಡಿ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿ, ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):10.00 ಕಾಲಾವಧಿ: 02 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-1 **2021-22ನೇ ಸಾಲಿನ ನಗರಸಭಾ ನಿಧಿ ಶೇ.29.00 ಅನುದಾನ 07)**ಪರಿಶಿಷ್ಟ ಪಂಗಡದವರು ವಾಸಿಸುವ ಹಾಸನ ನಗರದ ವಾರ್ಡ್ ನಂ:16 ರಾಜ್‌ಕುಮಾರ್ ನಗರ ಬಡಾವಣೆಯಲ್ಲಿರುವ ಅಂಗನವಾಡಿ ಕಟ್ಟಡಕ್ಕೆ ಕುರ್ಚಿ ಟೇಬಲ್ ಹಾಗೂ ಇತರೆ ಅವಶ್ಯಕ ಸಾಮಾಗ್ರಿಗಳನ್ನು ಖರೀದಿಸುವುದು. ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):3.24 ಕಾಲಾವಧಿ: 02 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಜಿ-1 **2015-16ನೇ ಸಾಲಿನ 14ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಅನುದಾನ.** 08)ಹಾಸನ ನಗರದ ಲಲಿತಮ್ಮ ವಠಾರ ಜವೇನಹಳ್ಳಿ ಕೆರೆ ಪಕ್ಕದಿಂದ ಶಿವ ಪಾರ್ವತಿ ದೇವಸ್ಥಾನದ ಮುಖಾಂತರ, ವಿಶ್ವನಾಥ್ ರವರ ಮನೆಯ ಮುಖಾಂತರ ಅಡ್ಡಿ ಮನೆ ಮುಖ್ಯ ರಸ್ತೆವರೆಗೆ ಒಳಚರಂಡಿ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿ. ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):17.79 ಕಾಲಾವಧಿ: 03 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-1 **2022-23ನೇ ಸಾಲಿನ ಹಾಸನ ನಗರಸಭಾ ಅನುದಾನ.** 09)Construction of New UGD Pipe line, Reconstruction of Damaged UGD Pipe line and UGD Missing Link Pipe line work in Main Roads and Cross Roads of Ward No: 01 to 35 in Hassan City for the year 2022-23. ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):50.00 ಕಾಲಾವಧಿ: 12 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-2 10)Repair, reconstruction of Manholes, Contruction of Damaged Manholes, Construction of New Manholes and Rising or lowering of manholes in main and cross roads of Ward No: 01 to 35 in Hassan City for the year 2022-23 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):50.00 ಕಾಲಾವಧಿ: 12 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-2 11)ಹಾಸನ ನಗರದ 30ನೇ ವಾರ್ಡ್ ಚನ್ನವೀರಪ್ಪರವರ ಮಂಡಿ ಪಕ್ಕದಿಂದ, ಮಂಡಿ ಪಾಪಣ್ಣರವರ ಮಿಲ್ ಮುಖಾಂತರ, ಚನ್ನವೀರಪ್ಪರವರ ಮಂಡಿ ರಸ್ತೆ ಮುಖಾಂತರ, ಅಂಬೇಡ್ಕರ್‌ನಗರ ಸರ್ಕಲ್ ಮುಖಾಂತರ, ಶ್ರೀ.ಚಂದ್ರಪ್ರಸಾದ್ ತ್ಯಾಗಿ ರವರ ಮನೆ ಮುಖಾಂತರ 80 ಅಡಿ ರಸ್ತೆಯ ವರೆಗೆ ಒಳಚರಂಡಿ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿ, ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ):21.00 ಕಾಲಾವಧಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-2 ಸೂಚನೆ: ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವಜನಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಕೆಲಸದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು.

ಸಹಿ/-ಅಧ್ಯಕ್ಷರು ನಗರಸಭೆ, ಹಾಸನ. ಸಹಿ/-ಪೌರಾಯುಕ್ತರು ನಗರಸಭೆ, ಹಾಸನ.

ವಾಪಾಸಂ/ಹಿಸನಿ/ಹಾಸನ/ಎಂಸಿಎ/412/2022-23

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಚಿಕ್ಕಯ್ಯನವರು

ಶ್ರೀ ಐವಿ ಮತ್ತು ಚಂದ್ರಶೇಖರ್) ನಂ.1734/3, 2ನೇ ಕ್ರಾಸ್, ಕೆ.ಎನ್.ಪುರ ಗಾಯತ್ರಿಪುರಂ, 2ನೇ ಹಂತ, ಮೈಸೂರು ಇವರು ಮಾಹಿವ ಜಿಲ್ಲೆಗಳಿಗೆ ಪಕ್ಕ ಮೂಲ್ಯ ತಂದೆಯವರು ದಿ.5.8.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ.16.08.2022 ಮಂಗಳವಾರ ನಮ್ಮ ಸ್ವಗೃಹದಲ್ಲಿ ನಡೆಸಲಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ. ದುಃಖತಪ್ತರು: ಮೃತರ ಮಕ್ಕಳು ಮತ್ತು ಕುಟುಂಬವರ್ಗದವರು ಭೋಜನ : 7.00 ಗಂಟೆ

4ನೇ ವರ್ಷದ ಸವಿನೆನಪು



ತಮ್ಮಯ್ಯ ನಾಯಕ
ಮಾಜಿ ಗ್ರಾ.ಪಂ ಸದಸ್ಯರು, ತಮ್ಮಡಹಳ್ಳಿ

ದುಃಖತಪ್ತರು: ಪತ್ನಿ ರಾಜಮ್ಮ, ಮಕ್ಕಳಾದ ದ್ಯಾವಪ್ಪನಾಯಕ ಅಧ್ಯಕ್ಷರು, ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಮೈಸೂರು, ರವಿನಾಯಕ್ ಗುತ್ತಿಗೆದಾರರು, ಮಂಜುನಾಯಕ್ & ಸೊಸೆಯಂದಿರು, ಮೊಮ್ಮಕ್ಕಳು ಅಪಾರ ಬಂಧು ಬಳಗದವರು

6ನೇ ವರ್ಷದ ಸವಿನೆನಪು



ಸುರೇಶ್.ಬಿ
ಗುತ್ತಿಗೆದಾರರು, ಶ್ರೀರಾಂಪುರ ಮೈಸೂರು

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವವರು : ಪತ್ನಿ, ಮಕ್ಕಳು ಹಾಗೂ ಕುಟುಂಬವರ್ಗದವರು ಬಂಧುಮಿತ್ರರು

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಪೊಲೀಸ್ ಸಹಕಾರ ಸಂಘ ನಿ., ಮೈಸೂರು

ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಮೇಲ್ಕಂಡ ಸಂಘದ 2021-22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 17-08-2022ನೇ ಬುಧವಾರ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಸಂಘದ ಅಧ್ಯಕ್ಷರು ಹಾಗೂ ಮೈಸೂರು ಜಿಲ್ಲಾ ಪೊಲೀಸ್ ಅಧೀಕ್ಷಕರು ಆದ ಮಾನ್ಯ ಶ್ರೀ ಚೇತನ್ ಆರ್. ಐಪಿಎಸ್ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಛೇರಿ ಸಭಾಂಗಣದಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರುಗಳು ಸಭೆಗೆ ಸಕಾಲಕ್ಕೆ ಆಗಮಿಸಲು ಕೋರಲಾಗಿದೆ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/- ಬಿ.ಎ. ಬಸವೇಗೌಡ, ವ್ಯವಸ್ಥಾಪಕ ನಿರ್ವಾಹಕರು

ಮೈಸೂರು ಅರಮನೆ ಆವರಣದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ

ರಾಜ್ಯದಲ್ಲಿ 1.20 ಕೋಟಿ ರಾಷ್ಟ್ರಧ್ವಜ ಹಾರಾಟ



ಮೈಸೂರು, ಆ.14(ಎಂಕೆ)– ದೇಶದಲ್ಲಿ 40 ಕೋಟಿಗೂ ಹೆಚ್ಚು ಮನೆಗಳಲ್ಲಿ ಧ್ವಜಾರೋಹಣ ನೆರವೇರಿದ್ದು, ರಾಜ್ಯದಲ್ಲಿ 1.20 ಕೋಟಿ ಮನೆಗಳಲ್ಲಿ ರಾಷ್ಟ್ರಧ್ವಜ ಹಾರಾಡುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ಮೈಸೂರು ಅರಮನೆ ಆವರಣದಲ್ಲಿ ಅರಮನೆ ಮಂಡಳಿ ವತಿಯಿಂದ ಆಯೋಜಿಸಿರುವ '75ನೇ ಸ್ವಾತಂತ್ರ್ಯ ಅಮೃತಮಹೋತ್ಸವ' ಕಾರ್ಯಕ್ರಮವನ್ನು ವರ್ಚುವಲ್ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರು ನೀಡಿದ ಕರೆಗೆ ದೇಶವೇ ಬೆಂಬಲ ವ್ಯಕ್ತಪಡಿಸಿದೆ. ಮನೆ–ಮನೆಗಳಲ್ಲಿಯೂ ರಾಷ್ಟ್ರಧ್ವಜ ಹಾರಾಡುತ್ತಿದೆ ಎಂದರು.

ಸಾಂಸ್ಕೃತಿಕ ನಗರಿ ಮೈಸೂರಿನ ಅರಮನೆ ಆವರಣದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ ಶ್ಲಾಘನೀಯವಾಗಿದ್ದು, ಮೈಸೂರಿನ ಜನತೆ ಬಹಳ ಹರ್ಷದಿಂದ ಭಾಗವಹಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸ್ಥಳೀಯ ಶಾಸಕರ, ಸಂಸದರ ನೇತೃತ್ವದಲ್ಲಿ ಆಯೋಜಿಸಿರುವ ಸ್ವಾತಂತ್ರ್ಯ ಅಮೃತ ಮಹೋತ್ಸವ ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಶುಭಹಾರೈಸಿದರು.

ಇದೇ ವೇಳೆ ನಿವೃತ್ತ ಯೋಧರನ್ನು ಅಭಿನಂದಿಸಿ, ಗೌರವಿಸಲಾಯಿತು. ಬಳಿಕ ವಿದ್ವಾನ್ ಶ್ರೀಧರ್ ಜೈನ್ ಮತ್ತು ತಂಡದ ವತಿಯಿಂದ ದೇಶಭಕ್ತಿ ಗೀತೆಗಳ ಗಾಯನ ಹಾಗೂ ನೃತ್ಯ ಪ್ರದರ್ಶನ ನಡೆಯಿತು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಎಸ್.ಎ.ರಾಮದಾಸ್, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಜಿಲ್ಲಾಧಿಕಾರಿ ಬಗಾದಿ ಗೌತಮ್ ಮತ್ತಿತರರಿದ್ದರು.

ದಸರಾ ಗಜಪಡೆಯ ತಾಲೀಮು ಆರಂಭ



ಅಳುಕಿಲ್ಲದೆ ಸಾಗಿದ ಹೊಸ ಆನೆಗಳು

ಪೌಷ್ಟಿಕ ಆಹಾರ ನೀಡಲು ಆರಂಭಿಸಲಾಗುವುದು

ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಗಜಪಡೆಗೆ ಇಂದಿನಿಂದ ತಾಲೀಮು ಆರಂಭಿಸಲಾಗಿದೆ. ಮೊದಲ ತಂಡದಲ್ಲಿ ಬಂದಿರುವ 9 ಆನೆಗಳಲ್ಲಿ 6 ಗಂಡಾನೆಗಳಿದ್ದು, 3 ಹೆಣ್ಣಾನೆಗಳಿವೆ. ಎಲ್ಲ ಆನೆಗಳು ಆರೋಗ್ಯದಿಂದ ಕೂಡಿವೆ. ನಗರ ವಾತಾವರಣಕ್ಕೆ ಹೊಂದಿಕೊಳ್ಳುತ್ತಿವೆ. ಒಂದು ವಾರದ ನಂತರ ಭಾರ ಹೊರುವ ತಾಲೀಮು ಪ್ರಾರಂಭ ಮಾಡಲಾಗುವುದು. ತಾಲೀಮಿನಲ್ಲಿ ಆನೆಗಳ ವರ್ತನೆ ಗಮನಿಸಿ, ಜಂಬೂಸವಾರಿಯಲ್ಲಿ ಯಾವ ಆನೆಗೆ ಯಾವ ಜವಾಬ್ದಾರಿ ನೀಡಬಹುದು ಎಂದು ನಿರ್ಧರಿಸಲಾಗುತ್ತದೆ. ಇಂದಿನಿಂದಲೇ ಆನೆಗಳಿಗೆ ಪೌಷ್ಟಿಕ ಆಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ. - ಡಾ.ವಿ.ಕರಿಕಾಳನ್, ಡಿಸಿಎಫ್

ಮೈಸೂರು,ಆ.14(ಎಂಟಿವೈ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಗಜಪಡೆಗೆ ಭಾನುವಾರದಿಂದ ಜಂಬೂ ಸವಾರಿ ಮಾರ್ಗದಲ್ಲಿ ತಾಲೀಮು ಆರಂಭಿಸಲಾಗಿದ್ದು, ಮೊದಲ ದಿನವೇ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಎಲ್ಲಾ ಆನೆಗಳು ಶಾಂತ ರೀತಿಯಲ್ಲಿ ವರ್ತಿಸಿ ಅಧಿಕಾರಿಗಳಲ್ಲಿ ಭರವಸೆ ಮೂಡಿಸಿದವು.

ತಾಲೀಮಿಗೆ ಕರೆದೊಯ್ಯುವ ಮುನ್ನ ಅರಮನೆ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಬಳಿ ದಸರಾ ಗಜಪಡೆಗೆ ಅರಣ್ಯ ಇಲಾಖೆ ವತಿಯಿಂದ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ಅವರಿಂದ ದಸರಾ ಮಹೋತ್ಸವದ ಗಜಪಡೆಗೆ ಪೂಜೆ ಸಲ್ಲಿಸಲಾಯಿತು. ಆನೆಗಳಿಗೆ ಪಾದತೊಳೆದು ಅರಿಶಿನ, ಕುಂಕುಮ, ಶ್ರೀಗಂಧ ಹಚ್ಚಿ ಪುಷ್ಪಾರ್ಚನೆ ಮಾಡಲಾಯಿತು. ನಂತರ ಪಂಚಫಲ ಅರ್ಪಿಸಲಾಯಿತು. ಡಿಸಿಎಫ್ ಡಾ.ವಿ.ಕರಿಕಾಳನ್ ಅವರು ಆನೆಗಳಿಗೆ ಪುಷ್ಪನಮನ ಸಲ್ಲಿಸಿ, ತಾಲೀಮಿಗೆ ಚಾಲನೆ ನೀಡಿದರು.

ಅಳುಕಿಲ್ಲದೆ ಸಾಗಿದ ಆನೆಗಳು: ಈ ಬಾರಿ ಅದ್ಧೂರಿಯಾಗಿ ದಸರಾವನ್ನು ಆಚರಿಸಲು ಸರ್ಕಾರ ನಿರ್ಧರಿಸಿರುವ ಹಿನ್ನೆಲೆಯಲ್ಲಿ ಜಂಬೂಸವಾರಿಗೆ ಗಜಪಡೆಯನ್ನು ಸಜ್ಜುಗೊಳಿಸಲಾಗುತ್ತಿದೆ. ಮೊದಲ ಹಂತದಲ್ಲಿ ಕಾಡಿನಿಂದ ನಾಡಿಗೆ ಬಂದಿರುವ ಆನೆಗಳಿಗೆ ಬೆಳಗ್ಗೆ ಮತ್ತು ಸಂಜೆ ತಾಲೀಮು ನಡೆಸುವುದಕ್ಕೆ ನಿರ್ಧರಿಸಲಾಗಿದ್ದು, ಮೊದಲ ದಿನದ ತಾಲೀಮಿನಲ್ಲಿ ಎಲ್ಲಾ ಆನೆಗಳು ಅಳುಕಿಲ್ಲದೆ ಹೆಜ್ಜೆ ಹಾಕಿದವು.

1.15 ಗಂಟೆಯಲ್ಲೇ 5 ಕಿ.ಮೀ. ಕ್ರಮಿಸಿದ ಗಜಪಡೆ: ಅರಮನೆ ಆವರಣದಿಂದ ತಾಲೀಮಿಗಾಗಿ ಹೊರಟ ದಸರಾ ಗಜಪಡೆ ಕೆ.ಆರ್.ಆಸ್ಪತ್ರೆ ವೃತ್ತ ಹಾಗೂ ಹೈವೇ ವೃತ್ತದಲ್ಲಿ ಎರಡು ನಿಮಿಷ ಲದ್ದಿ ಹಾಕಲು ನಿಂತಿದ್ದನ್ನು ಹೊರತುಪಡಿಸಿದರೆ ಮಾರ್ಗದುದ್ದಕ್ಕೂ ಎಲ್ಲಿಯೂ ನಿಲ್ಲದೆ ಸರಾಗವಾಗಿ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನ ತಲುಪಿದವು. ಅರಮನೆ ಆವರಣದ ಆನೆ ಕ್ಯಾಂಪ್ ಸ್ಥಳದಿಂದ ಪಂಜಿನ ಕವಾಯತ್ ಮೈದಾನ 5 ಕಿ.ಮೀ. ದೂರವಿದ್ದು, ಈ ಅಂತರವನ್ನು ತಾಲೀಮಿನಲ್ಲಿ ದಸರಾ ಗಜಪಡೆ 1.15 ಗಂಟೆಯಲ್ಲಿಯೇ ತಲುಪಿದವು. ಇಂದಿನಿಂದ ಇನ್ನು ಒಂದು ವಾರಗಳ ಕಾಲ ಡ್ರೈ ತಾಲೀಮು(ಭಾರ ಹೊರಿಸದೇ) ನಡೆಸಲಾಗುತ್ತದೆ. ಡ್ರೈ ತಾಲೀಮಿನಿಂದಾಗಿ ಆನೆಗಳು ತ್ವರಿತಗತಿಯಲ್ಲಿ ಹೆಜ್ಜೆ ಹಾಕಿದವು.

ಭರವಸೆ ಮೂಡಿಸಿದ ಹೊಸ ಆನೆಗಳು: ತಾಲೀಮು ಆರಂಭವಾದಾಗ ಅಂಬಾರಿ ಆನೆ ಅಭಿಮನ್ಯು ಮುಂದಾಳತ್ವದಲ್ಲಿ ದಸರಾ ಗಜಪಡೆಯನ್ನು ಸಾಲಾಗಿ ಕರೆದೊಯ್ಯಲಾಯಿತು. ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನದಿಂದ ಅರಮನೆಗೆ ವಾಪಸ್ಸಾಗುವಾಗ ಭೀಮ ಹಾಗೂ ಲಕ್ಷ್ಮೀ ಆನೆಯ ನೇತೃತ್ವದಲ್ಲಿ ಉಳಿದ ಆನೆಗಳನ್ನು ಸಾಲಾಗಿ ಕರೆದೊಯ್ಯಲಾಯಿತು. ವಾಪಸ್ಸಾಗುವಾಗ ಮೊದಲೇ ಭೀಮ ಸಾಗಿದರೂ ದೃತಿಗೆಡಲಿಲ್ಲ. ಭೀಮ ಹಾಗೂ ಲಕ್ಷ್ಮೀ ದಸರಾ ಮಹೋತ್ಸವದಲ್ಲಿ ಎರಡನೇ ಬಾರಿಗೆ ಪಾಲ್ಗೊಳ್ಳುತ್ತಿರುವುದರಿಂದ ಅವುಗಳ ವರ್ತನೆ ಗಮನಿಸಲು ಮುಂಚೂಣಿಯಲ್ಲಿ ಸಾಗಲು ಅವಕಾಶ ಮಾಡಿಕೊಡಲಾಯಿತು. ಅದರ ಹಿಂದೆ ಅರ್ಜುನ ಹಾಗೂ ಹೊಸ ಆನೆ ಮಹೇಂದ್ರ ಹೆಜ್ಜೆ ಹಾಕಿದವು. ಕೊನೆಯದಾಗಿ ಅಭಿಮನ್ಯು ಹೆಜ್ಜೆ ಹಾಕಿತು. ಇದರಿಂದ ಮೈಸೂರಿಗೆ ಬಂದಿರುವ 9 ಆನೆಗಳೂ ನಿರೀಕ್ಷೆಗೂ ಮೀರಿ ವರ್ತಿಸಿ, ಭರವಸೆ ಹೆಚ್ಚಿಸಿದವು. ಕುಮ್ಕಿ ಆನೆಗಳಾದ ಕಾವೇರಿ, ಚೈತ್ರಾ, ಗೋಪಾಲಸ್ವಾಮಿ, ಧನಂಜಯ ಸಹ ರಾಜಬೀದಿಯಲ್ಲಿ ಗಾಂಭೀರ್ಯದಿಂದ ಹೆಜ್ಜೆ ಹಾಕಿದವು.

ಕೈ ಮುಗಿದ ಜನ: ಅರಮನೆಯಿಂದ ಸಯ್ಯಾಜಿರಾವ್ ರಸ್ತೆ ಮೂಲಕ ಬನ್ನಿಮಂಟಪದ ಪಂಜಿನ ಕವಾಯತ್ ಮೈದಾನದವರೆಗೆ ಸಾಗಿದ ಗಜಪಡೆಯನ್ನು ಕಂಡು ಜನರು ಪುಳಕಿತರಾದರು. ದಾರಿಯುದ್ದಕ್ಕೂ ರಸ್ತೆಯ ಎರಡೂ ಬದಿಯಲ್ಲೂ ನಿಂತಿದ್ದ ಜನ ದಸರಾ ಗಜಪಡೆಗೆ ಕೈಮುಗಿದು ನಮಿಸಿದರು. ಅಲ್ಲದೆ, ವಾಹನ ಸವಾರರೂ ಸೇರಿದಂತೆ ಬಹುತೇಕರು ಆನೆಗಳ ಫೋಟೋ ತೆಗೆದುಕೊಂಡು ಸಂಭ್ರಮಿಸಿದರು.

ಹೂವು–ಹಣ್ಣು ಸಮರ್ಪಿಸಿದ ವ್ಯಾಪಾರಿಗಳು: ತಾಲೀಮಿಗಾಗಿ ಬರುತ್ತಿದ್ದ ಗಜಪಡೆಗೆ ಎಂದಿನಂತೆ ರಸ್ತೆ ಬದಿ ವ್ಯಾಪಾರಿಗಳು ಹೂವು, ಹಣ್ಣು ಸಮರ್ಪಿಸಿ ಭಕ್ತಿಯಿಂದ ನಮಿಸಿದರು. ತಾಲೀಮಿನಲ್ಲಿ ಡಿಸಿಎಫ್ ಡಾ.ವಿ.ಕರಿಕಾಳನ್, ಆರ್‌ಎಫ್‌ಓ ಸಂತೋಷ್‌ಕುಮಾರ್, ಪಶುವೈದ್ಯ ಡಾ.ಮುಜೀಬ್, ಸಹಾಯಕರಾದ ರಂಗರಾಜು, ಅಕ್ರಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಬಿಜೆಪಿ ವತಿಯಿಂದ ಭಾನುವಾರ ಬೃಹತ್ ಬೈಕ್ ರ್‍ಯಾಲಿ ಆಯೋಜಿಸಲಾಗಿತ್ತು. ರ್‍ಯಾಲಿಯಲ್ಲಿ 500ಕ್ಕೂ ಹೆಚ್ಚು ಬೈಕ್‌ಗಳಿದ್ದವು. ಸಂಸದ ಪ್ರತಾಪ್‌ಸಿಂಹ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಮುಖಂಡರಾದ ಮಂಜುನಾಥ್, ಗಿರಿಧರ್, ಭಾನುಪ್ರಕಾಶ್, ಸ್ವಾಮಿ, ಪಾಲಿಕೆ ಸದಸ್ಯರಾದ ಸಾತ್ವಿಕ್ ಸಂದೇಶ್ ಸ್ವಾಮಿ, ಉಷಾ ನಾರಾಯಣಪ್ಪ, ಅಶ್ವಿನಿ ಶರತ್ ಮತ್ತಿತರರಿದ್ದರು.


ಪಿಎಚ್.ಡಿ ಪದವಿ



ಮೈಸೂರು: ಡಾ. ಹೆಚ್.ಪಿ. ಜ್ಯೋತಿ ಅವರ ಮಾರ್ಗದರ್ಶನದಲ್ಲಿ ಉಮ್ಮೆ ಹನಿ ಸಮಾಜ ಕಾರ್ಯ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಾವಯವ ಕೃಷಿ ಕುರಿತು ವಿಚಾರ ಸಂಕಿರಣ

ರಸಗೊಬ್ಬರ ಬಳಕೆಯಿಂದ ಭೂಮಿ, ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ



ಮೈಸೂರು, ಆ.14(ಪಿಎಂ)– ರಾಸಾಯನಿಕ ಗೊಬ್ಬರದ ಅತಿಯಾದ ಬಳಕೆಯಿಂದ ಮಣ್ಣಿನ ಆರೋಗ್ಯ ಮಾತ್ರವಲ್ಲದೆ, ಮನುಷ್ಯನ ಆರೋಗ್ಯದ ಮೇಲೂ ತೀವ್ರ ತರವಾದ ದುಷ್ಪರಿಣಾಮ ಉಂಟಾಗುತ್ತಿದೆ. ಇದಕ್ಕೆ ಸಾವಯವ ಕೃಷಿ ಪದ್ಧತಿ ಅನುಸರಿಸುವುದೇ ಸೂಕ್ತ ಪರಿಹಾರ ಎಂದು ನಾಗನಹಳ್ಳಿಯ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಹಿರಿಯ ಕ್ಷೇತ್ರ ಅಧೀಕ್ಷಕ ಡಾ.ಪಿ.ಪ್ರಕಾಶ್ ತಿಳಿಸಿದರು.

ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ನ್ಯಾಚುರಿಯಲ್ ಸಂಸ್ಥೆ, ರಾಷ್ಟ್ರೀಯ ಹಿಂದೂ ಸಮಿತಿ ಹಾಗೂ ಆಶ್ರಮದ ಸಂಯುಕ್ತಾಶ್ರಯದಲ್ಲಿ 'ರೈತ ವಿಕಾಸ ಸಂಗಮ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ 'ಸಾವಯವ ಕೃಷಿ' ಕುರಿತ ವಿಚಾರ ಸಂಕಿರಣದಲ್ಲಿ ವಿಚಾರ ಮಂಡಿಸಿ ಅವರು ಮಾತನಾಡಿದರು.

ಭಾರತೀಯ ಕೃಷಿ ಇಂದು ಕವಲುದಾರಿಯಲ್ಲಿದೆ. ನಮ್ಮ ರೈತರು ಮಣ್ಣಿನ ಆರೋಗ್ಯದ ದೃಷ್ಟಿಯಿಂದ ಯಾವ ಕೃಷಿ ಪದ್ಧತಿ ಅನುಸರಿಬೇಕೆಂದು ತಿಳಿಯದಾಗಿದ್ದಾರೆ. ಮಣ್ಣಿನ ಆರೋಗ್ಯ ಕಾಪಾಡಲು ಸಾವಯುವ ಕೃಷಿಯೊಂದೇ ಮಾರ್ಗ.

> ಕೃಷಿ ಮಾಡುವ ರೈತರು ಋಷಿಗಳು. ಅವರು ದೇಶಕ್ಕೆ ಅನ್ನ ನೀಡುವ ಪುಣ್ಯ ಕಾರ್ಯದಲ್ಲಿ ನಿರತರಾದವರು. ಅನ್ನದಾತರು ದೈವಾಂಶ ಹೊಂದಿರುವವರು. ರಾಸಾಯನಿಕ ಗೊಬ್ಬರ ಬಳಕೆಯ ಅನಾಹುತಗಳ ಬಗ್ಗೆ ರೈತರಿಗೆ ಅರಿವಿಲ್ಲ. ಒಳ್ಳೆಯ ಆಹಾರ ಉತ್ಪಾದನೆ ಮೂಲಕ ಸಮಾಜದ ಆರೋಗ್ಯ ಕಾಪಾಡಬೇಕಿದೆ.
> -ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ

ಇಡೀ ಪ್ರಪಂಚದ ಕೃಷಿ ಕ್ಷೇತ್ರದ ನೋಡಿದಾಗ, ಮಣ್ಣು ಬರಡಾಗುತ್ತಿರುವ ಸ್ಥಿತಿ ಗೋಚರಿಸುತ್ತದೆ. 1950–51ರ ದಶಕದಲ್ಲಿ ರಾಸಾಯನಿಕ ಗೊಬ್ಬರವನ್ನು ದೇಶದಲ್ಲಿ ಕೇವಲ 69 ಸಾವಿರ ಮೆಟ್ರಿಕ್ ಟನ್ ಮಾತ್ರ ಉಪಯೋಗಿಸುತ್ತಿದ್ದೆವು. ಆದರೆ ಇಂದು ನಾವು 3 ಕೋಟಿ 25 ಲಕ್ಷ ಟನ್ ರಾಸಾಯನಿಕ ಗೊಬ್ಬರ ಉಪಯೋಗಿಸುತ್ತಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ರಾಸಾಯನಿಕ ಗೊಬ್ಬರ ಹಾಕುವುದರಿಂದ ಜೈವಿಕ ಗುಣಧರ್ಮಗಳು ಏರುಪೇರು ಆಗುತ್ತಿವೆ. ಮಣ್ಣಿನ ಫಲವತ್ತತೆಯಲ್ಲಿ ಇಳಿಮುಖ ಕಾಣುತ್ತಿದ್ದೇವೆ. ನಾವು ಹಾಕುವ ರಾಸಾಯನಿಕ ಗೊಬ್ಬರದಿಂದ ಬಿಡುಗಡೆಯಾಗುವ ಗ್ರೀನ್‌ಹೌಸ್ ಅನಿಲ (ಹಸಿರು ಮನೆ ಅನಿಲ) ಹೆಚ್ಚಿನ ಪ್ರಮಾಣದಲ್ಲಿ ಬಿಡುಗಡೆಯಾಗಿ ಓಜೋನ್ ಪದರದಲ್ಲಿ ರಂಧ್ರ ಉಂಟುಮಾಡುವ ಪರಿಸ್ಥಿತಿ ಎದುರಾಗಿದೆ ಎಂದರು.

ರಾಸಾಯನಿಕದಿಂದ ಮಧುಮೇಹ ಹೆಚ್ಚಳ: ಮಧುಮೇಹ ರೋಗಕ್ಕೆ ಸಂಬಂಧಿಸಿದಂತೆ ದೇಶ ಇಂದು ಪ್ರಪಂಚದಲ್ಲೇ ಮೊದಲ ಸ್ಥಾನದಲ್ಲಿದೆ. ಇದಕ್ಕೆ ಕಾರಣ ರಾಸಾಯನಿಕ ಗೊಬ್ಬರದ ಅತಿಯಾದ ಬಳಕೆಯಾಗಿದೆ. ಇದೇ ರೀತಿ ಮುಂದುವರೆದರೆ ಭವಿಷ್ಯದಲ್ಲಿ ಹುಲ್ಲು, ಗರಿಕೆ ಕೂಡ ಭೂಮಿ ಮೇಲೆ ಬೆಳೆಯುವುದು ಅನುಮಾನವಾಗಲಿದೆ. ಇದಕ್ಕಿಂತ ಹೆಚ್ಚು ಗಂಡಾಂತರ ಎಂದರೆ ಕೀಟನಾಶಕ, ಕಳೆನಾಶಕ ಬಳಕೆ. ಇವುಗಳನ್ನು ಬೆಳೆಗಳಿಗೆ ಬಳಸುವುದರಿಂದ ಮನುಷ್ಯನ ಜೀವಕ್ಕೆ ಗಂಡಾಂತರವಾಗುವ ಅಂಶಗಳು ಗೋಚರವಾಗುತ್ತಿವೆ ಎಂದು ಎಚ್ಚರಿಕೆ ನೀಡಿದರು.

ಮನುಷ್ಯ ಅನಾರೋಗ್ಯ ಮುಕ್ತವಾಗಲು ಸಾವಯವ ಕೃಷಿಯೇ ಪರಿಹಾರ. ನಮ್ಮ ದೇಶದ ಗರ್ಭಿಣಿಯರಲ್ಲಿ ಶೇ.25ರಷ್ಟು ಮಂದಿ ಕಡಿಮೆ ತೂಕದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಇದರಿಂದ ಅವರು ಹೆರುವ ಮಗುವಿನ ಮೇಲೂ ದುಷ್ಪರಿಣಾಮ ಉಂಟಾಗುತ್ತದೆ. 10 ವರ್ಷದವರೆಗಿನ ಮಕ್ಕಳಲ್ಲಿ ಶೇ.25ರಷ್ಟು ಮಕ್ಕಳು ತಮ್ಮ ವಯಸ್ಸಿಗೆ ಪೂರಕ ಬೆಳವಣಿಗೆ ಹೊಂದಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ರಾಸಾಯನಿಕ ಎಂಬ ಕಲ್ಮಷ ಕೈಬಿಡಬೇಕು. ಸಾವಯುವ ಕೃಷಿ ಅಳವಡಿಸಿಕೊಂಡ ಕೂಡಲೇ ಇಳುವರಿ ಹೆಚ್ಚಳಗೊಳ್ಳಲು ಸಾಧ್ಯವಿಲ್ಲ. ಹಂತ ಹಂತವಾಗಿ ಸಾವಯವ ಕೃಷಿಯತ್ತ ಹೋಗಬೇಕಿದ್ದು, ಇದರಿಂದ ಸಮಾಜಕ್ಕೆ ಒಳಿತಾಗಲಿದೆ ಎಂದು ತಿಳಿಸಿದರು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉದ್ಘಾಟಿಸಿ ಮಾತನಾಡಿದರು. ಸಂಪನ್ಮೂಲ ವ್ಯಕ್ತಿಗಳು ವಿವಿಧ ವಿಚಾರ ಮಂಡಿಸಿದರು. ಜಂಟಿ ಕೃಷಿ ನಿರ್ದೇಶಕ ಡಾ.ಬಿ.ಎಸ್. ಚಂದ್ರಶೇಖರ್, ದೇಸಿಬೀಜ ಉತ್ಪಾದನಾ ಕಂಪನಿ ಸಹಕಾರ ನಿಯಮಿತದ ನಿರ್ದೇಶಕ ಕೃಷ್ಣಪ್ರಸಾದ್, ರಾಷ್ಟ್ರೀಯ ಹಿಂದೂ ಸಮಿತಿ ಅಧ್ಯಕ್ಷ ವಿಕಾಸ್‌ಶಾಸ್ತ್ರಿ, ನ್ಯಾಚುರಿಯಲ್ ಸಂಸ್ಥೆ ಪ್ರತಿನಿಧಿಗಳಾದ ಲಲಿತಾ, ಗಾಯಿತ್ರಿ ಸೇರಿದಂತೆ ಜಿಲ್ಲೆಯ ರೈತರು ಹಾಜರಿದ್ದರು.

ಗಾಂಧಿ ಚೌಕದಲ್ಲಿ ಅಜಾದಿ ಕಾ ಅಮೃತ ಮಹೋತ್ಸವ



ಮೈಸೂರು,ಆ.14(ಎಸ್‌ಪಿಎನ್)– ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಘಟಕದ ವತಿಯಿಂದ 75ನೇ ಸ್ವಾತಂತ್ರ್ಯದ 'ಆಜಾದಿ ಕಾ ಅಮೃತ್ ಮಹೋತ್ಸವ ಪ್ರಯುಕ್ತ ಚಾಮರಾಜ ಕ್ಷೇತ್ರದ ಗಾಂಧಿಚೌಕದಲ್ಲಿ ಮೌನ ಮೆರವಣಿಗೆ ಹಮ್ಮಿಕೊಳ್ಳಲಾಯಿತು.

ಮೆರವಣಿಗೆಯಲ್ಲಿ 'ಏಕ ಭಾರತ್, ಶ್ರೇಷ್ಠ ಭಾರತ್', 'ಅಖಂಡ ಭಾರತ ವಿಜಭನೆ ಕರಾಳ ನೆನಪು', ಸೇರಿದಂತೆ ಅನೇಕ ಘೋಷಣೆಗಳ ಭಿತ್ತಿಪತ್ರಗಳನ್ನು ರಾಷ್ಟ್ರಧ್ವಜ ನಡುವೆ ಪ್ರದರ್ಶಿಸಿದ ಬಿಜೆಪಿ ಕಾರ್ಯಕರ್ತರು, ಭಾರತ ಮಾತಾ ಭಾವಚಿತ್ರಕ್ಕೆ ಭಾಜಪ ನಗರ ಘಟಕದ ಅಧ್ಯಕ್ಷ ಶ್ರೀವತ್ಸ, ಗಾಂಧಿ ವೃತ್ತದ ಬಳಿ ಪುಷ್ಪಾರ್ಚಾನೆ ಮಾಡಿ ಮೌನ ಮೆರವಣಿಗೆ ಚಾಲನೆ ನೀಡಿದರು.

ಈ ಮೆರವಣಿಗೆಯು ಗಾಂಧಿ ವೃತ್ತದಿಂದ ಆರಂಭಗೊಂಡ ಕೆ.ಟಿ.ರಸ್ತೆಯ ಮಾರ್ಗವಾಗಿ ಸಯ್ಯಾಜಿರಾವ್ ರಸ್ತೆ ಕೆಆರ್ ಆಸ್ಪತ್ರೆ, ಅಶೋಕ ರಸ್ತೆ ಮೂಲಕ ಸಾಗಿ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಬಳಿ ಪುರಭವನದಲ್ಲಿ ಮುಕ್ತಾಯವಾಯಿತು. ಮೈಸೂರು ನಗರ ಅಧ್ಯಕ್ಷ ಶ್ರೀವತ್ಸ ಮಾತನಾಡಿ, ನರೇಂದ್ರ ಮೋದಿಯವರ ಕರೆಯಂತೆ ದೇಶಾದ್ಯಂತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸುವರ್ಣ ಸ್ವಾತಂತ್ರ್ಯ ಮಹೋತ್ಸವಕ್ಕೆ ಮೆರಗು ನೀಡಿದ್ದು ಅದರಂತೆ ಚಾಮರಾಜ ಕ್ಷೇತ್ರದ ವತಿಯಿಂದ ಮೆರವಣಿಗೆಯ ಮೂಲಕ ಜನರನ್ನು ತಲುಪಲು ಕೆಲಸ ಮಾಡಿರುವುದು ಶ್ಲಾಘನೀಯ ಕಾರ್ಯ ಎಂದರು. ಈ ವೇಳೆ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ನಗರಪಾಲಿಕೆ ಸದಸ್ಯರಾದ ಎಂ.ಸತೀಶ್, ಪ್ರಮೀಳಾ ಭರತ್, ಎಂ.ಯು. ಸುಬ್ಬಯ್ಯ, ರವೀಂದ್ರ, ಆರ್.ರಂಗಸ್ವಾಮಿ, ವೇದಾವತಿ, ಎಂ.ಚಿಕ್ಕವೆಂಕಟು, ಗಿರೀಶ್ ಪ್ರಸಾದ್, ಬಿಜೆಪಿ ಮುಖಂಡರಾದ ಎಲ್. ಚೌಡಪ್ಪ , ಚಾಮರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ರಮೇಶ್, ಪುನೀತ್, ದಿನೇಶ್, ಗೌಡ, ದಾಸಪ್ರಕಾಶ್, ಯುವ ಮೋರ್ಚಾ ಅಧ್ಯಕ್ಷರಾದ ಸಚಿನ್ ಆರ್.ಗೌಡ, ಆಶ್ರಯ ಸಮಿತಿ ಸದಸ್ಯರಾದ ಅನುಜ್ ,ಎಂ. ಮಹೇಶ್, ಜೆಸಿಬಿ ರವಿ, ಹರ್ಷ, ಸಿದ್ದರಾಮ, ತನುಜಾ, ಕವಿತಾ, ದೇವರಾಜ್, ಶಾಂತಿ, ಹರೀಶ್, ಅರವಿಂದ, ಪರಮೇಶ್‌ಗೌಡ, ಜಯಣ್ಣ, ಭೈರಪ್ಪ, ಬಿ.ಜೆ.ನಾರಾಯಣ ಸ್ವಾಮಿ, ಚಿರಂತ್, ಯತೀಶ್, ದಶರಥ, ಪಂಕಜ್, ಸಂದೀಪ್ ಅಶ್ವಥ್, ನಾಗ, ಹನುಮಂತ, ಅರ್ಜುನ್, ಶ್ರೀವತ್ಸ ಚರಣ್, ಯೋಗೇಶ್, ಸೂರಜ್, ಕೇಬಲ್ ವಿಜಿ, ಪನ್ನಲಾಲ್ ಸೇರಿದಂತೆ ವಿವಿಧ ಮೋರ್ಚಾ ಮುಖಂಡರು ಮತ್ತು ಬಿಜೆಪಿ ಎಲ್ಲಾ ಕಾರ್ಯಕರ್ತರು ಭಾಗವಹಿಸಿದ್ದರು.



ಮೈಸೂರಿನ ಬಿಜೆಪಿ ಕಚೇರಿ ಬಳಿ ಭಾನುವಾರ ಮಧ್ಯರಾತ್ರಿ 12 ಗಂಟೆಗೆ ಧ್ವಜಾರೋಹಣ ನೆರವೇರಿಸಲಾಯಿತು. ಸಂಸದ ಪ್ರತಾಪ್‌ಸಿಂಹ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಮುಖಂಡರಾದ ಬಿ.ಎಂ.ರಘು, ಅರುಣ್ ಕುಮಾರ್ ಗೌಡ, ಜಿ.ಎಂ.ಮಹೇಶ್, ಜಂಬುರಾಮ್, ಸೋಮಶೇಖರ್, ಕಿರಣ್ ಗೌಡ ಸೇರಿದಂತೆ ನೂರಾರು ಮಂದಿ ಭಾಗಿಯಾಗಿದ್ದರು.

ವಿದ್ಯಾರಣ್ಯಪುರಂ ಠಾಣೆ ಇನ್ಸ್‌ಪೆಕ್ಟರ್ ರಾಜು ಸೇರಿ ರಾಜ್ಯದ 18 ಪೊಲೀಸರಿಗೆ ರಾಷ್ಟ್ರಪತಿ ಪದಕ

ಬೆಂಗಳೂರು, ಆ.14– ಪೊಲೀಸರ ಗಣನೀಯ ಸೇವೆಗೆ ನೀಡುವ ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪದಕವನ್ನು ಕೇಂದ್ರ ಸರ್ಕಾರ ಘೋಷಿಸಿದ್ದು, ರಾಜ್ಯದ 18 ಪೊಲೀಸ್ ಅಧಿಕಾರಿಗಳಿಗೆ ಪದಕ ಲಭಿಸಿದೆ. ದೇಶದ ವಿವಿಧ ರಾಜ್ಯಗಳ ಪೊಲೀಸ್ ಸಿಬ್ಬಂದಿ ಪದಕಗಳನ್ನು ಪಡೆದಿದ್ದು, ಈ ಸಂಬಂಧ ಪದಕ ವಿಜೇತರ ಪಟ್ಟಿಯನ್ನು ಕೇಂದ್ರ ಗೃಹ ಸಚಿವಾಲಯ ಪ್ರಕಟಿಸಿದೆ. ನಂಜಪ್ಪ ಶ್ರೀನಿವಾಸ್, ಎಸ್‌ಪಿ ಮತ್ತು ಪ್ರಿನ್ಸಿಪಲ್ ಪೊಲೀಸ್ ತರಬೇತಿ ಶಾಲೆ ಕಡೂರು, ಪ್ರತಾಪ್ ಸಿಂಗ್ ತುಕರಾಮ್ ತೋರಾಟ್, ಡಿವೈಎಸ್‌ಪಿ, ಐಎಸ್‌ಡಿ (DYSP-ISD), ನಂಬೂರು ಶ್ರೀನಿವಾಸ್ ರೆಡ್ಡಿ, ಡಿವೈಎಸ್‌ಪಿ, ಸಿಐಡಿ ಫಾರೆಸ್ಟ್ ಸೆಲ್, ನರಸಿಂಹಮೂರ್ತಿ ಪಿಳ್ಳಮುನಿಯಪ್ಪ, ಡಿವೈಎಸ್‌ಪಿ ಸಿಐಡಿ (DYSP-CID), ಪ್ರಕಾಶ್ .ಆರ್, ಡಿವೈಎಸ್‌ಪಿ ಎಸಿಬಿ (ACB), ಶಿವಕುಮಾರ್ ಟಿ ಎಂ, ಎಸಿಪಿ ಸುಬ್ರಮಣ್ಯಪುರ ಬೆಂಗಳೂರು, ಝಾಕೀರ್ ಹುಸೇನ್, ಎಸಿಪಿ ಕಲಬುರಗಿ ಉಪವಿಭಾಗ, ರಾಘವೇಂದ್ರ ರಾವ್, ಎಸಿಪಿ, ಬೆರಳಚ್ಚು ವಿಭಾಗ ಬೆಂಗಳೂರು, ರಾಜ ಚಿಕ್ಕಹನುಮೇಗೌಡ, ಇನ್ಸ್‌ಪೆಕ್ಟರ್ ವಿದ್ಯಾರಣ್ಯಪುರ ಮೈಸೂರು, ಡಿ.ಬಿ. ಪಾಟೀಲ್, ಸರ್ಕಲ್ ಇನ್ಸ್‌ಪೆಕ್ಟರ್, ವಿಜಯಪುರ ರೈಲ್ವೆ, ಮಹಮ್ಮದ್ ಅಲಿ, ಇನ್ಸ್‌ಪೆಕ್ಟರ್ ಎಸಿಬಿ (ACB), ರವಿ ಬೆಳವಾಡಿ, ಇನ್ಸ್‌ಪೆಕ್ಟರ್ ಶೃಂಗೇರಿ ಪೊಲೀಸ್ ಠಾಣೆ, ಮುಖೀದ್ ಖಾನ್, ಸ್ಪೆಷಲ್ ಆರ್‌ಪಿಐ, ಕೆಎಸ್‌ಆರ್‌ಪಿ (KSRP), ಮುರಳಿ ರಾಮಕೃಷ್ಣಪ್ಪ, ಸ್ಪೆಷಲ್ ಎಆರ್‌ಎಸ್‌ಐ, ಕೆಎಸ್‌ಆರ್‌ಪಿ (KSRP), ಮಹದೇವಯ್ಯ, ಎಆರ್ ಎಸ್‌ಐ ಕೆಎಸ್‌ಆರ್‌ಪಿ (KSRP), ಡಿ.ಬಿ. ಶಿಂಧೆ, ಎಎಸ್‌ಐ ಬೆಳಗಾವಿ ಸ್ಪೆಷಲ್ ಬ್ರಾಂಚ್, ರಂಜಿತ್ ಶೆಟ್ಟಿ, ಎಎಸ್‌ಐ ಕೆಂಪೇಗೌಡನಗರ ಪೊಲೀಸ್ ಠಾಣೆ, ಬಸವರಾಜು .ಬಿ, ಸ್ಪೆಷಲ್ ಎಆರ್‌ಎಸ್‌ಐ (ARSI) ರಾಜ್ಯ ಗುಪ್ತದಳ.

ವಿಶ್ರಾಂತಿ ಗೃಹ ಕುಸಿದು ನಾಲ್ವರು ಕಾರ್ಮಿಕರಿಗೆ ಗಾಯ

ಮೈಸೂರು, ಆ.14(ಎಂಕೆ)– ನಿರ್ಮಾಣ ಹಂತದಲ್ಲಿದ್ದ ಪೌರಕಾರ್ಮಿಕರ ವಿಶ್ರಾಂತಿ ಗೃಹ ಕುಸಿದು ಕಟ್ಟಡ ಕಾರ್ಮಿಕರು ಗಾಯಗೊಂಡಿರುವ ಘಟನೆ ಮೈಸೂರಿನ ಹೆಬ್ಬಾಳ 2ನೇ ಹಂತದ ಮುಖ್ಯ ರಸ್ತೆಯಲ್ಲಿ ಭಾನುವಾರ ಸಂಭವಿಸಿದೆ. ಮೈಸೂರು ನಗರಪಾಲಿಕೆ ವಾರ್ಡ್ ನಂ.2ರ ವ್ಯಾಪ್ತಿಯ ಹೆಬ್ಬಾಳ ಮುಖ್ಯರಸ್ತೆ ಬದಿಯಲ್ಲಿ ನಿರ್ಮಾಣ ಹಂತದಲ್ಲಿರುವ ಪೌರಕಾರ್ಮಿಕರ ವಿಶ್ರಾಂತಿ ಗೃಹಕ್ಕೆ ಹಾಕುತ್ತಿದ್ದ ಕಾಂಕ್ರೀಟ್ ಮೇಲ್ಛಾವಣಿ ಕುಸಿದು ಬಿದ್ದಿದೆ. ಮೇಲ್ಛಾವಣಿ ಕಟ್ಟಡ ಕಾರ್ಮಿಕರ ಮೇಲೆ ಬಿದ್ದಿದ್ದು, ನಾಲ್ಕು ಮಂದಿ ಕಾರ್ಮಿಕರಿಗೆ ಗಾಯಗಳಾಗಿದೆ ಎಂದು ಸ್ಥಳೀಯ ನಿವಾಸಿಗಳು ತಿಳಿಸಿದ್ದಾರೆ. ಸುಮಾರು 6 ಲಕ್ಷ ರೂ. ವೆಚ್ಚದಲ್ಲಿ ವಿಶ್ರಾಂತಿ ಗೃಹ ನಿರ್ಮಾಣವಾಗುತ್ತಿದ್ದು, ಕಾಂಕ್ರಿಟ್ ಹಾಕುವ ವೇಳೆ ಸೆಂಟ್ರಿಂಗ್ ಸರಿಯಾಗಿ ಅಳವಡಿಸದೆ ಇದ್ದಿದ್ದರಿಂದ ಕುಸಿದು ಬಿದ್ದಿದೆ. ಗಾಯಗೊಂಡ ಪೌರಕಾರ್ಮಿಕರಿಗೆ ಸ್ಥಳೀಯ ನಿವಾಸಿಗಳೇ ಚಿಕಿತ್ಸೆ ಕೊಡಿಸಿದ್ದಾರೆ. ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ ಎಂದು ಪಾಲಿಕೆ ಸದಸ್ಯೆ ಪ್ರೇಮಾ ಶಂಕರೇಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೂರನೇ ಪುಟದಿಂದ

ಭಾರತಕ್ಕೆ ಸಲ್ಲುತ್ತದೆ

ನೀಡಿದ ಕೊಡುಗೆಗಳನ್ನು ರಾಷ್ಟ್ರಪತಿಗಳು ಶ್ಲಾಘಿಸಿದರು. 2047ರ ವೇಳೆಗೆ, ನಾವು ನಮ್ಮ ಸ್ವಾತಂತ್ರ್ಯ ಹೋರಾಟಗಾರರ ಕನಸುಗಳನ್ನು ಸಂಪೂರ್ಣವಾಗಿ ಸಾಕಾರಗೊಳಿಸುತ್ತೇವೆ. ಈಗಾಗಲೇ 'ಆತ್ಮನಿರ್ಭರ ಭಾರತ' ನಿರ್ಮಿಸುವ ಹಾದಿಯಲ್ಲಿದ್ದೇವೆ ಎಂದು ಹೇಳಿದರು.

ಭಾಷಣದಲ್ಲಿ ರಾಷ್ಟ್ರಕವಿ ಕುವೆಂಪು ಕರೆ ಉಲ್ಲೇಖ: ಇದೇ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತಮ್ಮ ಭಾಷಣದಲ್ಲಿ ರಾಷ್ಟ್ರ ಕವಿ ಕುವೆಂಪು ಅವರ ಕರೆಯನ್ನು ಉಲ್ಲೇಖಿಸಿದರು. 'ಮಾತೃಭೂಮಿಗಾಗಿ ಮತ್ತು ಸಹ ನಾಗರಿಕರ ಉದ್ಧಾರಕ್ಕಾಗಿ ಸಂಪೂರ್ಣ ತ್ಯಾಗಕ್ಕಾಗಿ ರಾಷ್ಟ್ರ ಕವಿ ಕುವೆಂಪು ಅವರ ಕರೆಯನ್ನು ಉಲ್ಲೇಖಿಸಿದ್ದಾರೆ.

"ನಾನು ಅಳಿವೆ, ನೀನು ಅಳಿವೆ
ನಮ್ಮ ಎಲುಬುಗಳ ಮೇಲೆ
ಮೂಡುವುದು – ಮೂಡುವುದು
ನವ ಭಾರತ ಲೀಲೆ"

ನವ ಭಾರತವನ್ನು ನಿರ್ಮಿಸಲು ಹೊರಟಿರುವ ದೇಶದ ಯುವ ಜನಾಂಗ ಈ ಆದರ್ಶಗಳನ್ನು ಪಾಲಿಸಬೇಕೆಂಬುದು ರಾಷ್ಟ್ರಪತಿ ದ್ರೌಪತಿ ಮುರ್ಮು ಜನತೆಗೆ ಕರೆ ನೀಡಿದ್ದು, ನಮ್ಮ ಪ್ರೀತಿಯ ದೇಶವು ನಮ್ಮ ಜೀವನದಲ್ಲಿ ನಮಗೆ ದೊರೆತಿರುವಂಥ ಎಲ್ಲವನ್ನೂ ನೀಡಿದೆ. ನಮ್ಮ ದೇಶದ ಸುರಕ್ಷತೆ, ಭದ್ರತೆ, ಪ್ರಗತಿ ಮತ್ತು ಸಮೃದ್ಧಿಗಾಗಿ ನಮ್ಮಿಂದ ಸಾಧ್ಯವಿರುವ ಎಲ್ಲವನ್ನೂ ನೀಡಲು ನಾವು ಸಂಕಲ್ಪ ಮಾಡಬೇಕು. ಭವ್ಯ ಭಾರತವನ್ನು ನಿರ್ಮಿಸಿದಾಗ ಮಾತ್ರ ನಮ್ಮ ಅಸ್ತಿತ್ವವು ಅರ್ಥಪೂರ್ಣವಾಗುತ್ತದೆ ಎಂದು ರಾಷ್ಟ್ರಪತಿ ಹೇಳಿದ್ದಾರೆ.

ಮೈಸೂರು ಸಜ್ಜು

ನೆರವೇರಿಸಲಿದ್ದು, ಸಂಸದ ಪ್ರತಾಪ ಸಿಂಹ, ಶಾಸಕರಾದ ಎಸ್.ಎ. ರಾಮದಾಸ್, ತನ್ವೀರ್ ಸೇಠ್, ಡಾ.ಯತೀಂದ್ರ ಸಿದ್ದರಾಮಯ್ಯ, ಅಶ್ವಿನ್ ಕುಮಾರ್, ಹರ್ಷವರ್ಧನ್, ಎಲ್.ನಾಗೇಂದ್ರ, ಜಿ.ಟಿ.ದೇವೇಗೌಡ, ಹೆಚ್.ಪಿ.ಮಂಜುನಾಥ್, ಕೆ.ಮಹದೇವ್, ಸಾ.ರಾ.ಮಹೇಶ್, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಮಂಜೇಗೌಡ, ಡಾ.ತಿಮ್ಮಯ್ಯ, ಮೇಯರ್ ಸುನಂದ ಪಾಲನೇತ್ರ, ಇತರೆ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಪಂ ಸಿಇಓ ಪೂರ್ಣಿಮಾ, ನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಸೇರಿದಂತೆ ಇತರೆ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಮೈಸೂರು ಪೊಲೀಸರಿಂದ ಕವಾಯಿತು ನಡೆಸಲಿದ್ದು, ವಿವಿಧ ಕಾಲೇಜಿನ ಎನ್‌ಎಸ್‌ಎಸ್ ಹಾಗೂ ಎನ್‌ಸಿಸಿ ವಿದ್ಯಾರ್ಥಿಗಳು ಕವಾಯಿತಿನಲ್ಲಿ ಭಾಗಿಯಾಗಲಿದ್ದಾರೆ ಅಲ್ಲದೆ, ವಿವಿಧ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಂದ ದೇಶಭಕ್ತಿ ಮೂಡಿಸುವ ಕಾರ್ಯಕ್ರಮ ಜರುಗಲಿದೆ ಎಂದು ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಿದೆ. ಹಾಗೂ ಸಂಜೆ 5 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿದೆ. ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮ ವೀಕ್ಷಣೆಗೆ ಮೈಸೂರಿನ ನಾಗರಿಕರಿಗೂ ಉಚಿತ ಪ್ರವೇಶವಿದ್ದು, ಬೆಳಗ್ಗೆ 9 ಗಂಟೆಯಿಂದ ಪ್ರಾರಂಭವಾಗಲಿರುವ ಕಾರ್ಯಕ್ರಮಕ್ಕೆ ನಾಗರಿಕರು ಪಾಲ್ಗೊಳ್ಳಬಹುದಾಗಿದೆ.

ವಿಶೇಷ ದೀಪಾಲಂಕಾರ: ಅಮೃತ ಮಹೋತ್ಸವ ಅಂಗವಾಗಿ ಮೈಸೂರು ಸರ್ಕಾರಿ ಕಚೇರಿಗಳು ತ್ರಿವರ್ಣ ದೀಪಾಲಂಕಾರದಿಂದ ಝಗಮಗಿಸುತ್ತಿವೆ. ಮೈಸೂರು ನಗರ ಪಾಲಿಕೆ ಕಚೇರಿ, ಜಿಲ್ಲಾ ಪಂಚಾಯತ್, ಮೈಸೂರು ಜಿಲ್ಲಾ ನ್ಯಾಯಾಲಯ ಆವರಣ ಸೇರಿದಂತೆ ಇತರೆ ಸರ್ಕಾರಿ ಕಚೇರಿ ಕಟ್ಟಡಗಳ ಮೇಲೆ ವಿಶೇಷ ದೀಪಾಲಂಕಾರದಿಂದ ಝಗಮಗಿಸುತ್ತಿವೆ.

ಮನೆಗಳ ಮೇಲೆ ಹಾರಾಡಿದ ತಿರಂಗಾ: ಆ.13ರಿಂದ 15ರವರೆಗೆ 'ಹರ್ ಘರ್ ತಿರಂಗಾ' ಅಭಿಯಾನಕ್ಕೆ ಸಾಥ್ ನೀಡಿರುವ ಮೈಸೂರು ಜನತೆ ತಮ್ಮತಮ್ಮ ಮನೆಗಳ ರಾಷ್ಟ್ರಧ್ವಜ ಆರಿಸಿ ರಾಷ್ಟ್ರ ಪ್ರೇಮ ಮೆರೆದಿದ್ದಾರೆ. ಇವರೊಂದಿಗೆ ಸರ್ಕಾರಿ ನೌಕರರು ತಮ್ಮ ಮನೆ ಮೇಲೆ ರಾಷ್ಟ್ರಧ್ವಜ ಹಾರಿಸಿದ್ದಾರೆ. ಇದಕ್ಕೆ ಹಲವು ಸಂಘಟನೆಗಳ ಪದಾಧಿಕಾರಿಗಳು ಮೈಸೂರು ಜಿಲ್ಲಾ ಮತ್ತು ನಗರದಲ್ಲಿ ಮನೆಮನೆಗೂ ಉಚಿತ ರಾಷ್ಟ್ರಧ್ವಜ ತಲುಪಿಸಿ ಅಮೃತ ಮಹೋತ್ಸವ ಯಶಸ್ವಿಗೆ ಶ್ರಮಿಸುತ್ತಿದ್ದಾರೆ.

ಶಾಲೆಗಳಲ್ಲಿ 3 ದಿನ ಧ್ವಜಾರೋಹಣ: ಅಮೃತ ಮಹೋತ್ಸವ ಅಂಗವಾಗಿ ಮೈಸೂರು ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಆ.13ರಿಂದ15ರವರೆಗೆ ರಾಷ್ಟ್ರಧ್ವಜ ಹಾರಿಸುವಂತೆ ಶಿಕ್ಷಣ ಇಲಾಖೆ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಶನಿವಾರದಿಂದಲೇ ಶಾಲೆಗಳಲ್ಲಿ ರಾಷ್ಟ್ರಧ್ವಜ ಹಾರಿಸಲಾಗಿದೆ. ಅಲ್ಲದೆ, ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಧ್ಯರಾತ್ರಿ ಧ್ವಜಾರೋಹಣ: ಅಮೃತ ಮಹೋತ್ಸವ ಅಂಗವಾಗಿ ಜೆಎಸ್‌ಎಸ್ ಆಸ್ಪತ್ರೆ ಮುಂಭಾಗ ರಾಮಾನುಜ ರಸ್ತೆಯಲ್ಲಿ ಭಾನುವಾರ ಮಧ್ಯರಾತ್ರಿ 12 ಗಂಟೆಗೆ ಆಟೋ ಚಾಲಕರು, ಸ್ಥಳೀಯ ನಿವಾಸಿಗಳು ಹಾಗೂ ಜೆಎಸ್‌ಎಸ್ ಆಸ್ಪತ್ರೆ ಸಿಬ್ಬಂದಿಗಳು ತ್ರಿವರ್ಣ ಹಾರಿಸಿ ಸ್ವಾತಂತ್ರ್ಯ ದಿನಾಚರಣೆ ಆಚರಿಸಿದರು.

“ ಕೇಂದ್ರ ಸರ್ಕಾರದ ಸೂಚನೆಯಂತೆ 'ಹರ್ ಘರ್ ತಿರಂಗಾ' ಅಭಿಯಾನ ಹಿನ್ನೆಲೆಯಲ್ಲಿ ಆ.15ರಂದು ತಾವು ಬಳಸಿದ ರಾಷ್ಟ್ರಧ್ವಜಗಳನ್ನು ನಾಗರಿಕರು ಕಸದ ರಾಶಿಗೆ ಬಿಸಾಡದೇ ನಿಮ್ಮ ಹತ್ತಿರದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ, ಹೆಚ್‌ಪಿ ಪೆಟ್ರೋಲ್ ಬಂಕ್‌ಗಳಿಗೆ ಅಥವಾ ಚಾಮರಾಜ ಜೋಡಿ ರಸ್ತೆಯಲ್ಲಿರುವ ಗಾಯತ್ರಿ ಚಿತ್ರಮಂದಿರಕ್ಕೆ ತಲುಪಿಸುವಂತೆ ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಪ್ರಶಾಂತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನಾಗರಿಕರಿಂದ ಸಂಗ್ರಹಿಸಿದ ಧ್ವಜಗಳನ್ನು ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ವತಿಯಿಂದ ಎಲ್ಲವನ್ನೂ ಒಟ್ಟು ಮಾಡಿ ಸಂವಿಧಾನದ ಪ್ರಕಾರ ಧ್ವಜ ವಿಲೇವಾರಿ ಮಾಡುತ್ತೇವೆ. ತ್ರಿವರ್ಣ ಧ್ವಜದ ಗೌರವಕ್ಕೆ ಎಂದಿಗೂ ಧಕ್ಕೆಯಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರಿಂದ ವಿವಿಧ ಸೌಲಭ್ಯಗಳ ವಿತರಣೆ



ಮೈಸೂರು,ಆ.14(ಆರ್‌ಕೆ)–ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕಲಾ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಫಲಾನುಭವಿಗಳಿಗೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ವಿತರಿಸಿದರು.

ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಜೀವನೋಪಾಯ ಉತ್ಸವವನ್ನು ಉದ್ಘಾಟಿಸಿದ ಸಚಿವರು, ದೀನ್ ದಯಾಳ್ ಅಂತ್ಯೋದಯ–ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (DAY-NULM)ದಡಿ ಮೈಸೂರಿನ ನಟರಾಜ ಸ್ವ–ಸಹಾಯ ಮಹಿಳಾ ಸಂಘಕ್ಕೆ 'ಅತ್ಯುತ್ತಮ ಸ್ವ–ಸಹಾಯ ಸಂಘ' ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು ನಗರದಲ್ಲಿರುವ 1060 ಬೀದಿ ಬದಿ ಮಹಿಳಾ ವ್ಯಾಪಾರಿಗಳನ್ನು ಫಲಾನುಭವಿಗಳೆಂದು ಗುರುತಿಸಲಾಗಿದ್ದು, ಸುಮಾರು 500 ಮಂದಿಗೆ ಗುರುತಿನ ಚೀಟಿ ಪ್ರಮಾಣ ಪತ್ರ ಹಾಗೂ ಸಾಲ ಸೌಲಭ್ಯಗಳನ್ನು ವಿತರಿಸಿದರು. ಸ್ವ–ಸಹಾಯ ಮಹಿಳಾ ಸಂಘಗಳ ಪೈಕಿ ನಟರಾಜ ಸ್ವ–ಸಹಾಯ ಮಹಿಳಾ ಸಂಘವು ಅತ್ಯುತ್ತಮ ಪ್ರಶಸ್ತಿಗೆ ಭಾಜನವಾಗಿದ್ದು, ಉಳಿದ ಫಲಾನುಭವಿಗಳಿಗೆ ಆಯಾ ಪಾಲಿಕೆ ವಲಯ ಕಚೇರಿಗಳಲ್ಲಿ ಸೌಲಭ್ಯಗಳನ್ನು ವಿತರಿಸಲಾಗುವುದು ಎಂದು ಮೇಯರ್ ಸುನಂದಾ ಪಾಲನೇತ್ರ ತಿಳಿಸಿದರು.

ಕೇಂದ್ರ ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಮೂಲಕ ಮೈಸೂರು ಮಹಾ ನಗರ ಪಾಲಿಕೆಯು ಫಲಾನುಭವಿಗಳಿಗೆ ಸ್ವಂತ ವೃತ್ತಿ ನಿರ್ವಹಿಸಲು ನೆರವಾಗುತ್ತಿದೆ. ಬೀದಿ ಬದಿ ವ್ಯಾಪಾರಿಗಳು ಈ ಯೋಜನೆಯ ಪ್ರಯೋಜನ ಪಡೆದುಕೊಂಡು ಸ್ವಾವಲಂಬಿ ಜೀವನ ನಡೆಸುವಂತೆ ಸುನಂದಾ ಪಾಲನೇತ್ರ ತಿಳಿಸಿದರು. ಶಾಸಕ ಜಿ.ಟಿ. ದೇವೇಗೌಡ, ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕಾರ್ಪೊರೇಟರ್ ಶಿವಕುಮಾರ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಮೈಸೂರು ಮಹಾನಗರ ಪಾಲಿಕೆ ಕಮಿಷನರ್ ಜಿ.ಲಕ್ಷ್ಮೀಕಾಂತ ರೆಡ್ಡಿ, ಹೆಚ್ಚುವರಿ ಆಯುಕ್ತರಾದ ಎಂ.ಜೆ.ರೂಪಾ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಾಧುಸ್ವಾಮಿ ನನಗಿಂತ ಮೇಧಾವಿ ಯಾರೂ ಇಲ್ಲ ಅಂದುಕೊಂಡಿದ್ದಾರೆ

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ವಾಗ್ಬಾಣ

ಮೈಸೂರು, ಆ.14(ಆರ್‌ಕೆ)–ಸರ್ಕಾರ ತೆವಳುತ್ತಿದೆ ಎಂಬ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿಕೆಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿರುಗೇಟು ನೀಡಿದ್ದಾರೆ.

ಮೈಸೂರಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಮಾಧುಸ್ವಾಮಿ ಅವರು ರಾಜ್ಯದಲ್ಲಿ ನನಗಿಂತ ಮೇಧಾವಿ, ಬುದ್ಧಿವಂತ ಯಾರೂ ಇಲ್ಲ ಅಂದುಕೊಂಡಿದ್ದಾರೆ. ನಾನೇ ಎಲ್ಲವನ್ನೂ ತಿಳಿದುಕೊಂಡಿದ್ದೇನೆ ಎನ್ನುವುದನ್ನು, ಅವರು ತಲೆಯಿಂದ ತೆಗೆದು ಹಾಕಬೇಕೆಂದು ಸ್ಪಷ್ಟವಾದ ಸಚಿವರಿಗೆ ಕಿವಿಮಾತು ಹೇಳಿದರು.

ಮೇಧಾವಿ ಸಚಿವರು ಹೇಳಿರುವಂತೆ ಸರ್ಕಾರ ಕುಂಟುತ್ತಿಲ್ಲ. ಬದಲಿಗೆ ಅವರ ಇಲಾಖೆ ಕುಂಟುತ್ತಿರಬಹುದು ಅಥವಾ ತೆವಳುತ್ತಿರಬಹುದು. ಸರ್ಕಾರದ ಎಲ್ಲಾ ಇಲಾಖೆ ಬಗ್ಗೆಯೂ ಮಾಧ್ಯಮಗಳಿಗೆ ಮಾಹಿತಿ ನೀಡುತ್ತಿರುವ ಮಾಧುಸ್ವಾಮಿ ಅವರಿಗೆ ತಿಳಿದಿರಬೇಕಲ್ಲಾ ಎಂದರು. ಆಗಸ್ಟ್ 28ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಒಂದು ವರ್ಷದ ಸಾಧನೆಯ ಕಾರ್ಯಕ್ರಮವಿದೆ. ಉತ್ತಮ ಕೆಲಸಗಳಾಗಿವೆ. ಬಿ.ಎಸ್.ಯಡಿಯೂರಪ್ಪನವರು ಇದ್ದಾಗಲೂ ಕೆಲಸವಾಗಿದೆ ಎಂದ ಅವರು, ಹೇಳಿಕೆ ನೀಡುವಾಗ ಎಚ್ಚರದಿಂದಿರಬೇಕೆಂದು ಸಲಹೆ ನೀಡಿದರು.

ಎಸ್.ಟಿ.ಸೋಮಶೇಖರ್ ನಾನು ಹೇಳಿದ ಕೆಲಸ ಮಾಡಿಲ್ಲ ಎಂಬ ಮಾಧುಸ್ವಾಮಿ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಮಂತ್ರಿ ಹೇಳಿದರೆಂದು ಕಾನೂನು ಬಾಹಿರವಾಗಿ ನೋಟಿಸ್ ಕೊಡಲು ಸಾಧ್ಯವಿಲ್ಲ. ಸಹಕಾರ ಬ್ಯಾಂಕುಗಳು ರೈತರಿಗೆ ಸೇರಿದ ಆಸ್ತಿ, ಮಾಧುಸ್ವಾಮಿ ಹೇಳಿಕೆಯಲ್ಲಿ ಯಾವುದೇ ಸತ್ಯ ಇಲ್ಲ. ತನಿಖೆಯಲ್ಲಿ ತಪ್ಪಿತಸ್ಥರೆಂದು ಕಂಡು ಬಂದರೆ ಮಾತ್ರ ಕ್ರಮ ಜರುಗಿಸಲಾಗುತ್ತದೆ ಎಂದರು.

ಆಜಾದಿ ಕಾ ಅಮೃತ ಮಹೋತ್ಸವ: ಬೈಕ್ ರ್‍ಯಾಲಿಗೆ ಶಾಸಕರಿಂದ ಚಾಲನೆ

ನಂಜನಗೂಡು,ಆ.14–ತ್ಯಾಗ ಬಲಿದಾನಗಳ ಮೂಲಕ ಹೋರಾಟ ನಡೆಸಿ ಸ್ವಾತಂತ್ರ್ಯ ತಂದು ಕೊಟ್ಟ ಹಿರಿಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.



ತಾಲೂಕಿನ ಬದನವಾಳು ಗ್ರಾಮದ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ಬೃಹತ್ ಬೈಕ್ ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿದರು.

ಬದನವಾಳು ಐತಿಹಾಸಿಕ ಸ್ಥಳವಾಗಿದೆ. ಗಾಂಧೀಜಿಯವರು ಗ್ರಾಮೀಣ ಉದ್ಯೋಗ, ಸ್ವದೇಶಿ ವಸ್ತುಗಳಿಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ 2 ಬಾರಿ ಬಂದು ಹೋಗಿದ್ದಾರೆ. ದೇಶಭಕ್ತಿ ಮೂಡಿಸಲು ಮತ್ತು ಸೌಹಾರ್ದಮಯ ಸಂದೇಶ ರವಾನಿಸುವ ಉದ್ದೇಶದೊಂದಿಗೆ ಇಂತಹ ಐತಿಹಾಸಿಕ ಸ್ಥಳದಿಂದ ಬೈಕ್ ರ್‍ಯಾಲಿ ನಡೆಸಲಾಗುತ್ತಿದೆ. ನಂಜನಗೂಡು ಶಾಂತಿ ಗೂಡಾಗಿದೆ. 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಜಾತಿ, ಧರ್ಮ, ಪಕ್ಷ ಭೇದ ಮರೆತು ಕೈ ಜೋಡಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವ ಮೂಲಕ ಸೌಹಾರ್ದಮಯ ಸಂದೇಶ ರವಾನಿಸಬೇಕು ಎಂದರು. ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್ ಮಾತನಾಡಿ, ಈ ಬೈಕ್ ರ್‍ಯಾಲಿ ಕೌಲಂದೆ, ಕಳಲೆ, ಹುರಾ, ಹುಲ್ಲಹಳ್ಳಿ, ಹೆಗ್ಗಡಹಳ್ಳಿ, ಬದನವಾಳು ಜಿಪಂ ವ್ಯಾಪ್ತಿಯ ಎಲ್ಲಾ ಗ್ರಾಪಂ ಕೇಂದ್ರಗಳಲ್ಲಿ 100 ಕಿಮೀ ತೆರಳಲಿದೆ ಎಂದು ಮಾಹಿತಿ ನೀಡಿದರು.

ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಕುಂಬ್ರಳ್ಳಿ ಸುಬ್ಬಣ್ಣ, ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ, ಬಿಜೆಪಿ ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ಸದಸ್ಯರಾದ ಬಿ.ಎಸ್.ರಾಮು, ಶಿವಣ್ಣ, ಮಹದೇವನಾಯಕ, ಯುವಮೋರ್ಚಾ ಅಧ್ಯಕ್ಷ ಸಂಜಯ್ ಶರ್ಮಾ, ಮುಖಂಡರಾದ ಸೋಮಣ್ಣ, ಬಾಲಚಂದ್ರ, ಪುಟ್ಟಸ್ವಾಮಿ, ಗಂಗಾಧರ ಇನ್ನಿತರರಿದ್ದರು.

ಹಿರಿಯ ಪತ್ರಕರ್ತ ಡಿ.ಎಂ.ರಾಜಕುಮಾರ್ ನಿಧನ

ವಿರಾಜಪೇಟೆ, ಆ.14– ಇಲ್ಲಿನ ತೆಲುಗರ ಬೀದಿ ನಿವಾಸಿ, ಹಿರಿಯ ಪತ್ರಕರ್ತ ಡಿ.ಎಂ.ರಾಜಕುಮಾರ್ (67) ಇಂದು ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅರಸು ನಗರದ ರುದ್ರಭೂಮಿಯಲ್ಲಿ ನೆರವೇರಿತು.

ಇವರ ನಿಧನ ಹಿನ್ನೆಲೆ ವಿರಾಜಪೇಟೆ ಪ್ರೆಸ್ ಕ್ಲಬ್ ಹಾಗೂ ತಾಲೂಕು ಪತ್ರಕರ್ತರ ಸಂಘದ ಸಂಯುಕ್ತ ಆಶ್ರಯದಲ್ಲಿ ಪ್ರೆಸ್‌ಕ್ಲಬ್ ಸಭಾಂಗಣದಲ್ಲಿ ಸಂತಾಪ ಸಭೆ ನಡೆಸಲಾಯಿತು. ವಿರಾಜಪೇಟೆ ಪ್ರೆಸ್ ಕ್ಲಬ್ ಅಧ್ಯಕ್ಷ ಕೋಲತಂಡ ರಘು ಮಾಚಯ್ಯ, ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ, ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಟಿ.ಎನ್. ಮಂಜುನಾಥ್, ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ಪಾರ್ಥ ಚಿಣ್ಣಪ್ಪ, ವಾಸು, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ರಜಿತ್‌ಕುಮಾರ್ ಗುಹ್ಯ, ತಾಲೂಕು ಸಂಘದ ನಿರ್ದೇಶಕರಾದ ಡಿ.ಮಂಜುನಾಥ್, ರವಿಕುಮಾರ್, ಕಿಶೋರ್ ಶೆಟ್ಟಿ, ಕಾಂಗೀರ ಬೋಪಣ್ಣ, ಹಿರಿಯ ಪತ್ರಕರ್ತ ಮಾಳೇಟಿರ ಶ್ರೀನಿವಾಸ್ ಮುಂತಾದವರು ರಾಜಕುಮಾರ್‌ರವರ ಗುಣಗಾನ ಮಾಡಿದರು.

ಈ ಸಂದರ್ಭ ದಿವಂಗತರಾದ ಡಿ.ಎಂ. ರಾಜಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಸಭೆಯಲ್ಲಿ ಮೌನ ಆಚರಿಸಿ ಸಂತಾಪ ಸೂಚಿಸಲಾಯಿತು.

ಚಾಮರಾಜನಗರ ಜಿಲ್ಲೆಗೆ 25ನೇ ವರ್ಷದ ಸಂಭ್ರಮ

ಇದುವರೆಗೂ ಹಲವು ಅಭಿವೃದ್ಧಿ ಕಾರ್ಯಗಳು, ಇನ್ನೂ ಆಗಬೇಕಿರುವುದು ಸಾಕಷ್ಟು



ಚಾಮರಾಜನಗರ, ಆ.14– ಚಾಮರಾಜನಗರ ಜಿಲ್ಲೆ ಎಂದು ಘೋಷಣೆಯಾಗಿ ಆಗಸ್ಟ್ 15ಕ್ಕೆ 25 ವರ್ಷ. ಬೆಳ್ಳಿ ಹಬ್ಬ ಸಡಗರದಲ್ಲಿರುವ ಚಾಮರಾಜನಗರ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿವೆ. ಮತ್ತಷ್ಟು ಅಭಿವೃದ್ಧಿ ಕೆಲಸಗಳು ಆಗಬೇಕಿದೆ.

1997ರ ಆಗಸ್ಟ್ 15ರಂದು ಆಗಿನ ಮುಖ್ಯಮಂತ್ರಿ ಜೆ.ಹೆಚ್.ಪಟೇಲ್ ಅವರು ಚಾಮರಾಜನಗರ ಸೇರಿದಂತೆ ಕೆಲ ತಾಲೂಕುಗಳನ್ನು ಸೇರಿಸಿ ಜಿಲ್ಲೆಯನ್ನಾಗಿ ಘೋಷಣೆ ಮಾಡಿದರು. ಇದಾದ ಕೆಲ ದಿನಗಳ ಬಳಿಕ ಜೆ.ಹೆಚ್.ಪಟೇಲ್ ಹಾಗೂ ಆಗಿನ ಚಾಮರಾಜನಗರ ಶಾಸಕ ವಾಟಾಳ್ ನಾಗರಾಜ್, ಮಲೆಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ಚಾಮರಾಜನಗರ ನೂತನ ಜಿಲ್ಲೆಯನ್ನಾಗಿ ಅರ್ಪಣೆ ಮಾಡಿದ್ದರು. ಅದೇ ದಿನ ಚಾಮರಾಜನಗರದಲ್ಲಿ ನಡೆದ ಜಿಲ್ಲಾ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಜಿ ರಾಜ್ಯಪಾಲರಾದ ಬಿ.ರಾಚಯ್ಯ ಅವರು, ಆ ವೇಳೆ ಉಪಮುಖ್ಯಮಂತ್ರಿ ಆಗಿದ್ದ ಸಿದ್ದರಾಮಯ್ಯ, ಶಾಸಕರಾಗಿದ್ದ ಹೆಚ್.ಎಸ್.ಮಹದೇವಪ್ರಸಾದ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈ ಕಾರ್ಯ ನಡೆದು ಆ.15ಕ್ಕೆ ಬರೋಬ್ಬರಿ 25 ವರ್ಷ. ಮೈಸೂರು ಜಿಲ್ಲೆಯಿಂದ ಪ್ರತ್ಯೇಕಗೊಂಡ ಚಾಮರಾಜನಗರದಲ್ಲಿ ಈ 25 ವರ್ಷದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ನಡೆದಿವೆ.

ಆಗಿರುವ ಕಾರ್ಯ ಹಲವು: ಎಲ್ಲಾ ಸರ್ಕಾರಿ ಕಚೇರಿಗಳು ಒಂದೇ ಕಟ್ಟಡದಲ್ಲಿ ಇರುವ ಜಿಲ್ಲಾಡಳಿತ ಭವನ(ಜಿಲ್ಲಾಧಿಕಾರಿ ಕಚೇರಿ), ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ, ಸರ್ಕಾರಿ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಬದನಗುಪ್ಪೆ, ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶ ಸ್ಥಾಪನೆ, ಕೆರೆಗಳಿಗೆ ನೀರು ತುಂಬಿಸುವುದು, ಮೈಸೂರು ವಿವಿಯ ಸ್ನಾತಕೋತ್ತರ ಕೇಂದ್ರ, ಪ್ರತ್ಯೇಕ ಹಾಲು ಒಕ್ಕೂಟ(ಚಾಮುಲ್), ಮಹದೇಶ್ವರಬೆಟ್ಟ ಅಭಿವೃದ್ಧಿ ಪ್ರಾಧಿಕಾರ ರಚನೆ, ನಗರದಲ್ಲಿ ಬಹುಕೋಟಿ ವೆಚ್ಚದ ಕ್ರೀಡಾಂಗಣ ನಿರ್ಮಾಣ, ಕೇಂದ್ರೀಯ ವಿದ್ಯಾಲಯ ಸ್ಥಾಪನೆ, ನಗರದ ಜೋಡಿರಸ್ತೆ ನಿರ್ಮಾಣ ಸೇರಿದಂತೆ ಅನೇಕ ಅಭಿವೃದ್ಧಿ ಕಾರ್ಯ ನಡೆದಿವೆ. ಇನ್ನೂ ಕೆಲವು ಕಾಮಗಾರಿಗಳು ಪ್ರಗತಿಯಲ್ಲಿವೆ.

ಆಗಬೇಕಿರುವುದು ಸಾಕಷ್ಟು: ಜಿಲ್ಲೆಯ ಎಲ್ಲಾ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ. ನಗರದಲ್ಲಿ ನಿರ್ಮಾಣವಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದ ಕಾಮಗಾರಿ ಅಪೂರ್ಣವಾಗಿದೆ. ನಗರದ ಏಕೈಕ ಬಿ.ರಾಚಯ್ಯ ಜೋಡಿರಸ್ತೆ ನೀಲನಕ್ಷೆಯಂತೆ ನಿರ್ಮಾಣ ಆಗಿಲ್ಲ. ಆರ್.ಧ್ರುವನಾರಾಯಣ್ ಅವರ ವಿಶೇಷ ಆಸಕ್ತಿ ಫಲವಾಗಿ ನಗರಕ್ಕೆ ಕಾನೂನು ಕಾಲೇಜು ಮಂಜೂರಾಗಿದ್ದರೂ ತರಗತಿಗಳು ಇನ್ನೂ ಆರಂಭವಾಗಿಲ್ಲ. ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡು ವರ್ಷಗಳೇ ಕಳೆದಿವೆ. ಈ ಬಗ್ಗೆ ಗಮನ ಹರಿಸುವವರು ಯಾರೂ ಇಲ್ಲವಾಗಿದ್ದಾರೆ. ಜಿಲ್ಲೆಗೆ ಮತ್ತೊಂದು ನವೋದಯ ಶಾಲೆ ತರುವ ಕೆಲಸ ನೆನೆಗುದಿಗೆ ಬಿದ್ದಿದೆ. ಚಾಮರಾಜನಗರದಿಂದ ಮೈಸೂರಿನವರೆಗೆ ರೈಲು ಸಂಚರಿಸುವ ಮಾರ್ಗದಲ್ಲಿ ಸಿಗುವ ಪಣ್ಯದಹುಂಡಿ, ಚಿನ್ನದಗುಡಿಹುಂಡಿ ಹಾಗೂ ನಂಜನಗೂಡಿನಲ್ಲಿ ರೈಲ್ವೆ ಮೇಲ್ಸೇತುವೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದ್ದರೂ, ಕಾಮಗಾರಿ ಆರಂಭಕ್ಕೆ ಗ್ರಹಣ ಹಿಡಿದಿದೆ. ಕಬಿನಿ 2ನೇ ಹಂತದ ಯೋಜನೆ ಜಾರಿ ಹಾಗೂ ಚಾಮರಾಜನಗರದಿಂದ ಕೊಳ್ಳೇಗಾಲ ಮಾರ್ಗ ಬೆಂಗಳೂರಿಗೆ ಸಂಪರ್ಕ ಕಲ್ಪಿಸುವ ರೈಲು ಯೋಜನೆ ಸ್ಥಿತಿ ಆಮೆಗತಿಯಲ್ಲಿದೆ. ಮುಂದಾದರೂ ಆಗ ಬೇಕಾಗಿರುವ ಸಾಕಷ್ಟು ಅಭಿವೃದ್ಧಿ ಕೆಲಸಗಳೂ ಆರಂಭವಾಗಲಿ ಎಂಬುದು ಜಿಲ್ಲೆಯ ಪ್ರಜ್ಞಾವಂತರ ಒತ್ತಾಯ.

ಇಂದು ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರ ಉದ್ಘಾಟನೆ

ಚಾಮರಾಜನಗರ: ಕಳೆದ 19 ವರ್ಷಗಳಿಂದ ಕುಂಟುತ್ತಾ ಸಾಗುತ್ತಿದ್ದ ಜಿಲ್ಲಾ ರಂಗ ಮಂದಿರದ ಕಾಮಗಾರಿ ಕೊನೆಗೂ ಮುಕ್ತಾಯವಾಗಿದೆ. ಜಿಲ್ಲೆಯ ರಜತ ಮಹೋತ್ಸವ ಸವಿನೆನಪಾಗಿ ನಾಳೆ(ಆ.15) ಜಿಲ್ಲಾ ರಂಗಮಂದಿರ ಉದ್ಘಾಟನೆಗೊಳ್ಳಲಿದೆ. ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ 7.55 ಕೋಟಿ ರೂ. ವೆಚ್ಚದಲ್ಲಿ ರಂಗಮಂದಿರದಲ್ಲಿ ನಿರ್ಮಿಸಲಾಗಿದೆ. ಇದಕ್ಕೆ ಜಿಲ್ಲೆಯವರೇ ಆದ ವರನಟ ಡಾ.ರಾಜ್‌ಕುಮಾರ್ ಅವರ ಹೆಸರನ್ನು ಇಟ್ಟಿರುವುದು ಬಹಳ ಅರ್ಥಗರ್ಭಿತ. ಜಿಲ್ಲಾ ರಂಗಮಂದಿರ ನಿರ್ಮಾಣಕ್ಕೆ 2003 ಏ.13ರಂದು ಭೂಮಿ ಪೂಜೆ ನೆರವೇರಿಸಲಾಗಿತ್ತು. ಸದ್ಯ ಕಾಮಗಾರಿ ಪೂರ್ಣಗೊಂಡಿದೆ. ಸೋಮವಾರ ಬೆಳಗ್ಗೆ 11 ಗಂಟೆಗೆ ನಡೆಯುವ ರಂಗಮಂದಿರ ಉದ್ಘಾಟನಾ ಸಮಾರಂಭವನ್ನು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ನೆರವೇರಿಸುವರು.

ವಿದ್ಯುತ್ ತಂತಿ ತುಳಿದು ರೈತ ಸಾವು



ಕೆ.ಆರ್.ಪೇಟೆ, ಆ.14– ಜಮೀನಿನಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ರೈತನೊಬ್ಬ ತುಳಿದು ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿರುವ ಘಟನೆ ತಾಲೂಕಿನ ಕಾಳೇಗೌಡನಕೊಪ್ಪಲು ಗ್ರಾಮದಲ್ಲಿ ಭಾನುವಾರ ನಡೆದಿದೆ. ಗ್ರಾಮದ ನಿವಾಸಿ ಗೋವಿಂದೇಗೌಡ(46) ಮೃತಪಟ್ಟ ರೈತ. ಇವರು ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಜಮೀನಿನಲ್ಲಿ ಕೃಷಿ ಚಟುವಟಿಕೆ ನಡೆಸುತ್ತಿದ್ದಾಗ ಜಮೀನಿನಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿಯನ್ನು ಗಮನಿಸದೆ ತುಳಿದಿದ್ದಾರೆ. ಪರಿಣಾಮ ವಿದ್ಯುತ್ ಸ್ಪರ್ಶದಿಂದ ಗೋವಿಂದೇಗೌಡ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಮೃತರಿಗೆ ಪತ್ನಿ, ಓರ್ವ ಪುತ್ರ ಹಾಗೂ ಪುತ್ರಿ ಇದ್ದಾರೆ. ಈ ಸಂಬಂಧ ಕೆ.ಆರ್.ಪೇಟೆ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದ್ದು, ಮೃತರ ನಿವಾಸಕ್ಕೆ ಸಚಿವ ನಾರಾಯಣಗೌಡ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.08.2022 ಸೋಮವಾರ, ಮಳೆ ನಕ್ಷತ್ರ : ಆಶ್ಲೇಷ, 03.08.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ಥಿ, ನಕ್ಷತ್ರ : ಉತ್ತರಾಭಾದ್ರ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು: ಲೇಖನ ಪ್ರಸ್ತುತಿ–ಡಿ.ಎನ್. ಶ್ರೀಪಾದ್, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ: ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 7.45 ನಿತ್ಯ ವಿಜ್ಞಾನ, 9.00 ಆಲೂರು ವೆಂಕಟರಾಯರ ಜನ್ಮ ಶತಮಾನೋತ್ಸವ ಕಾರ್ಯಕ್ರಮದ ಬಾನುಲಿ ವರದಿ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, ಭಾಗವಹಿಸುವವರು ಡಾ.ಕೆ. ವರದರಂಗನ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ಭಕ್ತಿಗೀತೆಗಳು– ಆಲಾಪ್, 12.45 ನಮ್ಮ ಆರೋಗ್ಯ: ಮೌಲ್ಯ ಶಿಕ್ಷಣ ಕುರಿತು ಡಾ. ರವೀಶ್ ಬಿ.ಎನ್.ಅವರೊಂದಿಗೆ ಸಂದರ್ಶನ, 1.20 ಭಾವಗೀತೆಗಳು: ಶಾಂತಲಾ ವಟ್ಟಂ, 3.00 ಡಿ.ಕೆ. ಜಯರಾಮನ್–ಹಾಡುಗಾರಿಕೆ, 4.00 ಮಹಿಳಾರಂಗ–'ಡಾಕ್ಟರ್ ಸಮಯ'–ನೇರ ಫೋನ್ ಇನ್ ಕಾರ್ಯಕ್ರಮ, ವಿಷಯ–ಮಹಿಳೆ ಹಾಗೂ ಆಯುರ್ವೇದ: ಭಾಗವಹಿಸುವ ವೈದ್ಯರು– ಡಾ. ಚೈತ್ರ. **ಸಂಜೆ:** 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, ಕವಿ–ಸುಧಾ ಹರೀಶ್, ಸಂಗೀತ– ಜಿ.ಪುಷ್ಪಲತಾ, 6.50 ಕೃಷಿರಂಗ: ಪೌಷ್ಟಿಕ ಕೈತೋಟದ ಪ್ರಾಮುಖ್ಯತೆ ಕುರಿತು ನೇತ್ರಾವತಿ ಎತ್ತಿನಮನಿ ಅವರೊಡನೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ.

ವಿವಿಧೆಡೆ ಸ್ವಾತಂತ್ರ್ಯೋತ್ಸವ

■ **ಲಯನ್ಸ್‌ಕ್ಲಬ್ ಜೆ.ಪಿ.ನಗರ :** ಬೆಳಗ್ಗೆ 7.30ಕ್ಕೆ. ಸ್ವಾತಂತ್ರ್ಯ ಅಮೃತ ಮಹೋತ್ಸವ, ಮುಖ್ಯ ಅತಿಥಿಗಳು: ಮಾಜಿ ಎಂಎಲ್‌ಸಿ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಕಾರ್ಪೊರೇಟರ್‌ಗಳಾದ ಶಾರದಮ್ಮ ಎಂ.ಈಶ್ವರ್, ಶಾಂತಮ್ಮ ವಡಿವೇಲು, ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಮುಖ್ಯ ಭಾಷಣ: ಪತ್ರಕರ್ತ ತಿಪ್ಪೇಸ್ವಾಮಿ, ಅಧ್ಯಕ್ಷತೆ: ಲಯನ್ಸ್ ಕ್ಲಬ್ ಜೆ.ಪಿ.ನಗರ ಅಧ್ಯಕ್ಷ ಬಿ.ಎಂ.ಮಲ್ಲಿಕಾರ್ಜುನ, ಸ್ಥಳ: ಪುಟ್ಟರಾಜ ಗವಾಯಿ ಕ್ರೀಡಾಂಗಣ

■ **ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿಜಯನಗರ:** ಬೆಳಗ್ಗೆ 7.45ಕ್ಕೆ. ಸ್ವಾತಂತ್ರ್ಯ ಅಮೃತ ಮಹೋತ್ಸವ, ಮುಖ್ಯ ಅತಿಥಿಗಳು: ಕೆ.ನರಸಿಂಹಮೂರ್ತಿ, ಅಧ್ಯಕ್ಷತೆ: ಡಾ.ಜಿ.ಹೆಚ್.ಮಹದೇವಸ್ವಾಮಿ, ಸ್ಥಳ: ಕಾಲೇಜು ಆವರಣ.

■ **ನಟರಾಜ ಪ್ರತಿಷ್ಠಾನ:** ಬೆಳಗ್ಗೆ 8ಕ್ಕೆ, ಸ್ವಾತಂತ್ರ್ಯ ಅಮೃತ ಮಹೋತ್ಸವ, ದಿವ್ಯ ಸಾನ್ನಿಧ್ಯ: ಶ್ರೀ ಚಿದಾನಂದ ಸ್ವಾಮೀಜಿ, ಧ್ವಜಾರೋಹಣ: ಗಾಂಧಿಮಾರ್ಗಿ ರೇವಣ್ಣ, ಅಧ್ಯಕ್ಷತೆ: ಡಾ.ಎಸ್.ಶಿವರಾಜಪ್ಪ, ಸ್ಥಳ: ಕಾಲೇಜು ಆವರಣ.

■ **ಶ್ರೀ ರಾಮಕೃಷ್ಣ ಸೇವಾ ಸಂಘ:** ಬೆಳಗ್ಗೆ 8.30ಕ್ಕೆ, ಸ್ವಾತಂತ್ರ್ಯ ಅಮೃತ ಮಹೋತ್ಸವ, ಮುಖ್ಯ ಅತಿಥಿಗಳು: ಎನ್.ಕೃಷ್ಣೇಗೌಡ, ಅಧ್ಯಕ್ಷತೆ: ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಉಪಸ್ಥಿತರು: ಸಂಘದ ಕಾರ್ಯದರ್ಶಿ ಎಂ.ದೊರೆರಾಜು, ಉಪಾಧ್ಯಕ್ಷರಾದ ಹೆಚ್.ಕೆ.ಅಶೋಕ್‌ಕುಮಾರ್, ಕೆ.ಕೆಂಪಲಿಂಗರಾಜು, ಖಜಾಂಚಿ ಹೆಚ್.ಜಿ.ರಮೇಶ್ ಸ್ಥಳ: ರಾಮಕೃಷ್ಣ ವಿದ್ಯಾಕೇಂದ್ರ ಹಾಗೂ ಆರ್‌ಕೆವಿಕೆ ಸಂಯುಕ್ತ ಪದವಿಪೂರ್ವ ಕಾಲೇಜು.

■ **ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ಊಟಿ ರಸ್ತೆ :** ಬೆಳಗ್ಗೆ 8.30ಕ್ಕೆ. ಸ್ವಾತಂತ್ರ್ಯ ಅಮೃತ ಮಹೋತ್ಸವ, ಮುಖ್ಯ ಅತಿಥಿ: ಪ್ರೊ.ವೈ.ಎಸ್.ಸಿದ್ದೇಗೌಡ, ಅಧ್ಯಕ್ಷತೆ: ಪ್ರೊ.ಬಿ.ವಿ.ಸಾಂಬಶಿವಯ್ಯ, ಉಪಸ್ಥಿತರು: ಪ್ರೊ.ಎಂ.ಪಿ.ವಿಜಯೇಂದ್ರಕುಮಾರ್, ಎಸ್.ಸೋಮಶೇಖರ್, ಸ್ಥಳ: ಕಾಲೇಜು ಆವರಣ.

■ **ಸುಪ್ರೀಂ ಪಬ್ಲಿಕ್ ಸ್ಕೂಲ್:** ಬೆಳಗ್ಗೆ 8.30ಕ್ಕೆ. ಸ್ವಾತಂತ್ರ್ಯ ಅಮೃತ ಮಹೋತ್ಸವ, ಮುಖ್ಯ ಅತಿಥಿಗಳು: ಚಿತ್ರನಟ ಶಂಕರ್ ಅಶ್ವತ್ಥ್, ಅಧ್ಯಕ್ಷತೆ: ಶಾಲೆ ಅಧ್ಯಕ್ಷ ಡಾ.ಎಂ.ಎಲ್.ರವೀಂದ್ರಸ್ವಾಮಿ, ಸ್ಥಳ: ಶಾಲಾ ಆವರಣ

■ **ಮಹಾಜನ ಎಜುಕೇಷನ್ ಸೊಸೈಟಿ:** ಬೆಳಗ್ಗೆ 9ಕ್ಕೆ. ಸ್ವಾತಂತ್ರ್ಯ ಅಮೃತ ಮಹೋತ್ಸವ, ಮುಖ್ಯ ಅತಿಥಿಗಳು: ಲೆಫ್ಟಿನೆಂಟ್ ಕರ್ನಲ್ ಸಿ.ಎಜೆ.ಶ್ರೀನಿಧಿ, ಉಪಸ್ಥಿತರು: ಟಿ.ಮುರಳೀಧರ ಭಾಗವತ್, ಡಾ.ವಿಜಯಲಕ್ಷ್ಮಿ ಟಿ. ಮುರಳೀಧರ್, ಪ್ರೊ.ಪಿ.ಸರೋಜಮ್ಮ, ಸ್ಥಳ: ಮಹಾಜನ ಪ್ರಥಮ ದರ್ಜೆ ಕಾಲೇಜು.

■ **ಮೈಸೂರು ವಿವಿ:** ಬೆಳಗ್ಗೆ 11ಕ್ಕೆ, ಸ್ವಾತಂತ್ರ್ಯ ಮಹೋತ್ಸವದ ಅಂಗವಾಗಿ ವಿಶೇಷ ಉಪನ್ಯಾಸ, ಮುಖ್ಯ ಅತಿಥಿಗಳು: ಡಾ.ಸಂಗೀತ ಗಜಾನನ ಭಟ್, ಮುಖ್ಯ ಅತಿಥಿ: ಡಾ.ಚೈತ್ರ ನಾರಾಯಣ, ವಿಶೇಷ ಉಪನ್ಯಾಸ: ಪ್ರೊ.ಕೆ.ಸದಾಶಿವ, ಸ್ಥಳ: ಡಾ.ಬಾಬು ಜಗಜೀವನ್ ರಾಂ ಅಧ್ಯಯನ ಕೇಂದ್ರದ ಸಭಾಂಗಣ, ಮಾನಸಗಂಗೋತ್ರಿ

■ **ಜೆಎಸ್‌ಎಸ್ ಮಹಾವಿದ್ಯಾಪೀಠ:** ಸಂಜೆ 5ಕ್ಕೆ. ಸ್ವಾತಂತ್ರ್ಯ ಅಮೃತ ಮಹೋತ್ಸವ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ, ದಿವ್ಯ ಸಾನ್ನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಅಧ್ಯಕ್ಷತೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಉದ್ಘಾಟನೆ: ಸಚಿವ ಸಿ.ಟಿ.ರವಿ, ಮುಖ್ಯ ಅತಿಥಿಗಳು: ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪ್‌ಸಿಂಹ, ವಿಶೇಷ ಆಹ್ವಾನಿತರು: ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷ ವೈ.ಸಿ.ರೇವಣ್ಣ, ಸ್ಥಳ: ಜೆಎಸ್‌ಎಸ್ ಕಾಲೇಜು ಊಟಿ ರಸ್ತೆ.

ವರದಕ್ಷಿಣೆ ಕಿರುಕುಳಕ್ಕೆ ಗೃಹಿಣಿ ಬಲಿ

ಪತಿ ಸೇರಿ ಮೂವರ ಬಂಧನ

ಹುಣಸೂರು, ಆ.14– ವರದಕ್ಷಿಣೆ ಕಿರುಕುಳಕ್ಕೆ ಗೃಹಿಣಿ ಬಲಿಯಾಗಿರುವ ಘಟನೆ ನಗರದ ನರಸಿಂಹಸ್ವಾಮಿತಿಟ್ಟಿನಲ್ಲಿ ನಡೆದಿದೆ.



ನರಸಿಂಹಸ್ವಾಮಿತಿಟ್ಟು ಬಡಾವಣೆ ನಿವಾಸಿ ಜಗದೀಶ್ ಅವರ ಪತ್ನಿ ರಶ್ಮಿ(26) ಮೃತಪಟ್ಟ ಗೃಹಿಣಿ. ಈಕೆಗೆ 3 ವರ್ಷ ಹಾಗೂ 3 ತಿಂಗಳ ಮಗು ಇದೆ. ಮೃತ ರಶ್ಮಿ ತಂದೆ ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರದ ಮಾರಿಮುತ್ತು ನಗರ ಪೊಲೀಸರಿಗೆ ದೂರು ನೀಡಿರುವ ಪ್ರಕಾರ ಕಳೆದ 5 ವರ್ಷಗಳ ಹಿಂದೆ ಜಗದೀಶನಿಗೆ 1 ಲಕ್ಷ ರೂ. ಹಾಗೂ 100 ಗ್ರಾಂ ಬಂಗಾರ ಜೊತೆಗೆ ಉಂಗುರ ನೀಡಿ ಅದ್ಧೂರಿಯಾಗಿ ಮದುವೆ ಮಾಡಿಕೊಡಲಾಗಿತ್ತು. ಮದುವೆಯಾದ ವರ್ಷದ ನಂತರ ಮಗಳಿಗೆ ಹೆಚ್ಚಿನ ವರದಕ್ಷಿಣೆ ತರುವಂತೆ ಕಿರುಕುಳ ನೀಡಿ ಅನೇಕ ಬಾರಿ ತವರು ಮನೆಗೆ ಕಳುಹಿಸಿದ್ದ. ಈ ಸಂಬಂಧ ವರ್ಷದ ಹಿಂದೆ ಬೆಟ್ಟದಪುರ ಠಾಣೆಯಲ್ಲಿ ಜಗದೀಶ್ ಹಾಗೂ ತಂದೆ–ತಾಯಿ, ಸಹೋದರಿ ವಿರುದ್ಧ ದೂರು ನೀಡಲಾಗಿ ಗ್ರಾಮಸ್ಥರ ಸಮ್ಮುಖದಲ್ಲಿ ರಾಜಿ ತೀರ್ಮಾನ ಮಾಡಿ 50 ಸಾವಿರ ರೂ. ನೀಡಿ ತಿಳಿ ಹೇಳಿ ಮಗಳನ್ನು ಕಳುಹಿಸಿಕೊಟ್ಟಿದ್ದೆವು. ಆದರೂ ಅಳಿಯ ಜಗದೀಶ ತನ್ನ ಚಾಳಿ ಮುಂದುವರೆಸಿದ್ದಲ್ಲದೆ, ನಿಮ್ಮ ಮಗಳನ್ನು ಕರೆದೊಯ್ಯಿರಿ ನಾನು ಬೇರೆ ಮದುವೆಯಾಗುತ್ತೇನೆಂದು ಹೇಳಿದ್ದರಿಂದ ಮತ್ತೆ ಸಮಾಧಾನಪಡಿಸಿ, ರಶ್ಮಿಯನ್ನು ಗಂಡನ ಮನೆಗೆ ಬಿಟ್ಟು ಬಂದಿದ್ದೇವು. ವಾರದ ಹಿಂದೆ ಮಗಳು ಕರೆ ಮಾಡಿ ಅಳುತ್ತಾ ನನ್ನನ್ನು ಮನೆಗೆ ಕರೆದೊಯ್ಯಿರಿ, ಇಲ್ಲದಿದ್ದಲ್ಲಿ ಸಾಯಿಸಿ ಬಿಡುತ್ತಾರೆ ಎಂದು ಹೇಳಿದ್ದಳು. ಮಗಳನ್ನು ಸಮಾಧಾನಿಸಿದ್ದೆವು. ಈ ನಡುವೆ ಆ.8ರಂದು ಬಡಾವಣೆ ನಿವಾಸಿಯೊಬ್ಬರು ಕರೆ ಮಾಡಿ ನಿಮ್ಮ ಮಗಳು ಸಾವನ್ನಪ್ಪಿದ್ದಾಳೆಂಬ ಮಾಹಿತಿ ಮೇರೆಗೆ ಬಂದು ನೋಡಲಾಗಿ ಆಕೆ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದರಿಂದ ಸಾವಿಗೀಡಾಗಿದ್ದಾಳೆಂದು ಕಂಡು ಬಂದಿದ್ದು, ರಶ್ಮಿ ಸಾವಿಗೆ ಪತಿ ಜಗದೀಶ, ಮಾವ ನಾಗರಾಜು, ಅತ್ತೆ ಲಕ್ಷ್ಮಮ್ಮ, ನಾದಿನಿ ನೇತ್ರಾ ಕಾರಣರಾಗಿದ್ದು, ಸೂಕ್ತ ಕ್ರಮ ಕೈಗೊಂಡು ನ್ಯಾಯ ದೊರಕಿಸಿಕೊಡುವಂತೆ ಪೊಲೀಸರಿಗೆ ದೂರು ನೀಡಿದ್ದ ಮೇರೆಗೆ ಮೂವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಚಿಕ್ಕಭೇರ್ಯ ಎಸ್‌ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಭೇರ್ಯ, ಆ.14– ಚಿಕ್ಕಭೇರ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ ವಸಂತ್ ಕುಮಾರನಾಯಕ, ಉಪಾಧ್ಯಕ್ಷರಾಗಿ ಸಿ.ವಿ.ಮಂಜುನಾಥ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಆಡಳಿತ ಮಂಡಳಿ ಸದಸ್ಯರಾಗಿ ಮಂಜುನಾಥ ಸಿ.ಎಸ್, ಲಕ್ಷ್ಮಿ, ಮಂಜುಳಾ, ಶಿಲ್ಪ, ವೆಂಕಟೇಶ್, ನಿಂಗರಾಜೇಗೌಡ, ದಸ್ತಗಿರಿ ಷರೀಫ್, ದಿನೇಶ್ ನಾಯಕ, ದಿನೇಶ್‌ಗೌಡ, ಸಿ.ಕೆ.ದಿನೇಶ್, ನೇತ್ರಾವತಿ, ರಜಿನಿ, ಸುಜಾತ, ಸುರೇಶ್, ಸತೀಶ್.ಸಿ.ವೈ, ತ್ರಿವೇಣಿ ಆಯ್ಕೆಯಾಗಿದ್ದಾರೆ ಎಂದು ಶಾಲೆ ಮುಖ್ಯಶಿಕ್ಷಕ ಬಾಲಕೃಷ್ಣ ತಿಳಿಸಿದರು. ಈ ವೇಳೆ ಸಹ ಶಿಕ್ಷಕಿ ಫರಾನ್ ಬೇಗಂ ಇದ್ದರು. ನೂತನ ಆಡಳಿತ ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರನ್ನು ಗ್ರಾಪಂ ಸದಸ್ಯೆ ದೇವಿಕಮ್ಮ ಹಾರಹಾಕಿ ಅಭಿನಂದಿಸಿದರು.

ದೇಶದ ಜನತೆಗೆ 75ನೇ

ಸ್ವಾತಂತ್ರ್ಯೋತ್ಸವದ ಶುಭಾಶಯಗಳು




ಡಾ. ಸುಶ್ರುತ ಹೆಚ್.ವಿ

ಅಮೇರಿಕನ್ ಬೋರ್ಡ್ ಪ್ರಮಾಣಿತ
ನರರೋಗ ಮತ್ತು ಪಾರ್ಶ್ವವಾಯು ತಜ್ಞರು
ಮ್ಯಾನೇಜಿಂಗ್ ಡೈರೆಕ್ಟರ್
ನ್ಯೂರೊ ಝೋನ್, ಮೈಸೂರು

Neuro Zone

Brain - Spine Institute & Research Centre

ಬನ್ನಿ, ಆರೋಗ್ಯಕರ ಭಾರತವನ್ನು ನಿರ್ಮಿಸೋಣ



- 35,000 ರೋಗಿಗಳು.
- 1500 ಟೆಲಿ ನ್ಯೂರೊಲಾಜಿ ಸಮಾಲೋಚನೆ.
- 550 ನರರೋಗ ಶಸ್ತ್ರಚಿಕಿತ್ಸೆಗಳು.
- 24/7 ನ್ಯೂರೊಲಾಜಿ, ನರರೋಗ ಶಸ್ತ್ರಚಿಕಿತ್ಸೆ, ಮನೋವೈದ್ಯಶಾಸ್ತ್ರ, ಮನೋವಿಜ್ಞಾನ ಸೌಲಭ್ಯ.
- ಅಕ್ವಾಥೆರಪಿ/ ಭೌತಚಿಕಿತ್ಸೆ (ಫಿಸಿಯೋಥೇರಪಿ).
- ಎಲ್ಲಾ ಮಾದರಿಯ ನರರೋಗಗಳ ನಿರ್ಣಯ.



ಡಾ. ವಿನಾಯಕ್ ಐ. ಕಡ್ಲಿಮಟ್ಟಿ
MBBS, DNB (ನರರೋಗ ಶಸ್ತ್ರಚಿಕಿತ್ಸೆ)
ನರರೋಗ ಸಲಹೆಗಾರ ತಜ್ಞರು
KMC No. 65808



ಡಾ. ಅಹೇಲಿ ದೇ
MBBS, DPM
(ಮನೋವೈದ್ಯಶಾಸ್ತ್ರ)
ಸಲಹೆಗಾರ ಮನೋವೈದ್ಯರು
KMC No. 117319



ಡಾ. ಕೀರ್ತನ ಇ
M.Sc.,
ಕ್ಲಿನಿಕಲ್
ಮನಶ್ಶಾಸ್ತ್ರಜ್ಞರು

ಶ್ರೀಮತಿ. ಧನ್ಯ ಸುಶ್ರುತ
ನಿರ್ವಾಹಕರು
ನ್ಯೂರೊ ಝೋನ್
ಸದಸ್ಯರು (Trustee)
ಗೋಪಾಲ ಗೌಡ ಶಾಂತವೇರಿ ಸ್ಮಾರಕ
ಆಸ್ಪತ್ರೆಯ ಆವರಣ



ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆಯ ಆವರಣ

ಟಿ.ಎನ್. ಪುರ ರಸ್ತೆ, ನಜರ್‌ಬಾದ್,
ಮೈಸೂರು–570010









ಸಂದರ್ಶನಕ್ಕಾಗಿ ಕರೆ ಮಾಡಿ 0821-4001623

ಮೈಸೂರು ಮಿತ್ರ

ಸ್ವಾತಂತ್ರ್ಯ ಅಮೃತ ಮಹೋತ್ಸವ

ವಿಶೇಷಾಂಕ

ಸೋಮವಾರ 15.08.2022







ಕೆಚ್ಚೆದೆಯ ಸ್ವಾತಂತ್ರ್ಯ ಹೋರಾಟಗಾರನ ದ್ಯೋತಕ ಮೈಸೂರು 'ರಾಮಸ್ವಾಮಿ ವೃತ್ತ'



ಡಾ. ಎ.ವಿ. ನರಸಿಂಹಮೂರ್ತಿ

1946, ಹಾರ್ಡ್‌ವಿಕ್ ಹೈಸ್ಕೂಲಿನಲ್ಲಿ ನಾನು ಎಂಟನೆಯ ತರಗತಿಯಲ್ಲಿ ಓದುತ್ತಿದ್ದೆ. ಆಗ ಶಾರದಾ ವಿಲಾಸ್, ಬನುಮಯ್ಯಾಸ್ ಹಾಗೂ ದಳವಾಯಿ ಮುಂತಾದ ಶಾಲೆಗಳ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳು, ಭಾರತ್ ಮಾತಾಕಿ ಜೈ... ವಂದೇ ಮಾತರಂ... ಘೋಷಣೆ ಕೂಗುತ್ತಿದ್ದರು. ಮಾತ್ರವಲ್ಲದೆ ನಮಗೆ ಸ್ವಾತಂತ್ರ್ಯ ಬೇಕೇ ಬೇಕೆಂದು ಅಬ್ಬರಿಸುತ್ತಿದ್ದರು.

ಬಾಣಾವರದ ರಾಮಸ್ವಾಮಿ ಶಾಸ್ತ್ರಿಗಳು ಹಾಗೂ ಅವರ ಹೆಂಡತಿ ಲಕ್ಷ್ಮೀದೇವಮ್ಮನವರ ಮನೆಯು ಪೂರ್ಣಯ್ಯನ ಛತ್ರದಂತಿತ್ತು. ಯಾವ ಕಾರಣಕ್ಕಾದರೂ ಬೇರೆ ಊರಿನವರು ಮೈಸೂರಿಗೆ ಬಂದರೆ ಶಾಸ್ತ್ರಿಗಳ ಮನೆಯಲ್ಲಿಯೇ ತಂಗುತ್ತಿದ್ದರು. ರಾಮಸ್ವಾಮಿಯು ಬಡವನಾಗಿದ್ದುದರಿಂದ ಶಾಸ್ತ್ರಿಗಳು ತಮಗೆ ಪರಿಚಿತರ ಮನೆಯಲ್ಲಿ ಮಧ್ಯಾಹ್ನದ ಊಟಕ್ಕೆ ಏರ್ಪಾಟು ಮಾಡುತ್ತಿದ್ದರು.

ರಾಮಸ್ವಾಮಿಯು ಯಾವಾಗಲೂ ಸ್ವಾತಂತ್ರ್ಯವನ್ನೇ ಕನವರಿಸುತ್ತಿದ್ದನು. ಮತ್ತು ಅದಕ್ಕಾಗಿ ತನ್ನ ಪ್ರಾಣ ತ್ಯಾಗಕ್ಕೂ ಸಿದ್ಧನಾಗಿದ್ದನು. ಅದು 1946ನೇ ವರ್ಷ ಸುಮಾರು ಮಧ್ಯಾಹ್ನ ಹನ್ನೊಂದು ಗಂಟೆಯ ಸಮಯವಿರಬೇಕು. ಒಂದು ದೊಡ್ಡ ಗುಂಪು ಹಾರ್ಡ್‌ವಿಕ್ ಶಾಲೆಯ ಮುಂದೆ ಸೇರಿತ್ತು. ನಮಗೆ ಸ್ವಾತಂತ್ರ್ಯ ಬೇಕು ಎಂದು ಸಾವಿರಾರು ವಿದ್ಯಾರ್ಥಿಗಳು ಹಾರ್ಡ್‌ವಿಕ್ ಶಾಲೆಯ ಮುಂದೆ ಗುಂಪಾಗಿ ಸೇರಿ ಘೋಷಣೆ ಕೂಗುತ್ತಿದ್ದರು.

ಆಗ ಮೈಸೂರಿನ ಡಿಸಿಯವರಾಗಿದ್ದವರು ನಾಗರಾಜರಾಯರು. ಪೊಲೀಸರು, ಡಿಸಿ ಸಾಹೇಬರಿಗೆ ವಿದ್ಯಾರ್ಥಿಗಳ ಗುಂಪು ಸೇರಿರುವುದು ಹಾಗೂ ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿರುವ ಹೋರಾಟವನ್ನು ತಿಳಿಸಿದರು. ಆಗ ಡಿಸಿಯವರು ತಮ್ಮ ಕುದುರೆಯನ್ನೇರಿ ವಿದ್ಯಾರ್ಥಿಗಳ ಗುಂಪು ಸೇರಿದ್ದಲ್ಲಿಗೆ ಬಂದರು. ಆಗ ರಾಮಸ್ವಾಮಿ, ತನ್ನ ಕೈಯ್ಯಲ್ಲಿ ಒಂದು ಬಾವುಟವನ್ನು ಹಿಡಿದುಕೊಂಡಿದ್ದರು. ಇದನ್ನು ನೋಡಿದ ಡಿಸಿಯವರಿಗೆ ತುಂಬ ಕೋಪ ಬಂತು. ಡಿಸಿಯವರು ರಾಮಸ್ವಾಮಿಗೆ ಕೂಗಿ ಹೇಳಿದರು; **'ನೀನು ಹಿಡಿದಿರುವ ಬಾವುಟವನ್ನು ಕೆಳಕ್ಕೆ ಹಾಕು'.** ಆದರೆ ರಾಮಸ್ವಾಮಿಯು ಹಾಗೆ ಮಾಡದೆ 'ವಂದೇ ಮಾತರಂ' ಎಂಬ ಜಪ ಮಾಡುತ್ತಲೇ ಇದ್ದನು. ಒಬ್ಬ ಸಣ್ಣ ಹುಡುಗ ತಮ್ಮ ಮಾತನ್ನು ಕಡೆಗಣಿಸುತ್ತಿರುವುದನ್ನು ಕಂಡು ಕೆಂಡಾಮಂಡಲರಾದರು ನಾಗರಾಜರಾಯರು. ಕಾಲಿಗೆ ಗುಂಡು ಹೊಡೆಯುವ ನಿಯಮವಿದ್ದಾಗ್ಯೂ, ಈ ನಿಯಮವನ್ನು ಕಡೆಗಣಿಸಿ ನೇರವಾಗಿ ರಾಮಸ್ವಾಮಿಯ ಎದೆಗೆ ಒಂದು ಗುಂಡನ್ನು ಹಾರಿಸಿದವರೇ ಡಿಸಿ ನಾಗರಾಜರಾಯರು. ಕೂಡಲೇ ಸ್ಥಳದಲ್ಲೇ ಕುಸಿದು ಬಿದ್ದ ರಾಮಸ್ವಾಮಿ, ಅಲ್ಲೇ ಹುತಾತ್ಮನಾದನು.

ನಾಗರಾಜರಾಯರು ಬ್ರಹ್ಮಹತ್ಯಾ ದೋಷವನ್ನು ಮಾಡಿದ್ದಾರೆ. ಆದುದರಿಂದ ಮೈಸೂರಿನ ಯಾವ ಪುರೋಹಿತರು ನಾಗರಾಜರಾಯರ ಮನೆಯ ಶುಭ ಕಾರ್ಯಗಳಿಗೆ ಹೋಗಬಾರದು ಎಂಬ ಅಲಿಖಿತ ನಿರ್ಬಂಧ ಹೇರಲಾಯಿತು. ಇದರಿಂದ ಮನನೊಂದ ನಾಗರಾಜರಾಯರು ಬೇರೆ ಊರಿಗೆ ಹೋಗಿ ನೆಲೆಸಿದರು ಎಂದು ಎಲ್ಲರೂ ಭಾವಿಸಿದರು.

ಡಿಸಿ ಆಫೀಸಿನ ಒಂದು ಅರ್ಧ ಫರ್ಲಾಂಗ್ ದೂರದಲ್ಲಿ ಫೈವ್‌ಲೈಟ್ಸ್ ಎಂಬ ದೀಪ ಸಮೂಹವಿದ್ದಿತು. ಈಗ ಇದನ್ನು ರಾಮಸ್ವಾಮಿ ವೃತ್ತ (ರಾಮಸ್ವಾಮಿ ಸರ್ಕಲ್) ಎಂದು ಕರೆಯಲಾಗುತ್ತಿದೆ. ಹೀಗಾಗಿ ಬಾಣಾವರದ ರಾಮಸ್ವಾಮಿಯು ಈ ವೃತ್ತದ ಮೂಲಕ ಅಮರನಾಗಿ ಸದಾ ಕಂಗೊಳಿಸುತ್ತಿದ್ದಾನೆ. ಯಾವಾಗಲೂ ಹುತಾತ್ಮರು ನಮ್ಮೊಡನೆ ಈಗ ಇಲ್ಲದಿದ್ದೂ, ಅವು ಅಮರರಾಗಿರುತ್ತಾರೆ ಅದೇ ರಾಮಸ್ವಾಮಿಯೂ ಸೇರಿದಂತೆ ಎಲ್ಲಾ ಹುತಾತ್ಮರಿಗೂ ಸಲ್ಲಿಸಬಹುದಾದ ಗೌರವವೂ ಹೌದು.



ಮೈಸೂರಿಗೆ ಸ್ವಾತಂತ್ರ್ಯ ತಡವಾಯಿತೇ?



ಮೈಸೂರಿಗೆ ಸ್ವಾತಂತ್ರ್ಯ ಬರುವುದು ತಡವಾಯಿತೇ? ಈಚಿನ ದಿನಗಳಲ್ಲಿ ಈ ಮಾತನ್ನು ಕೇಳುತ್ತಿದ್ದೇವೆ. ಸ್ವಾತಂತ್ರ್ಯ ಮೈಸೂರಿಗೆ ತಡವಾಗಿ ಬಂದಿತು. ಆಗಸ್ಟ್ 15, 1947ರಂದು ಸ್ವಾತಂತ್ರ್ಯದ ಘೋಷಣೆಯಾಗಿ ಇಡೀ ರಾಷ್ಟ್ರವೇ ಬ್ರಿಟಿಷರ ನೊಗದಿಂದ ಬಿಡಿಸಿಕೊಂಡರೆ ಮೈಸೂರಿಗೆ ಮಾತ್ರ ಈ ಸ್ವಾತಂತ್ರ್ಯ ಲಭಿಸದೆ ಹೋಯಿತು. ಮೈಸೂರು ಸಂಸ್ಥಾನದ ಜನ ಹೋರಾಡಿ-ಚಳವಳಿ ನಡೆಸಿ ಸ್ವಾತಂತ್ರ್ಯ ಪಡೆದುಕೊಳ್ಳಬೇಕಾಯಿತು. ಅವರು ಹಲವಾರು ದಿನಗಳೇ ಕಾಯಬೇಕಾಯಿತು ಎಂಬ ಮಾತನ್ನು ಈಚೆಗೆ ಹೇಳಲಾಗುತ್ತಿದೆ. ಆದರೆ ನಾವು ಸ್ವಾತಂತ್ರ್ಯ ಸಂಗ್ರಾಮದ ಪುಟಗಳನ್ನು ತಿರುವಿ ಹಾಕಿದಾಗ ಈ ಮಾತು ಸರಿಯಲ್ಲ ಎಂಬುದು ಸ್ಪಷ್ಟವಾಗುತ್ತದೆ. ಎಲ್ಲ ದೇಶೀಯ ರಾಜ್ಯಗಳ ಪೈಕಿ ಸ್ವಾತಂತ್ರ್ಯ ಪಡೆದುಕೊಳ್ಳಲು ಒಪ್ಪಿದ್ದು ಮೈಸೂರು, ಮೈಸೂರಿನ ಮಹಾರಾಜರು ಎಂಬುದರ ಅರಿವಾಗುತ್ತದೆ. ಮಹಾರಾಜ ಜಯಚಾಮರಾಜ ಒಡೆಯರು ಸ್ವಾತಂತ್ರ್ಯದ ವಿರೋಧವಾಗಿ ವರ್ತಿಸಲಿಲ್ಲ. ಬದಲಿಗೆ ಮುಂದೆ ಬಂದು ಮೈಸೂರು ಭಾರತದ ಒಕ್ಕೂಟಕ್ಕೆ ಸೇರಲು ಒಪ್ಪಿದರು ಎಂಬುದು ಸ್ಪಷ್ಟವಾಗುತ್ತದೆ.

ಭೌಗೋಳಿಕವಾಗಿ ಅಂದಿನ ಮಹಾರಾಜರ ಮೈಸೂರು ಸಂಸ್ಥಾನ ಭಾರತದ ಒಂದು ಭಾಗವೇ ಆಗಿತ್ತು. ಆದರೆ ಇತರೆ ರಾಜ್ಯಗಳಂತೆ ರಾಜಕೀಯ ಮತ್ತು ಆಡಳಿತಾತ್ಮಕವಾಗಿ ಬ್ರಿಟಿಷರಿಂದ ನೇರವಾಗಿ ಆಳಲ್ಪಡುತ್ತಿತ್ತು. ಭಾರತ ಆಗ ಬ್ರಿಟಿಷ್ ಪ್ರಾಂತ್ಯಗಳು ಮತ್ತು ದೇಶೀಯ ಸಂಸ್ಥಾನಗಳು ಎಂದು ಆಡಳಿತಾತ್ಮಕವಾಗಿ ಮತ್ತು ರಾಜಕೀಯವಾಗಿ ವಿಭಜನೆಗೊಂಡಿತ್ತು. ಬ್ರಿಟಿಷ್ ಪ್ರಾಂತ್ಯಗಳಾದರೋ ನೇರವಾಗಿ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿದ್ದರೆ ದೇಶೀಯ ಸಂಸ್ಥಾನಗಳಲ್ಲಿ ರಾಜರುಗಳಿದ್ದರು. ಆದರೆ ಆ ರಾಜರುಗಳು ಸಂಪೂರ್ಣ ಅಧಿಕಾರ ಹೊಂದಿರಲಿಲ್ಲ. ಅವರು ಬ್ರಿಟಿಷರಿಗೆ ಅಧೀನರಾಗಿದ್ದರು. ವಿದೇಶೀಯರ ಆದೇಶದಂತೆ ಅವರು ಆಡಳಿತ ನಡೆಸಬೇಕಾಗಿತ್ತು ಬ್ರಿಟಿಷರ ಆಣತಿಯಂತೆ ವರ್ತಿಸಬೇಕಾಗುತ್ತಿತ್ತು. ದಿನನಿತ್ಯದ ಆಡಳಿತದಲ್ಲಿ ಮಾತ್ರ ಅವರು ಸ್ವತಂತ್ರರಾಗಿದ್ದರಷ್ಟೆ. 1799ರಲ್ಲಿ ಶ್ರೀರಂಗಪಟ್ಟಣದ ಪತನದ ನಂತರ ಮೈಸೂರು ಒಡೆಯರ ಮನೆತನಕ್ಕೆ ಮತ್ತೆ ಅಧಿಕಾರ ಲಭಿಸಿದರೂ, ಮೂವತ್ತು ವರ್ಷಗಳ ನಂತರ ಮುಮ್ಮಡಿ ಕೃಷ್ಣರಾಜರಿಗೆ ಇದ್ದ ಅಧಿಕಾರವನ್ನು ಬ್ರಿಟಿಷರು ಕಿತ್ತುಕೊಂಡರು. 50 ವರ್ಷ ಕಾಲ (1831-1881) ಈಸ್ಟ್ ಇಂಡಿಯಾ ಕಂಪನಿಯೇ ನೇರವಾಗಿ ಆಡಳಿತ ನಡೆಸಿತು. ಮತ್ತೆ ಅಧಿಕಾರ ಪಡೆದುಕೊಳ್ಳಲು ಮುಮ್ಮಡಿಯರು ವಿಫಲ ಹೋರಾಟವೇ ಮಾಡಬೇಕಾಯಿತು. ಮನಸ್ಸಿನಲ್ಲಿ ಬ್ರಿಟಿಷರ ವಿರುದ್ಧ ಬೇಗುದಿ ಇದ್ದರೂ ತೋರಿಸಿಕೊಳ್ಳದೆ ಇರಬೇಕಾಯಿತು.

ಸಂಗ್ರಾಮದ ಮುಂಚೂಣಿಯಲ್ಲಿ: ಭಾರತದಲ್ಲಿನ ದೇಶೀಯ ಸಂಸ್ಥಾನಗಳಲ್ಲಿ ಒಂದಾಗಿದ್ದ ಮೈಸೂರಿಗೂ ಇಡೀ ದೇಶದಲ್ಲಿ ಬೀಸಿದ ಸ್ವಾತಂತ್ರ್ಯ ಪ್ರೇಮದ ಬಿರುಗಾಳಿ ತಟ್ಟದೆ ಇರಲಿಲ್ಲ. ಮೈಸೂರು ಸಂಸ್ಥಾನದ ಜನರೂ ಇತರ ರಾಜ್ಯಗಳಲ್ಲಿನ ಪ್ರಜೆಗಳಂತೆ ಸ್ವಾತಂತ್ರ್ಯವನ್ನು ಬಯಸಿದ್ದರು. ಇದಕ್ಕಾಗಿ ಹೋರಾಟ ಪ್ರಾರಂಭಿಸಿದ್ದರು. ಆಂಗ್ಲರ ವಿರುದ್ಧ ರಾಷ್ಟ್ರ ಹೋರಾಡುವ ಸನ್ನಿವೇಶದಲ್ಲಿ ಮೈಸೂರಿನ ಪಾತ್ರ ಪ್ರಾಮುಖ್ಯದ್ದೇ ಆಗಿತ್ತು. ಬ್ರಿಟಿಷರು ನೇರವಾಗಿ ಆಳುತ್ತಿದ್ದ ಪ್ರಾಂತ್ಯಗಳಲ್ಲಿಯೂ ಬ್ರಿಟಿಷರ ವಿರುದ್ಧ ಚಳವಳಿ-ಹೋರಾಟ ನಡೆಯುತ್ತಿತ್ತು ಅದೇ ರೀತಿ ರಾಜರ ದೇಶೀಯ ಸಂಸ್ಥಾನಗಳಲ್ಲಿಯೂ ಸ್ವಾತಂತ್ರ್ಯಕ್ಕಾಗಿ ಸಂಗ್ರಾಮಗಳು ಜರುಗುತ್ತಿದ್ದವು. ಮೈಸೂರು ಈ ಹೋರಾಟದಿಂದ ಹೊರತಾಗಿರಲಿಲ್ಲ. ಹಾಗೆ ನೋಡಿದರೆ ಬ್ರಿಟಿಷರನ್ನು ಭಾರತದಿಂದ ಹೊಡೆದೋಡಿಸಬೇಕೆಂಬ ಛಲ-ಹೋರಾಟ 1760ರಲ್ಲೇ ಪ್ರಾರಂಭವಾಗಿತ್ತು ಅದು ತೀವ್ರವೂ ಆಗಿತ್ತು ಸ್ವಾತಂತ್ರ್ಯದ ಅಭಿಲಾಷೆಗೆ ಪಣ ತೊಟ್ಟಿದ್ದನ್ನು ನಾವು ಅಂದಿನಿಂದಲೇ ಗುರುತಿಸಬಹುದು. ಈ ಹೋರಾಟಕ್ಕೆ ನಾವು ಸುಮಾರು 190 ವರ್ಷಗಳ ಹಿನ್ನೆಲೆಯನ್ನು ಕಾಣಬಹುದು. ಹಾಗೆ ನೋಡಿದರೆ ಬ್ರಿಟಿಷರನ್ನು ಭಾರತದಿಂದ ಹೊಡೆದೋಡಿಸಬೇಕೆಂಬ ಸಂಕಲ್ಪ ಇತರೆ ಪ್ರಾಂತ್ಯಗಳಿಗಿಂತ ಮೈಸೂರಿನಲ್ಲಿ ಬಹಳಷ್ಟು ಮುಂಚೆಯೇ ಪ್ರಾರಂಭವಾಗಿತ್ತು ಎಂಬುದನ್ನು ಮನಗಾಣಬಹುದು. ಇದರಿಂದಾಗಿ ಸ್ವಾತಂತ್ರ್ಯ ಸಂಕಲ್ಪದಲ್ಲಿ ಮೈಸೂರು ಇತರೆ ರಾಜ್ಯಗಳಿಗಿಂತ ಮುಂದೆ ಇತ್ತು. ಸ್ವಾತಂತ್ರ್ಯ ಸಾಧನೆಗೆ ಪರಾಕ್ರಮ, ರಾಷ್ಟ್ರನಿಷ್ಠೆ, ತ್ಯಾಗ, ಬಲಿದಾನಗಳಲ್ಲಿ ಕರ್ನಾಟಕ ಸಂಗ್ರಾಮದ ಮುಂಚೂಣಿಯಲ್ಲಿಯೇ ಇತ್ತು ಎಂಬುದು ನಮಗೆ ಸ್ಪಷ್ಟವಾಗಿ ಅರಿವಾಗುತ್ತದೆ.

ಇನ್ನೂ ಒಂದು ಗಮನಿಸಬೇಕಾದ ಅಂಶವೆಂದರೆ ಮೈಸೂರಿನಲ್ಲಿನ ಸ್ವಾತಂತ್ರ್ಯ ಹೋರಾಟ ಬ್ರಿಟಿಷರ ವಿರುದ್ಧ ಮಾತ್ರ ಆಗಿತ್ತು. ಅದು ಮಹಾರಾಜರ ವಿರುದ್ಧದ ಹೋರಾಟವಾಗಿರಲಿಲ್ಲ. ಆ ಹೋರಾಟ ಬ್ರಿಟಿಷ್ ಸಾಮ್ರಾಜ್ಯದ ಶೃಂಖಲೆಯಿಂದ, ದಾಸ್ಯದಿಂದ ಬಿಡುಗಡೆ ಹೊಂದಿ ಸ್ವರಾಜ್ಯ ಸ್ಥಾಪನೆಗಾಗಿ ನಡೆದಿತ್ತು. ಇದೇ ಪ್ರಧಾನ ಉದ್ದೇಶವಾಗಿತ್ತು. ಇದೊಂದೇ ಗುರಿಯಾಗಿತ್ತು. 1930ನೆಯ ಏಪ್ರಿಲ್ ತಿಂಗಳಲ್ಲಿ "ಕರ್ನಾಟಕ ಸತ್ಯಾಗ್ರಹ ಮಂಡಲ"ವು ಕೊಟ್ಟಿದ್ದ ಕರೆಯಲ್ಲಿ "ಬ್ರಿಟಿಷರು ಸೂರೆಗೊಂಡಿರುವ ಸ್ವಾತಂತ್ರ್ಯವನ್ನು ಪುನಃ ಗಳಿಸುವ ಪರಮ ಪವಿತ್ರವಾದ ಗುರಿಯು ನಮ್ಮೆದುರಿಗಿದೆ. ನಾವು ಸ್ವತಂತ್ರರಾಗಬೇಕು. ನಮ್ಮ ಪ್ರಭುತ್ವದ ಸೂತ್ರಗಳು ನಮ್ಮ ಕೈಯ್ಯಲ್ಲಿರಬೇಕು" ಎಂದು ಹೇಳಿತ್ತು.

ಹಾಗೆ ನೋಡಿದರೆ ಮಹಾರಾಜರುಗಳ ಬಗ್ಗೆ ಜನರಿಗೆ ಪ್ರೀತಿ-ವಿಶ್ವಾಸವೇ ಇತ್ತು. ಮುಮ್ಮಡಿಯವರಿಂದ ಹಿಡಿದು ಜಯಚಾಮರಾಜ ಒಡೆಯರೂ ಸೇರಿದಂತೆ ಅವರ ಆಡಳಿತವನ್ನು ಜನ ಮೆಚ್ಚಿಯೇ ಇದ್ದರು. ಈ ನಾಲ್ಕೂ ಮಹಾರಾಜರ ಹಿತಾಸಕ್ತಿಗಳು ಜನಪರವಾಗಿತ್ತು. ಅವರ ಆಡಳಿತದ ಅವಧಿಯಲ್ಲಿ ಹಲವಾರು ಜನೋಪಯೋಗಿ ಕಾರ್ಯಗಳು ನಡೆದವು. ಅಭಿವೃದ್ಧಿಯಲ್ಲಿ ಮೈಸೂರು ಸಂಸ್ಥಾನ ಮುಂಚೂಣಿಯಲ್ಲಿದ್ದು 'ಮಾದರಿ ಸಂಸ್ಥಾನ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಅದನ್ನು ಸಾಧಿಸಿದ್ದವರು ಮೈಸೂರಿನ ಮಹಾರಾಜರು. ಅವರು ತಮ್ಮ ಪ್ರಜೆಗಳ ಹಿತಾಸಕ್ತಿ ಹಾಗೂ ಆಶೋತ್ತರಗಳನ್ನು ಅರಿತು ಧರ್ಮದರ್ಶಿಗಳಂತೆ ಆಡಳಿತ ನಡೆಸುತ್ತಿದ್ದರು. ಜನರ ಇಂಗಿತವನ್ನು ಅರಿತು ಅವನ್ನು ಪೂರೈಸಲು ಶ್ರಮಿಸುತ್ತಿದ್ದರು. ಸ್ವತಃ ಗಾಂಧೀಜಿ ಅವರೇ ಮೈಸೂರನ್ನು 'ರಾಮರಾಜ್ಯ' ಎಂದು ಕರೆಯುವಂತಹ ಮಾದರಿ ಸಂಸ್ಥಾನ ಇದಾಗಿತ್ತು. "ನೀವು ಎರಡು ವಿಧದಲ್ಲಿ ಅದೃಷ್ಟವಂತರು. ನಿಮ್ಮ ಸುತ್ತಲಿನ ನಿಸರ್ಗ ಅತ್ಯಂತ ಸುಂದರ. ನಿಮ್ಮ ರಾಜರು ಒಳ್ಳೆಯವರು, ಉದಾರಹೃದಯರು. ಸದಾ ಅವರಿಗೆ ಜನರ ಯೋಗಕ್ಷೇಮದ ಚಿಂತೆಯೇ ಚಿಂತೆ" ಎಂದು ಸಂಸ್ಥಾನದಲ್ಲಿ ಪ್ರವಾಸ ಮಾಡಿದ್ದಾಗ ಹೇಳಿ, ಮಹಾರಾಜರ ಆಡಳಿತವನ್ನು ಗಾಂಧೀಜಿ ಪ್ರಶಂಸಿಸಿದ್ದರು.

1934ರಲ್ಲಿ ಗಾಂಧೀಜಿ ಅವರು ಮೈಸೂರಿಗೆ ಭೇಟಿ ಕೊಟ್ಟಿದ್ದಾಗ ಮೈಸೂರು ನಗರಸಭೆ ಅವರಿಗೆ ರಂಗಾಚಾರ್ಲು ಪುರಭವನದಲ್ಲಿ ಸಾರ್ವಜನಿಕ ಗೌರವವನ್ನು ಅರ್ಪಿಸಿತು. ಬೆಳ್ಳಿಯ ಕರಂಡದಲ್ಲಿ ಬಿನ್ನವತ್ತಳೆಯನ್ನು ಅರ್ಪಿಸಿತು. ಅದೇ ರೀತಿ ಇತರೆ ಸಂಘಸಂಸ್ಥೆಗಳೂ ಗಾಂಧೀಜಿ ಅವರಿಗೆ ಗೌರವವನ್ನು ಸಮರ್ಪಿಸಿದವು. ಸ್ವಾತಂತ್ರ್ಯಕ್ಕಾಗಿ ಅವರು ನಡೆಸುತ್ತಿದ್ದ ಹೋರಾಟಕ್ಕೆ ಬೆಂಬಲ ರೂಪವಾಗಿ ಸಂಗ್ರಹಿಸಲಾಗಿದ್ದ ಒಟ್ಟು 2,424 ರೂಪಾಯಿ ದೇಣಿಗೆಯನ್ನು ನೀಡಲಾಯಿತು. ತಮಗಿತ್ತ ಬಿನ್ನವತ್ತಳೆಗೆ ಉತ್ತರಿಸುತ್ತಾ ಗಾಂಧೀಜಿ ಅವರು ತಾವು ತಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳಲು ಆರು ವರ್ಷಗಳ ನಂತರ ಮತ್ತೆ ಇಲ್ಲಿಗೆ ಬರುತ್ತಿರುವುದಾಗಿ ತಿಳಿಸಿ, ತಾವು ಮೈಸೂರಿನಲ್ಲಿ ತಂಗಿದ್ದ ಅವಧಿಯಲ್ಲಿನ ಆಪ್ಯಾಯಮಾನವಾದ ನೆನಪನ್ನು ಹೊಂದಿರುವುದಾಗಿ ಹೇಳಿದರು. "ಮಹಾರಾಜ ಸಾಹೇಬರು, ಅವರ ದಿವಾನರು ಮತ್ತು ಅಧಿಕಾರಿಗಳಿಂದ ಹಿಡಿದು ಮಹಾರಾಜರ ಪ್ರಜೆಗಳೂ ಸೇರಿದಂತೆ ನಾನು ಹೆಚ್ಚಿನ ಪ್ರೀತಿಯನ್ನೇ ಅವರಿಂದ ಅನುಭವಿಸಿದ್ದೇನೆ" ಎಂದು ನುಡಿದರು. ಇದರಿಂದ ನಮಗೆ ತಿಳಿಯುವುದೇನೆಂದರೆ ಮಹಾರಾಜರು ಸ್ವಾತಂತ್ರ್ಯಕ್ಕಾಗಿ ಪಣತೊಟ್ಟಿದ್ದ, ಹೋರಾಡುತ್ತಿದ್ದ ಗಾಂಧೀಜಿ ಅವರ ಬಗ್ಗೆ ಗೌರವ ಹೊಂದಿದ್ದರು. ಅವರು ಮೈಸೂರಿಗೆ ಬಂದಾಗ ಸಹಕಾರ, ಆಶ್ರಯ ನೀಡುತ್ತಿದ್ದರು.

ಹೀಗಾಗಿ ತಮ್ಮ ಪ್ರಗತಿಪರ ಕಾರ್ಯಗಳಿಂದ ಮಹಾರಾಜರು ಪ್ರಜೆಗಳ ಪ್ರೀತ್ಯಾದರಗಳನ್ನು ಸಂಪಾದಿಸಿದ್ದರು. ತಮ್ಮ ಆಶೋತ್ತರಗಳನ್ನು ಪೂರೈಸಲು ಸದಾ ಚಿಂತಿಸುತ್ತಿದ್ದ ಮಹಾರಾಜರುಗಳ ಬಗ್ಗೆ ಜನ ಪ್ರೀತಿ-ಗೌರವಗಳನ್ನು ಹೊಂದಿದ್ದರೇ ಹೊರತು ಅವರ ವಿರುದ್ಧ ಹೋಗಲಿಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದ ಕಾಂಗ್ರೆಸ್ಸಿನ ಯುವ ಸದಸ್ಯರು ಮಹಾರಾಜರ ಕೃಪಾಶ್ರಯ ಒಪ್ಪದಿದ್ದರೂ ಆಗಿನ ಬಹು ಮಂದಿ ರಾಜಕಾರಿಣಿಗಳು ಮಹಾರಾಜರಿಗೆ ನಿಷ್ಠೆ ತೋರುತ್ತಿದ್ದರು. ಕಾಂಗ್ರೆಸ್ಸಿನವರ ಹೋರಾಟ ಮಹಾರಾಜರ ವಿರುದ್ಧವಾಗಿರಲಿಲ್ಲ. ಅವರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಡುತ್ತಿದ್ದರೂ ಅವರ ಹೋರಾಟ ಮೂಲತಃ ಭಾರತದ ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿತ್ತು. ಹೀಗಾಗಿ ಅದು ಮಹಾರಾಜರ ವಿರುದ್ಧದ ಚಳವಳಿಯಾಗಿರಲಿಲ್ಲ. ಹಾಗೆ ನೋಡಿದರೆ ಅವರು ಸ್ಥಾಪಿಸಿದ 'ಪ್ರಜಾಪ್ರತಿನಿಧಿ ಸಭೆ', 'ನ್ಯಾಯವಿಧಾಯಕ ಸಭೆ', ಅವುಗಳಲ್ಲಿನ ಸದಸ್ಯರ ಚುನಾವಣೆ ಇಂತಹ ಪ್ರಜಾಪ್ರಭುತ್ವಕ್ಕೆ ಮನ್ನಣೆ ನೀಡಿ ಕೈಗೊಂಡ ಕ್ರಾಂತಿಕಾರಕ ಕಾರ್ಯಗಳು ಅವರ ಪ್ರಜೆಗಳಲ್ಲಿ ಆಡಳಿತದಲ್ಲಿ ಆಸಕ್ತಿ ಹಾಗೂ ಸ್ವಾತಂತ್ರ್ಯ ಪ್ರೇಮ ಹೆಚ್ಚಲು ನೆರವಾಯಿತೆಂದೇ ಹೇಳಬೇಕು. ಪ್ರಜಾಪ್ರಭುತ್ವ ತತ್ವಗಳಲ್ಲಿ ಮಹಾರಾಜರ ನಂಬಿಕೆ, ಪ್ರಜೆಗಳು ಆಡಳಿತದಲ್ಲಿ ಸಹಭಾಗಿಗಳಾಗಬೇಕೆಂಬ ಅವರ ಆಸೆಯನ್ನು ತೋರಿಸುತ್ತದೆ. ಒಂದು ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅವರು ಒಂದು ತಳಹದಿಯನ್ನೇ ಹಾಕಿಕೊಟ್ಟಿದ್ದರು ಎನ್ನಬಹುದು.

ಈ ಹಿನ್ನೆಲೆಯಲ್ಲಿ ಮಹಾರಾಜ ಜಯಚಾಮರಾಜ ಒಡೆಯರು ಸ್ವಾತಂತ್ರ್ಯ ಘೋಷಣೆಗೂ ಮುನ್ನವೇ ಭಾರತದ ಒಕ್ಕೂಟದಲ್ಲಿ ಒಂದಾಗಲು ಮುಂದೆ ಬಂದಿದ್ದರಲ್ಲಿ ಆಶ್ಚರ್ಯವಿಲ್ಲ. 1947ರ ಆಗಸ್ಟ್ 9ರಂದೇ ಒಪ್ಪಂದ ಪತ್ರಕ್ಕೆ (Instrument of Accession) ಸಹಿ ಹಾಕಿಕೊಟ್ಟರು. ಭಾರತದ ಒಕ್ಕೂಟದಲ್ಲಿ ತಾವೂ ಭಾಗಿಗಳಾಗಲು ಮುಂದೆ ಬಂದರು. ಇದರಿಂದಾಗಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದರೂ ಮೈಸೂರಿಗೆ ಸ್ವಾತಂತ್ರ್ಯ ದೊರೆಯಲಿಲ್ಲ; ಅದಕ್ಕಾಗಿ ಹೋರಾಟ ಮಾಡಬೇಕಾಯಿತು ಎನ್ನುವ ಹೇಳಿಕೆ ಸತ್ಯಕ್ಕೆ ದೂರವಾಗುತ್ತದೆ. ಇತಿಹಾಸಕ್ಕೆ ಅಪಚಾರವಾಗುತ್ತದೆ. ಸ್ವಾತಂತ್ರ್ಯ ದೊರೆತ ದಿನ ಮೈಸೂರಿನಲ್ಲಿ ಸಂಭ್ರಮದ ಆಚರಣೆಗಳು ಜರುಗಿದವು. ಮೈಸೂರು ಕೂಡ ದೇಶದ ಇತರ ಕಡೆಗಳಂತೆ ಉತ್ಸಾಹ-ಉಲ್ಲಾಸದಿಂದ ಸಂಭ್ರಮಿಸಿತು. ಇದನ್ನು ಕಂಡಿದ್ದ ಇಂದಿನ ಹಿರಿಯರು ಈಗಲೂ ಸ್ಮರಿಸಿಕೊಂಡಾರು. ಅಂದಿನ ಪತ್ರಿಕೆಗಳಲ್ಲೂ ಸಂಭ್ರಮದ ಆಚರಣೆಯ ವಿವರಗಳು ದೊರೆತೀತು.

ಮುಖ್ಯಮಂತ್ರಿ ಜನರ ಪ್ರತಿನಿಧಿಯಾದರೆ, ದಿವಾನರು ಮಹಾರಾಜರಿಂದ ನೇಮಿಸಲ್ಪಟ್ಟವರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೂ ಸ್ವಾತಂತ್ರ್ಯ ಪಡೆದುಕೊಂಡಿದ್ದ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ ದೇಶೀಯ ಸಂಸ್ಥಾನವಾಗಿದ್ದ ಮೈಸೂರಿನಲ್ಲಿ ಪ್ರಜಾರಾಜ್ಯ ಸ್ಥಾಪಿಸಲಾಗುವುದೆಂದು ಜನ ಭಾವಿಸಿದ್ದರು. ಆದರೆ ಪ್ರಜಾಪ್ರಭುತ್ವದ ದಾರಿಯಲ್ಲಿ ಬಹಳಷ್ಟು ಮುಂದೆ ಸಾಗಿದ್ದ ಮೈಸೂರು ಅಂದು ಮೈಸೂರಿನ ದಿವಾನರಾಗಿದ್ದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರ ಸಲಹೆಯ ಮೇರೆಗೆ ಜನತೆಗೆ ಅಧಿಕಾರವನ್ನು ವಹಿಸಿಕೊಡಲು ಸಿದ್ಧವಾಗಿರಲಿಲ್ಲ. ದಿವಾನರು ಜನತೆಗೆ ಸರ್ಕಾರವನ್ನು ವಹಿಸಿಕೊಡುವುದಿಲ್ಲ ಎಂಬುದನ್ನು ತಿಳಿದ ಒಡನೆ ಜವಾಬ್ದಾರಿ ಸರ್ಕಾರ ಪಡೆಯುವ ಸಲುವಾಗಿ ಮೈಸೂರಿನ ಕಾಂಗ್ರೆಸ್ ನಾಯಕರು ಸತ್ಯಾಗ್ರಹ ಆಚರಿಸಲು ನಿರ್ಧರಿಸಿದರು.

1947ರ ಆಗಸ್ಟ್ 21ರಂದು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಸೇರಿ ಮಹತ್ವದ ನಿರ್ಣಯ ತೆಗೆದುಕೊಂಡಿತು. ಸೆಪ್ಟೆಂಬರ್ ಒಂದರಿಂದ ರಾಜ್ಯಾದ್ಯಂತ ಸತ್ಯಾಗ್ರಹ ನಡೆಸಲು ನಿರ್ಧಾರ ಕೈಗೊಂಡಿತು. ಕಾಂಗ್ರೆಸ್ ನಿರ್ಧಾರವನ್ನು ಮಹಾರಾಜರ ಗಮನಕ್ಕೆ ತರುವ ಸಲುವಾಗಿ ಒಂದು ಪತ್ರವನ್ನು ಬರೆಯಲು ತೀರ್ಮಾನಿಸಿತು. ಸತ್ಯಾಗ್ರಹದ ನೇತಾರರನ್ನಾಗಿ ಕೆ. ಚೆಂಗಲರಾಯ ರೆಡ್ಡಿಯವರನ್ನು ನೇಮಿಸಲಾಯಿತು. ಸತ್ಯಾಗ್ರಹಿಗಳು ಬೆಂಗಳೂರು ಮತ್ತು ರಾಜ್ಯದ ಇತರೆ ಎಲ್ಲಾ ಭಾಗಗಳಿಂದ ಸೆಪ್ಟೆಂಬರ್ 4ರಂದು ಹೊರಟು 11ರ ವೇಳೆಗೆ ಮೈಸೂರನ್ನು ತಲುಪಿ ಅರಮನೆ ಸತ್ಯಾಗ್ರಹದಲ್ಲಿ ಭಾಗವಹಿಸಬೇಕೆಂದು ಕರೆ ನೀಡಿತು. ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರಾದರೋ ಬಿಗಿಪಟ್ಟು ಹಿಡಿದರು. ಕಾಂಗ್ರೆಸ್ ಕೈಗೊಂಡ ನಿರ್ಣಯಗಳ ವಿರುದ್ಧ ಸೆಟೆದು ನಿಂತರು. ಇದು ಜನತೆಯಲ್ಲಿ ಹೊಸ ಹುರುಪನ್ನೇ ಹುಟ್ಟುಹಾಕಿತು. ರಾಜಷಾಹಿಯನ್ನು ಅಳಿಸಿ ಹಾಕಲು ಯಾವುದೇ ತ್ಯಾಗಕ್ಕೂ ಸಿದ್ಧವೆಂದು ಜನತೆ ಒಕ್ಕೊರಲಿನಿಂದ ಕೂಗಿ ದಿವಾನರ ವಿರುದ್ಧ ತಾವೂ ಸೆಟೆದು ನಿಂತರು. ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರ ಆಡಳಿತವನ್ನು ಬಹಿಷ್ಕರಿಸಿ 'ಮೈಸೂರು ಚಲೋ' ಚಳವಳಿಯನ್ನು ಪ್ರಾರಂಭಿಸಲಾಯಿತು. ಸಾವಿರಾರು ಜನ 'ಆರ್ಕಾಟ್ ಬಾಯ್‌ಕಾಟ್' ಘೋಷಣೆಗಳನ್ನು ಕೂಗುತ್ತಾ ನಗರದ ಬೀದಿಗಳಲ್ಲಿ ಮೆರವಣಿಗೆ ಹೊರಟರು. ಚಳವಳಿ ತೀವ್ರ ಸ್ವರೂಪಕ್ಕೆ ತಿರುಗಿತು. ವಿಕೋಪಕ್ಕೆ ಹೋಯಿತು. ರಾಜ್ಯದಲ್ಲಿ ಅಶಾಂತಿ, ಗಲಭೆ, ಗೋಲಿಬಾರು, ಸಾವುಗಳು ಜರುಗಿದವು. ಸೆಪ್ಟೆಂಬರ್ 9ರಂದು ರಾಮಸ್ವಾಮಿ ವೃತ್ತದ ಬಳಿ ಹಾರ್ಡ್ವಿಕ್ ಹೈಸ್ಕೂಲಿನ ವಿದ್ಯಾರ್ಥಿ ರಾಮಸ್ವಾಮಿ ಪೊಲೀಸರ ಗುಂಡಿಗೆ ಬಲಿಯಾದ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ 'ಮೈಸೂರು ಚಲೋ' ಸತ್ಯಾಗ್ರಹಿಗಳು ಕೂಗಿದ ಘೋಷಣೆಗಳು ಮಹಾರಾಜರ ವಿರುದ್ಧವಾಗಿರಲಿಲ್ಲ. ಅದೇನಿದ್ದರೂ ದಿವಾನರಾಗಿದ್ದ ಆರ್ಕಾಟ್ ಅವರ ವಿರುದ್ಧವಾಗಿತ್ತು. ಅದು ಅವರ ನಿಲುವನ್ನು ವಿರೋಧಿಸುವುದಾಗಿತ್ತು ಖಂಡಿಸುವುದಾಗಿತ್ತು.

ಇದರಿಂದ ಸ್ಪಷ್ಟವಾಗುವುದೇನೆಂದರೆ ಆಗಸ್ಟ್ 15ರ ನಂತರ ನಡೆದ ಚಳವಳಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ನಡೆದದ್ದೇ ಹೊರತು ಸ್ವಾತಂತ್ರ್ಯಕ್ಕಾಗಿ ನಡೆದ ಚಳವಳಿಯಾಗಿರಲಿಲ್ಲ. ಕಾರಣ ಇಡೀ ದೇಶಕ್ಕೆ ಸ್ವಾತಂತ್ರ್ಯ ಬಂದಾಗಲೇ ಮೈಸೂರು ಸಂಸ್ಥಾನಕ್ಕೂ ಸ್ವಾತಂತ್ರ್ಯ ಲಭಿಸಿತ್ತು. ಅದೇನಿದ್ದರೂ ಜನತಾ ಸರ್ಕಾರದ ಸ್ಥಾಪನೆ ಮಾತ್ರ 42 ದಿನಗಳು ತಡವಾಗಿತ್ತು. ಅದಕ್ಕಾಗಿ ಕಾಂಗ್ರೆಸ್ ಹೋರಾಟ ನಡೆಸಬೇಕಾಯಿತು. ಈ 42 ದಿನಗಳ 'ಮೈಸೂರು ಚಲೋ' ಚಳವಳಿ ಮುಖ್ಯಮಂತ್ರಿಗೆ ಸಮಾನ ಸ್ಥಾನದಲ್ಲಿದ್ದ ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರ ವಿರುದ್ಧವಾಗಿತ್ತು. ಅವರು ತೆಗೆದುಕೊಂಡ ನಿಲುವಿನ ವಿರುದ್ಧವಾಗಿತ್ತು. ಜನರ ಪ್ರೀತ್ಯಾದರಗಳನ್ನು ಸಂಪಾದಿಸಿದ್ದ ಮಹಾರಾಜ ಜಯಚಾಮರಾಜರು ರಾಜಪ್ರಮುಖರಾಗಿ, ಮುಂದೆ ರಾಜ್ಯಪಾಲರಾಗಿ ಮುಂದುವರೆದಿದ್ದರು.



ಗೌರಿ ಸತ್ಯ
ಹಿರಿಯ ಪತ್ರಕರ್ತರು



75 ವರ್ಷಗಳ ಸ್ವಾತಂತ್ರ್ಯ: ಲಿಂಗ ಸಮಾನತೆಯೆಡೆಗಿಟ್ಟ ಹೆಜ್ಜೆಗಳು

ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂಭ್ರಮಾಚರಣೆಯ ಈ ಹೊತ್ತಿನಲ್ಲಿ ಸ್ವತಂತ್ರ ಭಾರತ ಕಂಡ ಸಾಧನೆಗಳು, ಎದುರಿಸಿ–ಜಯಿಸಿದ ಸವಾಲುಗಳು, ಜಾಗತೀಕರಣದ ಜಗತ್ತಿನಲ್ಲಿ ಭಾರತ ಏರಿದ ಮಜಲುಗಳು –ಇವುಗಳ ಬಗ್ಗೆ ದೇಶದೆಲ್ಲೆಡೆ ವಿವಿಧ ವೇದಿಕೆಗಳಲ್ಲಿ ಚರ್ಚೆಗಳು ನಡೆಯುತ್ತಿವೆ. ಇದರ ಜೊತೆ ಜೊತೆಗೆ ದೇಶ ಸಾಧಿಸಿರುವ ಅಭಿವೃದ್ಧಿಯ ಪ್ರಯೋಜನಗಳನ್ನು ಭಾರತೀಯ ಸಮಾಜದ ಸರ್ವ ವರ್ಗಗಳಿಗೆ ತಲುಪಿಸುವುದು ಹೇಗೆ ಮತ್ತು ಭವಿಷ್ಯದಲ್ಲಿ ದೇಶ ಚಲಿಸಬೇಕಾದ ಮಾರ್ಗ ನಕ್ಷೆ ಹೇಗಿರಬೇಕು ಎಂಬ ವಿಚಾರಗಳ ಬಗ್ಗೆಯೂ ವಿಚಾರ–ವಿನಿಮಯ, ವಿಮರ್ಶೆಗಳು ನಡೆಯುತ್ತಿವೆ. ದೇಶದ ಸಂವಿಧಾನದ ಆಶೋತ್ತರಗಳ ಸಾಧನೆಗೆ, ಅದು ತೋರಿದ ಸಮಾನತೆಯ ಹಾದಿಯಲ್ಲಿ ನಾವು ಎಷ್ಟು ದೂರ ಸಾಗಿದ್ದೇವೆ, ನಾವು ಸಾಧಿಸಿರುವುದೆಷ್ಟು, ನಮ್ಮ ಯಶಸ್ಸುಗಳಿಗೆ– ಸೋಲುಗಳಿಗೆ ಕಾರಣಗಳು ಏನು ಮತ್ತು ಶತಮಾನದ ಸಂಭ್ರಮದತ್ತ ದೇಶವನ್ನು ಕೊಂಡೊಯ್ಯಲು ನಾವು ಮಾಡಬೇಕಾಗಿರುವುದು ಏನು ಎಂಬ ಚರ್ಚೆಗಳಲ್ಲೂ ಇಂದು ತೊಡಗಬೇಕಾಗಿದೆ. ಈ ನಿಟ್ಟಿನಲ್ಲಿ, ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ನಾವು ಎಷ್ಟು ದೂರ ಬಂದಿದ್ದೇವೆ, ಭವಿಷ್ಯದಲ್ಲಿ ಯಾವ–ಯಾವ ವಿಚಾರಗಳತ್ತ ಗಮನ ಹರಿಸಬೇಕು ಎಂಬ ಪ್ರಶ್ನೆಗಳನ್ನು ಎತ್ತಿ, ಅವುಗಳಿಗೆ ಉತ್ತರಗಳನ್ನು ಹುಡುಕುವ ಪ್ರಯತ್ನ ಈ ಲೇಖನದಲ್ಲಿದೆ.

ಯಾವುದೇ ದೇಶದಲ್ಲಿ ಲಿಂಗ ಸಮಾನತೆಯ ಮಟ್ಟವನ್ನು ಅಳೆಯಬೇಕಾದರೆ ಕೆಲ ಮುಖ್ಯ ಸೂಚ್ಯಂಕಗಳನ್ನು ಗಣನೆಗೆ ತೆಗೆದುಕೊಂಡು ಕಾಲಾನುಕ್ರಮದಲ್ಲಿ ಮಹಿಳೆಯರ ಸ್ಥಿತಿ– ಸಂದರ್ಭಗಳಲ್ಲಿ ಆಗುತ್ತಾ ಬಂದ ಧನಾತ್ಮಕ ಹಾಗೂ ನಕಾರಾತ್ಮಕ ಬದಲಾವಣೆಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಣೆಗೆ ಒಳಪಡಿಸುತ್ತಾ ಹೋಗಬೇಕು. ಅವುಗಳನ್ನೀಗ ನೋಡುತ್ತಾ ಹೋಗೋಣ.

ಮೊದಲಿಗೆ ಯಾವುದೇ ದೇಶದ ಲಿಂಗಾನುಪಾತ (ಪ್ರತಿ 1000 ಪುರುಷರಿಗೆ ಇರುವ ಸ್ತ್ರೀಯರ ಸಂಖ್ಯೆ) ಎಷ್ಟಿದೆ ಎಂಬುದು ಮಹಿಳಾ ಬದುಕಿನ ವಾಸ್ತವಗಳ ಒಂದು ಮುಖದ ಪರಿಚಯವನ್ನು ನೀಡುತ್ತದೆ. ಭಾರತಕ್ಕೆ ಸ್ವಾತಂತ್ರ್ಯ ಬಂದ ಸಮಯದಲ್ಲಿ ಪ್ರತಿ 1000 ಪುರುಷರಿಗೆ ಇದ್ದ ಸ್ತ್ರೀಯರ ಸಂಖ್ಯೆ 946. ಐವತ್ತು ವರ್ಷಗಳ ನಂತರ ಇದು 927 ಕ್ಕೆ ಇಳಿದಿತ್ತು.ಇದಕ್ಕೆ ಕಾರಣಗಳಾದರೂ ಏನು? ಈ ಪರಿಸ್ಥಿತಿ ಕೇವಲ ಸಂಖ್ಯಾತ್ಮಕವಾದ ವಿಚಾರವಲ್ಲ. ವೈದ್ಯಕೀಯ ಜಗತ್ತಿಗೆ ಪ್ರವೇಶಿಸಿದ ಹೊಸ ತಂತ್ರಜ್ಞಾನದ ದುರುಪಯೋಗ ಪಡೆದು, ಭ್ರೂಣಾವಸ್ಥೆಯಲ್ಲಿಯೇ ಶಿಶುವಿನ ಲಿಂಗವನ್ನು ಪತ್ತೆ ಹಚ್ಚಿ ಹೆಣ್ಣಾದರೆ ಅದನ್ನು ಅಕ್ರಮವಾಗಿ ಗರ್ಭಪಾತ ಮಾಡುವ ದುಷ್ಟ ಜಾಲವೊಂದು

ಪ್ರಮಾಣವೇ ಕಡಿಮೆಯಾಯಿತು. ಹೆಚ್ಚುತ್ತಿರುವ ವರದಕ್ಷಿಣೆಗಾಗಿ ಬೇಡಿಕೆ, ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಸಮ ಪಾಲು ನೀಡಲು ಸಿದ್ಧವಿಲ್ಲದ ಕುಟುಂಬಗಳು, ಗಂಡು ಮಕ್ಕಳು ಭವಿಷ್ಯದಲ್ಲಿ ತಮ್ಮನ್ನು ನೋಡಿಕೊಳ್ಳುತ್ತಾರೆಂಬ ಭ್ರಮೆ– ಇವೇ ಮುಂತಾದ ಕಾರಣಗಳಿಂದ ಹೆಣ್ಣು ಮಕ್ಕಳನ್ನು ಹುಟ್ಟುವ ಮೊದಲೇ ಕೊಲೆ ಮಾಡುತ್ತಿದ್ದ ಪ್ರವೃತ್ತಿ ಕೆಲ ರಾಜ್ಯಗಳಲ್ಲಿ ಮಿತಿ ಮೀರಿದ್ದರಿಂದ ದೇಶದ ಜನಸಂಖ್ಯೆಯಲ್ಲಿಯೇ ಸ್ತ್ರೀಯರ ಪ್ರಮಾಣ ಇಳಿಮುಖವಾಗುತ್ತಾ ಹೋಯಿತು.

ಸ್ವಾತಂತ್ರದ ಅಮೃತ ಮಹೋತ್ಸವ ಸಂದರ್ಭದಲ್ಲಿ, ಸ್ವತಂತ್ರ ಭಾರತದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಲಿಂಗಾನುಪಾತ 1000 ಪುರುಷರಿಗೆ 1020 ಸ್ತ್ರೀಯರಷ್ಟಾಗಿದೆ. ಇಳಿಯುತ್ತಿರುವ ಫಲಿತತೆಯ ಪ್ರಮಾಣ, ಸಂತಾನೋತ್ಪತ್ತಿಯ ವಯಸ್ಸನ್ನು ದಾಟಿದ ಮಹಿಳೆಯರ ಸಂಖ್ಯೆಯಲ್ಲಿ ಹೆಚ್ಚಳ ಈ ಬದಲಾವಣೆಗೆ ಮುಖ್ಯ ಕಾರಣಗಳು. ಆದರೆ ಇಡೀ ದೇಶದಲ್ಲಿ ಈ ಹೆಚ್ಚಳ ಏಕಪ್ರಕಾರವಾಗಿಲ್ಲ. ರಾಜ್ಯ–ರಾಜ್ಯಗಳ ನಡುವೆ, ವಿವಿಧ ಆರ್ಥಿಕ ಗುಂಪುಗಳ ನಡುವೆ, ವಯೋಗುಂಪುಗಳ ನಡುವೆ ವ್ಯತ್ಯಾಸಗಳಿವೆ. ಅದರಲ್ಲಿಯೂ ತೀವ್ರ ಕಳವಳಕ್ಕೆ ಎಡೆ ಮಾಡಿಕೊಟ್ಟಿರುವುದು ಇಳಿಮುಖವಾಗುತ್ತಿರುವ ಶಿಶು (1–6 ರ ವಯೋಗುಂಪು) ಲಿಂಗಾನುಪಾತ. ಇಂದಿಗೂ ಅದು ಪ್ರತಿ 1000ಕ್ಕೆ, 937 ರಷ್ಟಿದ್ದು ನಾವು ಭವಿಷ್ಯದಲ್ಲಿ ಗಮನ ಹರಿಸಬೇಕಾಗಿರುವುದು ಈ ವಿಷಯದತ್ತ ಎಂಬುದು ಮುಖ್ಯವಾಗುತ್ತದೆ.

ಮಹಿಳಾ ಪರವಾಗಿರುವ ಲಿಂಗಾನುಪಾತಕ್ಕೆ ನಿಕಟವಾಗಿ ಸಂಬಂಧಿಸಿರುವ ಮತ್ತೊಂದು ವಿಚಾರವೆಂದರೆ ಸ್ತ್ರೀಯರ ಜೀವಿತಾಪೇಕ್ಷ ಇಂದು 71 ವರ್ಷಗಳಷ್ಟಾಗಿರುವುದು. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಮಹಿಳೆಯರ ಸರಾಸರಿ ಜೀವಿತಾಪೇಕ್ಷ 32 ವರ್ಷಗಳಷ್ಟು ಮಾತ್ರವಿದ್ದದ್ದು ಕಳೆದ 7 ದಶಕಗಳಲ್ಲಿ ಹೆಚ್ಚಿದ ಆರೋಗ್ಯ ರಕ್ಷಣಾ ಸೌಲಭ್ಯಗಳು ಹಾಗೂ ಇಂದು ಶೇಕಡಾ 88 ರಷ್ಟು ಶಿಶು ಜನನಗಳು ಆಸ್ಪತ್ರೆಗಳಲ್ಲಿಯೇ ಆಗುತ್ತಿರುವುದರ ಕಾರಣಗಳಿಂದಾಗಿ ಮಹಿಳೆಯರ ಜೀವನಾವಧಿ ಹೆಚ್ಚಿದೆ.

ಸ್ವತಂತ್ರ ಭಾರತದ ಇತಿಹಾಸದಲ್ಲಿ ನಾವು

ನಿಲ್ಲುವಂತಹ ಒಂದೆಂದರೆ, ಶಿಕ್ಷಣ ಕ್ಷೇತ್ರದಲ್ಲಿ ಹೆಣ್ಣು ಮಕ್ಕಳು ಹಾಗೂ ಮಹಿಳೆಯರ ಪ್ರಾತಿನಿಧ್ಯದಲ್ಲಿ ಆಗಿರುವ ಹೆಚ್ಚಳ. ಇದು ಶಿಕ್ಷಣದ ಎಲ್ಲ ಮಟ್ಟಗಳಿಗೂ ಅನ್ವಯಿಸುತ್ತದೆ. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಶೇಕಡಾ 8.86 ರಷ್ಟು ಮಾತ್ರವಿದ್ದ ಸ್ತ್ರೀ ಸಾಕ್ಷರತೆ ಈಗ ಶೇಕಡಾ 74 ರಷ್ಟಾಗಿದ್ದು, ಗ್ರಾಮೀಣ ಮಹಿಳೆಯರ ಸಾಕ್ಷರತಾ ಮಟ್ಟ ಕಳೆದ ಒಂದೇ ದಶಕದಲ್ಲಿ ಶೇಕಡಾ 25 ರಷ್ಟು ಹೆಚ್ಚಳವನ್ನು ಕಂಡಿರುವುದು ಈ ಹೊತ್ತಿನಲ್ಲಿ ಸಂತಸ ತರುವಂಥ ವಿಚಾರ. ಪ್ರಾಥಮಿಕ ಶಾಲಾ ಶಿಕ್ಷಣದಲ್ಲಂತೂ ಹೆಣ್ಣು–ಗಂಡು ಮಕ್ಕಳ ಪ್ರಾತಿನಿಧ್ಯ ಸಮಾನವಾಗಿದ್ದು, ಪ್ರೌಢ ಶಿಕ್ಷಣ ಮಟ್ಟದಲ್ಲೂ ಅವರ ದಾಖಲಾತಿಯಲ್ಲಿದ್ದ ಅಂತರ ಕ್ರಮೇಣವಾಗಿ ಕಡಿಮೆಯಾಗುತ್ತಿದೆ. ಇಂದು ಪ್ರೌಢಶಾಲೆಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಶೇಕಡಾ 47 ಕ್ಕೆ ಏರಿರುವುದು ಕೂಡ ಮಹಿಳಾ ಅಭಿವೃದ್ಧಿಯ ಪಥದಲ್ಲಿ ಎದ್ದು ಕಾಣುವಂಥ ಒಂದು ಹೆಜ್ಜೆ ಗುರುತು. ಉನ್ನತ ಶಿಕ್ಷಣ ಕ್ಷೇತ್ರದಲ್ಲಿಯೂ ಮಹಿಳಾ ದಾಖಲಾತಿ ಇದೇ ಜಾಡಿನಲ್ಲಿ ಮುಂದುವರೆದಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಉನ್ನತ ಶಿಕ್ಷಣದಲ್ಲಿ ಶೇಕಡಾ 10 ಕ್ಕಿಂತ ಕಡಿಮೆ ಇದ್ದ ಮಹಿಳೆಯರ ಭಾಗವಹಿಸುವಿಕೆ ಇಂದು ಶೇಕಡಾ 48 ರಷ್ಟಾಗಿರುವುದು ಅಮೃತ ಮಹೋತ್ಸವದ ಸಂದರ್ಭದಲ್ಲಿ ನಾವು ಸಂಭ್ರಮಿಸಬೇಕಾದ ಬೆಳವಣಿಗೆಯೇ ಸರಿ.

ಕಳೆದ 75 ವರ್ಷಗಳಲ್ಲಿ ದೇಶ ಮಹಿಳಾ ಶಿಕ್ಷಣ ಕ್ಷೇತ್ರದಲ್ಲಿ ಕಂಡ ಗಮನಾರ್ಹ ಬದಲಾವಣೆಗಳಿಗೆ ಪ್ರಮುಖವಾಗಿ ಕಾರಣವಾದದ್ದು ಸರ್ವ ಶಿಕ್ಷಣ ಅಭಿಯಾನ, ಶಿಕ್ಷಣ ಹಕ್ಕು ಕಾಯಿದೆ, ಬೈಸಿಕಲ್ ಮತ್ತು ಮಧ್ಯಾಹ್ನದ ಊಟ ಮತ್ತು ಕಾಲದಿಂದ ಕಾಲಕ್ಕೆ ಜಾರಿಗೆ ಬಂದ ಅನೇಕ ಉತ್ತೇಜಕ ಯೋಜನೆಗಳು. ಶಿಕ್ಷಣದಲ್ಲಿ ಹೆಣ್ಣು ಮಕ್ಕಳು ಮತ್ತು ಮಹಿಳೆಯರು ಮುಂದುವರೆಯುವುದು ಅವರ ದೈಹಿಕ–ಮಾನಸಿಕ–ಸಾಮಾಜಿಕ ಪ್ರಗತಿಗೆ ಅತೀ ಅವಶ್ಯವಾದದ್ದು. ಕೋವಿಡ್ ತಂದಿಟ್ಟ ವಿಷಮ ಪರಿಸ್ಥಿತಿಗಳ ಪರಿಣಾಮವಾಗಿ ಅನೇಕ ಹೆಣ್ಣು ಮಕ್ಕಳ ಶಾಲಾ ಹಾಜರಾತಿಗೆ ಅಡೆ–ತಡೆಗಳು ಉಂಟಾಗಿ ಬಾಲ್ಯ ವಿವಾಹದಂಥ ಅಪಾಯಕಾರಿ ಘಟನೆಗಳು ನಡೆದದ್ದು ಅನೇಕ ಹೆಣ್ಣು ಮಕ್ಕಳ ಬದುಕಿನಲ್ಲಿ ಹಿಂಬೀಳಿಕೆ ಯಾಯಿತು ನಿಜ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮಾಚರಣೆಯ ಈ ಸಂದರ್ಭದಲ್ಲಿ ಅನೇಕ ಹೆಣ್ಣು ಮಕ್ಕಳ ಕಳೆದು ಹೋದ ಬದುಕನ್ನು ಮರು–ಕಟ್ಟಿ ಕೊಡಲು ದೇಶ ಕಾರ್ಯಪ್ರವೃತ್ತವಾಗಬೇಕು, ಹಾಗಾಗದಿದ್ದಲ್ಲಿ ನಾವು ಪಡೆದದ್ದನ್ನೂ ಕಳೆದುಕೊಳ್ಳುವಂಥ ಸ್ಥಿತಿಗೆ ತಲುಪುವ ಸಾಧ್ಯತೆ ಇದೆ.

ಕಳೆದ 75 ವರ್ಷಗಳಲ್ಲಿ ಶಿಕ್ಷಣದ ಎಲ್ಲ ಮಟ್ಟಗಳಲ್ಲೂ ಹೆಣ್ಣು ಮಕ್ಕಳ ಮತ್ತು ಮಹಿಳೆಯರ ಸಂಖ್ಯೆ ಹೆಚ್ಚಿದೆ ಎನ್ನುವುದು ಹೆಮ್ಮೆಪಡುವ ಸಂಗತಿಯೇ ಆದರೂ ಆರ್ಥಿಕವಾಗಿ ಅವರ ಸಶಕ್ತೀಕರಣಕ್ಕೆ

> **ದಿನೇ ದಿನೆ ಇಳಿಮುಖವಾಗುತ್ತಿರುವ ಮಹಿಳೆಯರ ಉದ್ಯೋಗ ಭಾಗವಹಿಸುವಿಕೆಯ ಪ್ರಮಾಣವನ್ನು ಹೆಚ್ಚಿಸಿ, ಅವರನ್ನು ಪರಾವಲಂಬಿತನದ ವರ್ತುಲದಿಂದ ಹೊರ ತರಬೇಕಾಗಿರುವುದು ಈ ಹೊತ್ತಿನಲ್ಲಿ ದೇಶದ ಮುಂದಿರುವ ಬೃಹತ್ ಸವಾಲುಗಳಲ್ಲಿ ಒಂದು. ಅವರಿಗೆ ಸ್ವಾವಲಂಬನೆಯ ಬದುಕನ್ನು ಕಟ್ಟಿಕೊಡಬೇಕಾದರೆ ಲಿಂಗ ಸೂಕ್ಷ್ಮ ಕಾರ್ಮಿಕ ಕಾಯಿದೆಗಳು ರೂಪಿತವಾಗಬೇಕು, ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ವಿಶೇಷವಾಗಿ ಗ್ರಾಮೀಣ ಹಾಗೂ ಅಂಚಿನಲ್ಲಿರುವ ವರ್ಗಗಳ ಮಹಿಳೆಯರಿಗೆ ನೀಡಬೇಕು ಹಾಗೂ ದೇಶದ ಉದ್ಯೋಗ ನಕ್ಷೆಯಿಂದ ಕಣ್ಮರೆಯಾಗಿರುವ ಮಹಿಳೆಯರನ್ನು ಹುಡುಕಿ, ಅವರನ್ನು ಮತ್ತೆ ಅದರಲ್ಲಿ ಒಳಗೊಳ್ಳುವ ಪ್ರಾಮಾಣಿಕ ಪ್ರಯತ್ನ ಗ್ರಾಮ ಪಂಚಾಯತಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಆಗಬೇಕು.**

ಅವರ ಭಾಗವಹಿಸುವಿಕೆ ಹೆಚ್ಚಿಲ್ಲವೆನ್ನುವುದು ತೀವ್ರ ಕಳವಳಕ್ಕೆ ಎಡೆಮಾಡಿ ಕೊಟ್ಟಿರುವ ವಿಚಾರಗಳಲ್ಲಿ ಒಂದು. ದುಡಿಮೆಯ ವಯೋಗುಂಪಿನಲ್ಲಿರುವ ಮಹಿಳೆಯರಲ್ಲಿ ಶೇಕಡಾ 18.6 ರಷ್ಟು ಮಾತ್ರ ಕಾರ್ಮಿಕ ವರ್ಗದಲ್ಲಿ ಭಾಗವಹಿಸುತ್ತಿದ್ದಾರೆ. ಈ ಪ್ರಮಾಣ ಪುರುಷರ ಭಾಗವಹಿಸುವಿಕೆಗಿಂತ ಮೂರು ಪಾಲು ಕಡಿಮೆಯಿದೆ. ಇಡೀ ಜಗತ್ತಿನಲ್ಲೇ ದುಡಿಯುವ ವರ್ಗದಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಮಹಿಳಾ ಭಾಗವಹಿಸುವಿಕೆ ಇರುವ ದೇಶಗಳಲ್ಲಿ ಭಾರತ ಮುಂದಿನ ಸಾಲಿನಲ್ಲಿದೆ. ಸ್ವತಂತ್ರ ಭಾರತ ಕಂಡ ಅತೀ ಕಡಿಮೆ ಮಟ್ಟದ ಮಹಿಳಾ ಭಾಗವಹಿಸುವಿಕೆ ಇದು ಎಂದು ಹೇಳಲಾಗುತ್ತಿದೆ. ಸ್ವಾತಂತ್ರ್ಯ ಬಂದಾಗಿನಿಂದ ವಿವಿಧ ಕಾಲಘಟ್ಟಗಳಲ್ಲಿ ಮಹಿಳೆಯರ ಆರ್ಥಿಕ ಭಾಗ ವಹಿಸುವಿಕೆ ಇಳಿಮುಖವಾಗುತ್ತಿರುವುದಕ್ಕೆ ಪ್ರಮುಖ ಕಾರಣಗಳೆಂದರೆ ಅವರಲ್ಲಿ ಹೆಚ್ಚಿನವರು ಅಸಂಘಟಿತ ಉದ್ಯೋಗಗಳಲ್ಲಿ ಇರುವುದು; ಹೆಚ್ಚುತ್ತಿರುವ ತಂತ್ರಜ್ಞಾನದ ಬಳಕೆಗೆ ಅವರು ಒಗ್ಗಿಕೊಳ್ಳಲಾಗದಿರುವುದು, ಹೊಸ ತಲೆಮಾರಿನ ಉದ್ಯೋಗಗಳಿಗೆ ಅವಶ್ಯವಾದ ಕೌಶಲ್ಯಗಳನ್ನು ಪಡೆಯಲು ಅವರಿಗೆ ಅವಕಾಶಗಳಿಲ್ಲದಿರುವುದು ಹಾಗೂ ಕೌಟುಂಬಿಕ ವಲಯದಲ್ಲಿ ಅವರು ಎದುರಿಸುವ ನಿರ್ಬಂಧಗಳು .

ಸ್ವತಂತ್ರ ಭಾರತದ 75 ವರ್ಷಗಳ ಇತಿಹಾಸದಲ್ಲಿ ದೇಶ ಲಿಂಗ ಸಮಾನತೆಯ ಸಾಧನೆಯತ್ತ ಇಟ್ಟ ಅತ್ಯಂತ ದೊಡ್ಡ ಹೆಜ್ಜೆಯೆಂದರೆ ಕಾನೂನಾತ್ಮಕ ಕ್ರಮಗಳ ಮೂಲಕ ಮಹಿಳೆಯರು ಶತಮಾನಗಳಿಂದ ಎದುರಿಸುತ್ತಾ ಬಂದಿರುವ ವಿವಿಧ ಬಗೆಯ ದೌರ್ಜನ್ಯಗಳಿಂದ ಅವರನ್ನು ರಕ್ಷಿಸಲು ಹಾಗೂ ಅವರಿಗೆ ಸಂದಿರುವ ಹಕ್ಕುಗಳನ್ನು ಅನುಭವಿಸಲು ಅಗತ್ಯವಾದ ಪರಿಸರವನ್ನು ಸೃಷ್ಟಿಸಲು ಮಾಡಿರುವ ಪ್ರಯತ್ನಗಳು. ಈ ಪ್ರಯತ್ನ ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನವೇ ಆರಂಭವಾಗಿದ್ದು, ಕಳೆದ 7 ದಶಕಗಳಲ್ಲಿ ಹೊಸ ಕಾಯಿದೆಗಳ ರಚನೆ, ಮಾಡಿದ್ದು, ಈಗಾಗಲೇ ಅಸ್ತಿತ್ವಕ್ಕೆ ಬಂದಿದ್ದ ಕಾಯಿದೆಗಳಿಗೆ ತಿದ್ದುಪಡಿಯನ್ನು ತಂದದ್ದು ಅಥವಾ ವಿಧೇಯಕಗಳನ್ನು ಮಂಡಿಸಿ ಲಿಂಗಾಧಾರಿತ ತಾರತಮ್ಯವನ್ನು ತಡೆಗಟ್ಟಲು ದೇಶ ಅನೇಕ ಪ್ರಯತ್ನಗಳನ್ನು ಮಾಡಿದೆ.

ಸ್ವಾತಂತ್ರಪೂರ್ವದಲ್ಲೇ ರಚಿತವಾದ ಸುಮಾರು 20 ಕಾಯಿದೆಗಳು ಸತಿ ಪದ್ಧತಿ, ಬಾಲ್ಯವಿವಾಹ, ಉತ್ತರಾಧಿಕಾರ ಮತ್ತು ಆಸ್ತಿ ಹಕ್ಕಿನ ನಿರಾಕರಣೆ ಮತ್ತು ವಿವಾಹ ವಿಚ್ಛೇದನಕ್ಕಿದ್ದ ಅಡ್ಡಿ ಮುಂತಾದ ಸ್ತ್ರೀ ಸ್ವಾತಂತ್ರ ವಿರೋಧಿ ಆಚರಣೆಗಳನ್ನು ಎದುರಿಸಲು ಪ್ರಯತ್ನಗಳನ್ನು ಮಾಡಿದ್ದವು ಎಂಬುದನ್ನು ನಾವು ಇಲ್ಲಿ ಮೊದಲು ಉಲ್ಲೇಖಿಸಬೇಕು. ಆದರೆ ಸ್ವಾತಂತ್ರ್ಯಾನಂತರದಲ್ಲಿ, ಅದರಲ್ಲೂ 1975–1985 ರ ಮಹಿಳಾ ದಶಕದ ಅವಧಿಯಲ್ಲಿ ಗಟ್ಟಿಗೊಂಡ ಮಹಿಳಾಪರ ಚಿಂತನೆಗಳು ಮತ್ತು ರೂಪುಗೊಂಡ ಹೋರಾಟಗಳು ಮುಂಬರುವ ವರ್ಷಗಳಲ್ಲಿ ಲಿಂಗ ನ್ಯಾಯ ಸ್ಥಾಪನೆಗಾಗಿ ಅನೇಕ ಹೊಸ ಕಾಯಿದೆಗಳು ಅಥವಾ ತಿದ್ದುಪಡಿಗಳು ರಚಿತವಾಗಲು ಕಾರಣವಾದವು. ಅದುವರೆಗೂ ಸಾರ್ವಜನಿಕ ವಲಯಕ್ಕೆಬಾರದೆ ಕುಟುಂಬವೆಂಬ ಕೋಟೆಯಲ್ಲಿ ಬಂಧಿತವಾಗಿದ್ದ ಹೆಣ್ಣು ಭ್ರೂಣ ಹತ್ಯೆ, ವರದಕ್ಷಿಣೆ ಪ್ರೇರಿತ ದೌರ್ಜನ್ಯ, ಕೌಟುಂಬಿಕ ಹಿಂಸೆ, ನಿಕಟ ಬಂಧುಗಳಿಂದಲೇ ಹೆಣ್ಣು ಮಕ್ಕಳ ಮೇಲೆ ನಡೆಯುವ ಲೈಂಗಿಕ ಅತ್ಯಾಚಾರ , ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಪಾಲನ್ನು ನಿರಾಕರಿಸುವುದು, ವೈಯುಕ್ತಿಕ ಕಾಯಿದೆಗಳ ಆಶ್ರಯ ಪಡೆದು ಹೆಣ್ಣುಮಕ್ಕಳಿಗೆ ವಿಚ್ಛೇದನದ ಹಕ್ಕಿನ ನಿರಾಕರಣೆ ಅಥವಾ ಜೀವನಾಂಶವನ್ನೂ ನೀಡದಿರುವುದು–ಮುಂತಾದ ಅನೇಕ ಕುಟುಂಬ ಕೇಂದ್ರಿತ ದೌರ್ಜನ್ಯಗಳ ವಿರುದ್ಧ ಸ್ವಾಯತ್ತ ಮಹಿಳಾ ಚಳವಳಿ ಧ್ವನಿಯನ್ನು ಎತ್ತಿ ಅವುಗಳಿಗೆ ಕಾನೂನಾತ್ಮಕ ಪರಿಹಾರಗಳನ್ನು ಪಡೆಯುವಲ್ಲಿ ಸಫಲವಾದದ್ದು ಸ್ವತಂತ್ರ ಭಾರತದ ಸಾಧನೆಗಳಲ್ಲಿ ಒಂದು. ಈ ಹೊತ್ತು ಲಿಂಗ ನ್ಯಾಯ ಸ್ಥಾಪನೆಯ ಗುರಿಯನ್ನು ಹೊಂದಿರುವ ಸುಮಾರು 145 ಕಾಯಿದೆಗಳು ಇರುವುದು ಗಮನಾರ್ಹ.

21 ನೇ ಶತಮಾನ ಆರಂಭವಾದ ಮೇಲಂತೂ ದೇಶದ ಇತಿಹಾಸದಲ್ಲಿ ಲಿಂಗ ನ್ಯಾಯ ಸ್ಥಾಪನೆಗಾಗಿ ರೂಪುಗೊಂಡ ಕಾಯಿದೆಗಳು, ಈಗಾಗಲೇ ಜಾರಿಯಾಗಿದ್ದ ಕಾಯಿದೆಗಳಿಗೆ ತಂದ ತಿದ್ದುಪಡಿಗಳು ಅಥವಾ ಸಂಸತ್ತಿನಲ್ಲಿ ಮಂಡಿಸಲಾಗಿರುವ ವಿಧೇಯಕಗಳು ಮಹಿಳೆಯರ ಬದುಕಿನಲ್ಲಿ ಧನಾತ್ಮಕ ಬದಲಾವಣೆಯನ್ನು ತರುವ ದಿಕ್ಕಿನಲ್ಲಿ ಇಟ್ಟ ಗೋಚರ ಹೆಜ್ಜೆಗುರುತುಗಳು. ಅವುಗಳಲ್ಲಿ ಎದ್ದು ನಿಲ್ಲುವಂಥವು ಕೌಟುಂಬಿಕ ದೌರ್ಜನ್ಯ ತಡೆಗಟ್ಟುವ ಕಾಯಿದೆ, ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಸಮ ಪಾಲನ್ನು ನೀಡಿದ ಕಾಯಿದೆ, ಉದ್ಯೋಗ ಜಾರಿಗೆ ಬಂದ ಕಾಯಿದೆ, ಮಹಿಳಾ ಕಾರ್ಮಿಕ ಹಕ್ಕುಗಳನ್ನು ಗಟ್ಟಿಗೊಳಿಸುವ ಕಾಯಿದೆ–ಇವೇ ಮುಂತಾದುವು.

ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ದೇಶ ನೀಡಿರುವ ಶೇಕಡಾ 50 ರಷ್ಟು ಪ್ರಾತಿನಿಧ್ಯ ಜಗತ್ತಿಗೇ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಅತ್ಯಂತ ಪ್ರಭಾವಿ ಮಾದರಿ ಎಂದು ಪರಿಗಣಿತವಾಗಿರುವುದು ಸ್ವತಂತ್ರ ಭಾರತ ಲಿಂಗ ಸಮಾನತೆಯ ಹಾದಿಯಲ್ಲಿ ಇಟ್ಟಿರುವ ಅತ್ಯಂತ ಮಹತ್ವವಾದ ಹೆಜ್ಜೆಗಳಲ್ಲಿ ಎದ್ದು ನಿಲ್ಲುವಂಥಹುದು. ಅನೇಕ ಸಂದರ್ಭಗಳು ಮತ್ತು ಸಂಸ್ಥೆಗಳಲ್ಲಿ ಈ ಪ್ರಾತಿನಿಧ್ಯ ಕೇವಲ ಸಂಖ್ಯಾತ್ಮಕ ಯಶಸ್ಸೇ ಹೊರತು ಪುರುಷ ಪ್ರಧಾನ ಮೌಲ್ಯಾಚರಣೆಗಳಿಂದ ಅಧಿಕಾರ ವ್ಯವಸ್ಥೆ ವಿಮುಕ್ತವಾಗಿಲ್ಲ ಎಂಬ ಟೀಕೆಯೂ ಇದೆ ಆದರೂ ಅಧಿಕಾರದ ಮರುಹಂಚಿಕೆಯ ಪ್ರಯತ್ನದಲ್ಲಿ ಇದೊಂದು ದಿಟ್ಟ ಹೆಜ್ಜೆ ಎನ್ನುವುದಂತೂ ನಿಜ.

ಮಹಿಳೆಯರಿಗೆ ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ 33 % ಮೀಸಲಾತಿಯನ್ನು ನೀಡುವ ಕಾಯಿದೆ, ಮಾನವ ಸಾಗಾಣಿಕೆಯನ್ನು ತಡೆಗಟ್ಟುವ ಕಾಯಿದೆ ಮತ್ತು ಏಕ ಲಿಂಗ ಸಂಬಂಧಗಳನ್ನು ಮಾನ್ಯ ಮಾಡುವ ಕಾಯಿದೆ– ಇವುಗಳು ಇನ್ನೂ ಚರ್ಚೆಯ ಹಂತದಲ್ಲೇ ಇರುವುದು ಲಿಂಗ ಸಮಾನತೆಯನ್ನು ಸಮಾಜ ಅರ್ಥೈಸುವ ರೀತಿಯಲ್ಲಿ ಬದಲಾವಣೆಗಳಿಗೆ ಪೂರಕವಾದ ವಾತಾವರಣ ಸಂಪೂರ್ಣವಾಗಿ ಸೃಷ್ಟಿಯಾಗಿಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

ಮಹಿಳೆಯರು ಸಮರೂಪವಾದ ಒಂದು ವರ್ಗವಲ್ಲ. ಜಾಗತೀಕರಣ ಮೆರೆಸಿದ ವಾಣಿಜ್ಯ ಸಂಸ್ಕೃತಿಯ ಪ್ರಭಾವದಿಂದಾಗಿ, ಕೋವಿಡ್ ಪಿಡುಗು ತಂದಿಟ್ಟ ಸಂಕಷ್ಟ ಪರಿಸ್ಥಿತಿಗಳ ಕಾರಣದಿಂದಾಗಿ ಅವರ ಬದುಕಿನಲ್ಲಿ ಹೊಸ ಸವಾಲುಗಳು ಸೃಷ್ಟಿಯಾಗಿವೆ. ಅಂಚಿನಲ್ಲಿರುವ ಸಮುದಾಯಗಳ ಮಹಿಳೆಯರ, ಹಿರಿಯ ನಾಗರಿಕರ, ದೈಹಿಕ ಹಾಗೂ ಮಾನಸಿಕ ವಿಕಲತೆಯಿಂದ ನರಳುತ್ತಿರುವವರ, ಲೈಂಗಿಕ ದಮನಿತರ, ಲೈಂಗಿಕ ಅಲ್ಪಸಂಖ್ಯಾತರ ಬದುಕಿನತ್ತ ನಾವೀಗ ವಿಶೇಷ ಗಮನ ಹರಿಸಬೇಕು. ಹಿಂದೆಂದಿಗಿಂತ ಇಂದು ಮಹಿಳೆಯರು ಹೆಚ್ಚು–ಕಡಿಮೆ ಎಲ್ಲ ಕ್ಷೇತ್ರಗಳನ್ನೂ ಪ್ರವೇಶ ಮಾಡಿದ್ದಾರೆ, ಆದರೂ ಇಂದಿಗೂ ಅವರ ವಿರುದ್ಧದ ದೌರ್ಜನ್ಯಗಳು ವಿವಿಧ ಪ್ರಕಾರಗಳಲ್ಲಿ, ಪ್ರಮಾಣಗಳಲ್ಲಿ ನಡೆಯುತ್ತಲೇ ಇವೆ ಆದ್ದರಿಂದ ಅಮೃತ ಮಹೋತ್ಸವದ ಆಚರಣೆಯ ಈ ಹೊತ್ತಿನಲ್ಲಿ ಲಿಂಗ ಸಮಾನತೆಯ ಹಾದಿಯಲ್ಲಿ ದೇಶ ಮೆಟ್ಟಿದ ಮೈಲುಗಲ್ಲುಗಳನ್ನು ಸಂಭ್ರಮಿಸುತ್ತಾ ಆ ಹಾದಿಯಲ್ಲಿರುವ ನಿಜವಾದ ಅಡ್ಡಿಗಳನ್ನು ಗುರುತಿಸಿ ಅವುಗಳನ್ನು ದಾಟಲು ರಾಜ್ಯ ಮತ್ತು ನಾಗರಿಕ ಸಮಾಜಗಳೆರಡೂ ಕಾರ್ಯಪ್ರವೃತ್ತವಾಗಬೇಕಿದೆ



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ

ಮೈಸೂರಲ್ಲೂ ಇದೆ 'ಸಬರಮತಿ ಆಶ್ರಮ'



–ಎಸ್.ಬಿ.ದೇವರಾಜ

ಸ್ವಾತಂತ್ರ್ಯ ಚಳವಳಿಗೆ ಪೂರಕವಾಗಿ ಮಹಾತ್ಮ ಗಾಂಧಿ ಅವರು ಗುಜರಾತ್‌ನ ಅಹಮದಾಬಾದ್‌ನಲ್ಲಿ ಸ್ಥಾಪಿಸಿದ 'ಸಬರಮತಿ ಆಶ್ರಮ'ದ ಮಾದರಿ ಮೈಸೂರಿನಲ್ಲಿಯೂ ಇದೆ.

ಮೈಸೂರು ವಿಶ್ವವಿದ್ಯಾಲಯದ ಶತಮಾನೋತ್ಸವ ಸಂಭ್ರಮದ ಸಂದರ್ಭದಲ್ಲಿ ಮಾನಸಗಂಗೋತ್ರಿ 'ಗಾಂಧಿ ಭವನ' ಆವರಣದಲ್ಲಿ ನಿರ್ಮಿಸಲಾಗಿರುವ 'ಮಾದರಿ ಸಬರಮತಿ ಆಶ್ರಮ'ದ ಬಗ್ಗೆ ಹಲವರಿಗೆ ತಿಳಿದಿಲ್ಲ. ಆದರೆ ಅದು ವಿದ್ಯಾರ್ಥಿಗಳು, ಗಾಂಧಿವಾದಿಗಳು ಮಾತ್ರವಲ್ಲದೆ ಪ್ರತಿಯೊಬ್ಬರೂ ಭೇಟಿ ನೀಡಿ ಕಣ್ತುಂಬಿಕೊಳ್ಳಬೇಕಾದ ಸುಂದರ ತಾಣ. ಹಚ್ಚಹಸಿರ ಪ್ರಕೃತಿ ಮಡಿಲಲ್ಲಿರುವ ಆಕರ್ಷಕ ಮಾದರಿ ಆಶ್ರಮ, ಸ್ವಾತಂತ್ರ್ಯ ಹೋರಾಟದ ದಿನಗಳಿಗೆ ಕರೆದೊಯ್ಯುತ್ತದೆ.

ಕಟ್ಟಡ ಶೈಲಿ, ಹೊರ ಮತ್ತು ಒಳ ಆವರಣ, ಕೊಠಡಿಗಳು ಸೇರಿದಂತೆ ಒಟ್ಟಾರೆ ನಿರ್ಮಾಣ ಮೂಲ ಸಬರಮತಿ ಆಶ್ರಮದಂತೆಯೇ ಇದೆ. ಗಾಂಧೀಜಿಯವರು ಮಲಗುತ್ತಿದ್ದ ಹಾಸಿಗೆ, ಪಾದುಕೆಗಳು, ಬಳಸುತ್ತಿದ್ದ ಕೋಲು, ಚರಕ, ಕನ್ನಡಕ ಹೀಗೆ ಹಲವು ವಸ್ತುಗಳ ಮಾದರಿಗಳನ್ನು ಇಲ್ಲಿಯೂ ಇಡಲಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಸೇರಿದಂತೆ ಹಲವು ಮಹನೀಯರೊಂದಿಗೆ ಗಾಂಧೀಜಿ ಚರ್ಚೆ ನಡೆಸುವುದು, ಚಳವಳಿಯ ರೂಪುರೇಷೆ ಸಿದ್ಧಪಡಿಸುವುದು. ಹೀಗೆ ಹಲವು ಸನ್ನಿವೇಶಗಳ ಫೋಟೋ ಗಳನ್ನು ಅಳವಡಿಸಲಾಗಿದೆ. ಒಟ್ಟಾರೆ ಗಾಂಧೀಜಿಯವರ ಜೀವನ ಮತ್ತು ಹೋರಾಟವನ್ನು ಈ ಸಬರಮತಿ ಆಶ್ರಮದ ಮಾದರಿ ಕಣ್ಮುಂದೆ ಕಟ್ಟುತ್ತದೆ. ಆಶ್ರಮದ ಆಸುಪಾಸಿನಲ್ಲೇ ಇರುವ ಗಾಂಧೀಜಿಯವರ ಹಲವು ಪ್ರತಿಮೆಗಳು ಗಮನ ಸೆಳೆಯುತ್ತವೆ.

ಮಾನಸಗಂಗೋತ್ರಿಯಲ್ಲಿರುವ ಮಾದರಿ ಸಬರಮತಿ ಆಶ್ರಮದ ಬಗ್ಗೆ ತಿಳಿದವರು ಇದನ್ನು 'ದಕ್ಷಿಣದ ಸಬರಮತಿ' ಎಂದು ಬಣ್ಣಿಸುತ್ತಾರೆ. ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ತಿಳುವಳಿಕೆ ಹೆಚ್ಚಿಸುವುದರ ಜೊತೆಗೆ ಅವರಲ್ಲಿ ರಾಷ್ಟ್ರೀಯತೆಯನ್ನು ಜಾಗೃತಿಗೊಳಿಸುವಲ್ಲಿ ಈ ಮಾದರಿ ಆಶ್ರಮ ಪರಿಣಾಮಕಾರಿಯಾಗಿದ್ದು, ಅಧ್ಯಯನಕ್ಕೂ ಸಹಕಾರಿಯಾಗಿದೆ.

ಮೈಸೂರು ವಿವಿ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದ ಡಾ.ಎಸ್.ಶಿವರಾಜಪ್ಪ, ವಿವಿಯ ಇಂಜಿನಿಯರ್ ಆಗಿದ್ದ ಕಿಶೋರ್ ನೇತೃತ್ವದ ತಂಡ ಅಹಮದಾಬಾದ್‌ನ 'ಸಬರಮತಿ ಆಶ್ರಮ'ಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿತ್ತು. ಅಲ್ಲಿನ ಕಟ್ಟಡ, ವಿಸ್ತೀರ್ಣ, ವಸ್ತುಗಳು ಹೀಗೆ ಪ್ರತಿಯೊಂದನ್ನೂ ದಾಖಲಿಸಿಕೊಂಡು ಅದೇ ಮಾದರಿಯಲ್ಲಿ ಮಾನಸಗಂಗೋತ್ರಿಯಲ್ಲಿ 2017ರಲ್ಲಿ ನಿರ್ಮಿಸಲಾಯಿತು.

ಈ ಮಾದರಿ ಆಶ್ರಮ ನಿರ್ಮಾಣಕ್ಕೆ ಮೈಸೂರು ವಿವಿಯೇ ಅನುದಾನ ನೀಡಿದೆ. ಗಾಂಧಿ ಬದುಕು ಹಾಗೂ ಹೋರಾಟಕ್ಕೆ ಸಂಬಂಧಿಸಿದ ಎಲ್ಲಾ ಫೋಟೋಗಳನ್ನೂ ಅಹಮದಾಬಾದ್‌ನಿಂದಲೇ ತರಿಸಿಕೊಂಡು ವ್ಯವಸ್ಥಿತವಾಗಿ ಅಳವಡಿಸಲಾಗಿದೆ.

'ಗಾಂಧಿ ಭವನ'ದ ಸಾರ್ಥಕ ಕಾರ್ಯ: ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಗಾಂಧೀಜಿಯವರ ಸಂದೇಶ ಸಾರುವ ಉದ್ದೇಶದಿಂದ ಮೈಸೂರು ವಿವಿ, 'ಗಾಂಧಿ ಭವನ' ಸ್ಥಾಪಿಸಿದೆ. ಬಿ.ಡಿ.ಜತ್ತಿ ಅವರು ಮುಖ್ಯಮಂತ್ರಿಯಾಗಿದ್ದಾಗ 1960ರ ಅಕ್ಟೋಬರ್ 13ರಂದು ಗಾಂಧಿ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. 1965ರ ಜನವರಿ 31ರಂದು ಅಂದಿನ ಪ್ರಧಾನಿ, ಗಾಂಧಿ ಅನುಯಾಯಿ ಮೊರಾರ್ಜಿ ದೇಸಾಯಿ ಅವರು 'ಗಾಂಧಿ ಭವನ' ಉದ್ಘಾಟಿಸಿದರು. ಅಂದಿನಿಂದ ಗಾಂಧಿ ತತ್ವಗಳು ಹಾಗೂ ಅವುಗಳ ಶ್ರೇಷ್ಠತೆಯ ಪ್ರಚಾರದಲ್ಲಿ ತೊಡಗಿದೆ. ಈ ನಿಟ್ಟಿನಲ್ಲಿ ನಿರಂತರವಾಗಿ ವಿಚಾರಗೋಷ್ಠಿ, ವಿಚಾರ ಸಂಕಿರಣ ಮತ್ತು ಆಹ್ವಾನಿತ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ಸ್ವಾತಂತ್ರ್ಯ ದಿನ, ಗಾಂಧಿ ಜಯಂತಿ ಮತ್ತು ಹುತಾತ್ಮರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡು ಬರಲಾಗುತ್ತಿದೆ.

ಶೈಕ್ಷಣಿಕ ಚಟುವಟಿಕೆ: ಗಾಂಧಿ ಭವನ 1980ರಲ್ಲಿ ಗಾಂಧಿ ಅಧ್ಯಯನ ಡಿಪ್ಲೊಮಾ ಆರಂಭಿಸಿತು. ನಂತರ ಪಿಹೆಚ್.ಡಿ ಅಧ್ಯಯನ, 2011–12ನೇ ಸಾಲಿನಲ್ಲಿ 'ಶಾಂತಿ ಮತ್ತು ಸಂಘರ್ಷ ಪರಿಹಾರ' ಎಂಎ ಸ್ನಾತಕೋತ್ತರ ಪದವಿಯನ್ನೂ ಆರಂಭಿಸಲಾಗಿದೆ. 45ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಿಹೆಚ್.ಡಿ ಹಾಗೂ ನೂರಾರು ಮಂದಿ ಎಂಎ ಪದವಿ ಪಡೆದಿದ್ದಾರೆ. ಪ್ರೊ.ಶಿವರಾಜಪ್ಪ ನಿರ್ದೇಶಕರಾಗಿದ್ದ ಸಂದರ್ಭದಲ್ಲಿ ಗಾಂಧೀಜಿ ಕುರಿತ 25 ಪುಸ್ತಕಗಳನ್ನು ಪ್ರಕಟಿಸಿರುವುದು ಮತ್ತೊಂದು ವಿಶೇಷ.

ಅಮೃತ ಮಹೋತ್ಸವ ವಿಶೇಷ: ಸ್ವಾತಂತ್ರ್ಯ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ವರ್ಷದಿಂದಲೇ ಹಲವು ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಮೈಸೂರು ವಿವಿ ವ್ಯಾಪ್ತಿಯ ಮೈಸೂರು, ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಜಿಲ್ಲೆಗಳ ಒಟ್ಟು 8 ಕಾಲೇಜುಗಳಲ್ಲಿ 'ಗಾಂಧಿ ಮತ್ತು ಮಹಿಳೆ', 'ಪ್ರಗತಿಪರ ಸಂಘಟನೆಗಳ ಮೇಲೆ ಗಾಂಧೀಜಿ ಪ್ರಭಾವ', 'ಗಾಂಧೀಜಿ ಮತ್ತು ಕಸ್ತೂರ್ ಬಾ' ಹೀಗೆ ಗಾಂಧಿ ಕುರಿತಾದ ವಿಚಾರಗಳ ಬಗ್ಗೆ ಉಪನ್ಯಾಸ ಮಾಲಿಕೆ ನಡೆಸಲಾಗಿದೆ. 2021ರ ಆಗಸ್ಟ್ 15ರಂದು ಗಾಂಧಿ ಭವನ ಆವರಣದಲ್ಲಿ 75 ಗಿಡಗಳನ್ನು ನೆಟ್ಟು ಪೋಷಿಸಲಾಗಿದೆ.



ಆ.25ಕ್ಕೆ ಶಿವಪುರದಲ್ಲಿ ಉತ್ಸವದ ಸಮಾರೋಪ

ಸರ್ಕಾರದ ಸೂಚನೆಯಂತೆ ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಶಿವಪುರದಲ್ಲಿ ಆ.25ರಂದು ಸಮಾರೋಪ ಸಮಾರಂಭ ನೆರವೇರಲಿದೆ. ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಮಂಡ್ಯ ಜಿಲ್ಲೆಯ ಶಿವಪುರ, ಸ್ವಾತಂತ್ರ್ಯ ಚಳವಳಿ ಮಹತ್ವದ ಸ್ಥಳವಾಗಿರುವುದರಿಂದ ಅಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ವಿದ್ಯಾರ್ಥಿಗಳು ಜಾಥಾ ನಡೆಸಲಿದ್ದು, ಸಭಾ ಕಾರ್ಯಕ್ರಮದಲ್ಲಿ ಹಲವು ಗಣ್ಯರ ಸಮ್ಮುಖದಲ್ಲಿ ಮೈಸೂರು ಹಾಗೂ ಮಂಡ್ಯ ಭಾಗದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಸನ್ಮಾನಿಸಲಾಗುವುದು. ಎಲ್ಲದರಲ್ಲೂ ಅದ್ದೂರಿತನ ಮೆರೆಯುತ್ತಿರುವ ಪ್ರಸ್ತುತದಲ್ಲಿ ಗಾಂಧೀಜಿಯವರ ಸರಳತೆ ಸಂದೇಶವನ್ನು ಯುವ ಸಮುದಾಯಕ್ಕೆ ಮನದಟ್ಟು ಮಾಡುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಗಾಂಧಿ ಭವನ ಪ್ರಯತ್ನ ಮುಂದುವರೆಸಲಿದೆ.



-ಪ್ರೊ.ಎಂ.ಶಂಕರ, ನಿರ್ದೇಶಕರು
ಗಾಂಧಿ ಅಧ್ಯಯನ ಕೇಂದ್ರ, ಮೈಸೂರು ವಿವಿ

ಮೈಸೂರು ಮಹನೀಯರಲ್ಲಿ ಒಬ್ಬರು ಬಿ.ಸಿ.ಲಿಂಗಯ್ಯ





1921ರ ನವೆಂಬರ್ 1ರಂದು ಅಂದರೆ ಕನ್ನಡ ರಾಜ್ಯೋತ್ಸವದಂದು ಜನಿಸಿದ ಬಿ.ಸಿ.ಲಿಂಗಯ್ಯ ಅವರು 1997ರ ಆಗಸ್ಟ್ 15ರಂದು ಅಂದರೆ ಸ್ವಾತಂತ್ರೋತ್ಸವ ಸ್ವರ್ಣ ಮಹೋತ್ಸವದಂದು ಇಹಲೋಕ ತ್ಯಜಿಸಿದರು. ಇಂದಿಗೆ ಅವರು ನಮ್ಮನ್ನಗಲಿ 25 ವರ್ಷ. ಬಿ.ಸಿ.ಲಿಂಗಯ್ಯ ಅವರು ಸ್ಮರಣಾರ್ಥವಾಗಿ ಈ ಲೇಖನ.

–ಸಂ

ಮೈಸೂರು ನಗರ ಮತ್ತು ಜಿಲ್ಲೆಯ ಹಿರಿಮೆಯನ್ನು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಎತ್ತರಕ್ಕೆ ಏರಿಸಿದ ಮಹನೀಯರಲ್ಲಿ ಬಿ.ಸಿ.ಲಿಂಗಯ್ಯ ಪ್ರಮುಖರು.

ಇವರು ಶಿಕ್ಷಣ, ಸಹಕಾರ, ರಾಜಕೀಯ ಹಾಗೂ ವಿಮಾ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದರಲ್ಲದೇ, ರಾಷ್ಟ್ರಮಟ್ಟದ ಹಲವಾರು ರಾಜಕಾರಣಿಗಳ ಜೊತೆ ನಿಕಟ ಸಂಬಂಧ ಹೊಂದಿದ್ದರು. ಈ ರಾಷ್ಟ್ರಮಟ್ಟದ ರಾಜಕಾರಣಿಗಳು ಉನ್ನತ ಅಧಿಕಾರವನ್ನು ಹೊಂದಿದ್ದಾಗ ಅವರ ಮೂಲಕ ಮೈಸೂರು ನಗರ ಹಾಗೂ ಜಿಲ್ಲೆಯ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ತಂದು ಅದನ್ನು ಕಾರ್ಯಗತಗೊಳಿಸಲು ಅವಿರತವಾಗಿ ಶ್ರಮಿಸಿದವರು.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ಬಾಬುರಾಯನ ಕೊಪ್ಪಲು ಗ್ರಾಮದಲ್ಲಿ ರೈತ ಕುಟುಂಬಕ್ಕೆ ಸೇರಿದ ಚಿಕ್ಕಲಿಂಗಯ್ಯ ಮತ್ತು ಲಿಂಗಮ್ಮ ದಂಪತಿ ಪುತ್ರನಾಗಿ 1921ರ ನವೆಂಬರ್ 1ರಂದು ಜನಿಸಿದ ಬಿ.ಸಿ.ಲಿಂಗಯ್ಯ ಅವರು, ಪ್ರಾರಂಭಿಕ ಹಂತದಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಹಲವಾರು ಸಂಘಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಜನಸೇವೆ ಮಾಡಿದರು.

ಆ ನಂತರ ತಮ್ಮ ಒಡನಾಡಿಗಳಾದ ಕೆ.ಪುಟ್ಟಸ್ವಾಮಿ ಹಾಗೂ ಪಿ.ಎಂ.ಚಿಕ್ಕಬೋರಯ್ಯ ಅವರೊಡಗೂಡಿ ಮೈಸೂರಿನ ಅಭಿವೃದ್ಧಿಗೆ ಶ್ರಮಿಸಲಾರಂಭಿಸಿದರು. ಅಂದಿನ ಕಾಲದಲ್ಲಿ ವಿಮೆಯ ಬಗ್ಗೆ ಸಾರ್ವಜನಿಕರಿಗೆ ಹೆಚ್ಚಿನ ಜಾಗೃತಿಯೇ ಇರಲಿಲ್ಲ. ಈ ವೇಳೆ ವಿಮಾ ಕ್ಷೇತ್ರವನ್ನು ಆರಿಸಿಕೊಂಡ ಬಿ.ಸಿ.ಲಿಂಗಯ್ಯ ವಿಮೆಯ ಪ್ರಾಮುಖ್ಯತೆ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾದರು. 1976ರಲ್ಲಿ ಭಾರತ ದೇಶದ ಗ್ರೂಪ್ ಇನ್ಶೂರೆನ್ಸ್ ಯೋಜನೆಯಲ್ಲಿ ಕರ್ನಾಟಕ ಮೊದಲ ಸ್ಥಾನ ಪಡೆದಿತ್ತು. ಅದರಲ್ಲಿ ಬಿ.ಸಿ.ಲಿಂಗಯ್ಯನವರ ಪಾತ್ರವೂ ಹಿರಿದು. ವಿಮಾ ಕ್ಷೇತ್ರದಲ್ಲಿ ಅವರು ಮಾಡಿದ ಸಾಧನೆಗಾಗಿ ರಾಜ್ಯದ ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರಿಂದ ಚಿನ್ನ ಹಾಗೂ ಬೆಳ್ಳಿ ಪದಕವನ್ನು ಪಡೆದಿದ್ದಾರೆ.


ವಿಮಾ ಕ್ಷೇತ್ರ ಆರ್ಥಿಕ ಸದೃಢತೆಗೆ ಸಹಕಾರಿ. ಆದರೆ ಶಿಕ್ಷಣ ಕ್ಷೇತ್ರ ದೇಶಕ್ಕೆ ಸತ್ಪ್ರಜೆಗಳನ್ನು ಹುಟ್ಟುಹಾಕಲು ಸಹಕಾರಿಯಾಗುತ್ತದೆ ಎಂಬ ಭಾವನೆ ತಳೆದಿದ್ದ ಬಿ.ಸಿ.ಲಿಂಗಯ್ಯ, ಮೈಸೂರಿನಲ್ಲಿ ಕೆ.ಪುಟ್ಟಸ್ವಾಮಿ ಮತ್ತು ಪಿ.ಎಂ.ಚಿಕ್ಕಬೋರಯ್ಯ ಜೊತೆಗೂಡಿ ವಿದ್ಯಾವರ್ಧಕ ಸಂಸ್ಥೆಯನ್ನು ಕಟ್ಟಿ ಬೆಳೆಸಿದರು. ರಾಜಕೀಯ ಕ್ಷೇತ್ರಕ್ಕೂ ಕಾಲಿಟ್ಟಿದ್ದ ಅವರು, ಮೈಸೂರು ಪುರಸಭೆಯ ಸದಸ್ಯರಾಗಿ 15 ವರ್ಷ ಸೇವೆ ಸಲ್ಲಿಸಿದ್ದಾರೆ. ಅದಲ್ಲದೆ ಎರಡು ಬಾರಿ ಅಧ್ಯಕ್ಷರಾಗಿದ್ದರು. ಅವರು ಅಧ್ಯಕ್ಷರಾಗಿದ್ದ ವೇಳೆಯಲ್ಲೇ ವಿದ್ಯಾವರ್ಧಕ ಸಂಸ್ಥೆಗೆ ಭೂಮಿ ಮಂಜೂರು ಮಾಡಲಾಯಿತು.

ಮೈಸೂರು ಪುರಸಭೆಯ ಶತಮಾನೋತ್ಸವ ಸಂಭ್ರಮ ಬಿ.ಸಿ.ಲಿಂಗಯ್ಯ ಅಧ್ಯಕ್ಷರಾಗಿದ್ದ ವೇಳೆಯೇ ಅದ್ಧೂರಿಯಾಗಿ ನಡೆಯಿತು. 1968ರ ಡಿಸೆಂಬರ್ 3ರಿಂದ 5ರವರೆಗೆ ನಡೆದ ಈ ಸಂಭ್ರಮಕ್ಕೆ ಬಿ.ಸಿ.ಲಿಂಗಯ್ಯ ಅವರು ತಮ್ಮ ರಾಜಕೀಯ ಪ್ರಭಾವವನ್ನು ಬಳಸಿಕೊಂಡು ಅಂದಿನ ಮೈಸೂರು ರಾಜ್ಯದ ಗವರ್ನರ್ ಆಗಿದ್ದ ಜಿ.ಎಸ್. ಪಾಠಕ್ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್, ತಮ್ಮ ಒಡನಾಡಿಯೂ ಆದ ಪೌರಾಡಳಿತ ಹಾಗೂ ಕಾರ್ಮಿಕ ಸಚಿವ ಕೆ.ಪುಟ್ಟಸ್ವಾಮಿ, ಶಿಕ್ಷಣ ಸಚಿವ ಕೆ.ವಿ.ಶಂಕರೇಗೌಡ, ವಿಧಾನಪರಿಷತ್ ಸಭಾಪತಿ ಕೆ.ಕೆ.ಶೆಟ್ಟಿ, ನೀರಾವರಿ ಸಚಿವ ಅಂದಾನಪ್ಪ ದೊಡ್ಡಮೇಟಿ ಅವರನ್ನು ಕರೆಸಿದ್ದರು. ಕೇವಲ ಅವರನ್ನೆಲ್ಲ ಸಮಾರಂಭಕ್ಕೆ ಕರೆಸಿದ್ದು ಮಾತ್ರವಲ್ಲದೆ ಅವರ ಮೂಲಕ ಮೈಸೂರು ನಗರ ಹಾಗೂ ಜಿಲ್ಲೆಗೆ ಹಲವಾರು ಯೋಜನೆಗಳನ್ನು ತರುವಲ್ಲಿಯೂ ಯಶಸ್ವಿಯಾದರು.

ಬಿ.ಸಿ.ಲಿಂಗಯ್ಯ ಅವರು ಕೇವಲ ರಾಜ್ಯಮಟ್ಟದ ಹಿರಿಯ ರಾಜಕಾರಣಿಗಳೊಂದಿಗೆ ಮಾತ್ರವಲ್ಲದೆ ರಾಷ್ಟ್ರಮಟ್ಟದ ರಾಜಕಾರಣಿಗಳೊಂದಿಗೂ ನಿಕಟ ಸಂಬಂಧ ಹೊಂದಿ ಅವರ ಮೂಲಕವೂ ಮೈಸೂರು ಅಭಿವೃದ್ಧಿಗೆ ಸಾಕಷ್ಟು ಕೊಡುಗೆಗಳನ್ನು ಕೊಡಿಸಿದ್ದಾರೆ. ಹಿಂದಿನ ಪ್ರಧಾನಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿ, ಇಂದಿರಾ ಗಾಂಧಿ, ಮೊರಾರ್ಜಿ ದೇಸಾಯಿ, ರಾಷ್ಟ್ರಪತಿಗಳಾದ ಗ್ಯಾನಿ ಜೈಲ್‌ಸಿಂಗ್, ಉಪರಾಷ್ಟ್ರಪತಿಗಳಾಗಿದ್ದ ಬಿ.ಡಿ.ಜತ್ತಿ, ಕಾಂಗ್ರೆಸ್ ಧುರೀಣ ಕಾಮರಾಜ್, ರಾಜ್ಯ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪ ಮುಂತಾದವರೊಂದಿಗೆ ನಿಕಟ ಸಂಬಂಧ ಹೊಂದಿದ್ದರೂ ಬಿ.ಸಿ.ಲಿಂಗಯ್ಯ ಅವರು ಅಧಿಕಾರಕ್ಕಾಗಿ ಹಾತೊರೆದವರಲ್ಲ. ತಮ್ಮ ಈ ಸಂಬಂಧಗಳ ಮೂಲಕ ರಾಜ್ಯಮಟ್ಟದಲ್ಲಿ ಯಾವುದಾದರೂ ರಾಜಕೀಯ ಹುದ್ದೆ ಪಡೆಯಲು ಅವರು ಪ್ರಯತ್ನಿಸಲೇ ಇಲ್ಲ. ಬದಲಾಗಿ ಮೈಸೂರಿನ ಅಭಿವೃದ್ಧಿಗೆ ಈ ಸಂಬಂಧಗಳನ್ನು ಬಳಸಿಕೊಂಡದ್ದು ಎಂಬುದು ವಿಶೇಷ.

ಸಹಕಾರ ಕ್ಷೇತ್ರದಲ್ಲೂ ಬಿ.ಸಿ.ಲಿಂಗಯ್ಯ ಅವರ ಸೇವೆ ಅನನ್ಯ. ಮೈಸೂರು ಜಿಲ್ಲಾ ಸಹಕಾರ ಬ್ಯಾಂಕ್ ಹಾಗೂ ಅಪೆಕ್ಸ್ ಬ್ಯಾಂಕಿನಲ್ಲಿ ಸತತ 12 ವರ್ಷಗಳ ಕಾಲ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದ ಅವರು ಎಂಡಿಸಿಸಿ ಬ್ಯಾಂಕ್ (ಇಂದಿನ ಎಂಸಿಡಿಸಿಸಿ ಬ್ಯಾಂಕ್) ಅಧ್ಯಕ್ಷರಾಗಿ 3 ವರ್ಷ ಕಾಲ ಕಾರ್ಯ ನಿರ್ವಹಿಸಿದ ಬಿ.ಸಿ.ಲಿಂಗಯ್ಯ ಜನತಾ ಬಜಾರ್ ಸ್ಥಾಪನೆಯಾಗಲು ಕಾರಣೀಭೂತರಾಗಿದ್ದರು. ದಸರಾ ವಸ್ತು ಪ್ರದರ್ಶನ ಸಮಿತಿ ಅಧ್ಯಕ್ಷರಾಗಿ ಲಯನ್ಸ್ ಜಿಲ್ಲಾ ಗವರ್ನರ್ ಆಗಿ ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಅಪ್ಪಟ ಕಾಂಗ್ರೆಸ್ಸಿಗರಾಗಿದ್ದ ಅವರಿಗೆ ಪಕ್ಷಾಂತರದ ಸೋಂಕು ತಟ್ಟಲೇ ಇಲ್ಲ. ಪ್ರಭಾವಿ ರಾಜಕಾರಣಿಗಳ ಸಂಬಂಧವಿದ್ದರೂ ಕೂಡ ರಾಜ್ಯಮಟ್ಟದ ಹುದ್ದೆಗೆ ಹೋಗದೇ ಇದ್ದರೂ ಕೊನೆಯವರೆಗೂ ಕಾಂಗ್ರೆಸ್ಸಿಗರಾಗಿಯೇ ಉಳಿದಿದ್ದರು.

1921ರ ನವೆಂಬರ್ 1ರಂದು ಅಂದರೆ ಕನ್ನಡ ರಾಜ್ಯೋತ್ಸವದಂದು ಜನಿಸಿದ ಬಿ.ಸಿ.ಲಿಂಗಯ್ಯ 1997ರ ಆಗಸ್ಟ್ 15ರಂದು ಅಂದರೆ ಸ್ವಾತಂತ್ರ್ಯೋತ್ಸವ ಸ್ವರ್ಣ ಮಹೋತ್ಸವದಂದು ಇಹಲೋಕ ತ್ಯಜಿಸಿದರು.





ಭಾರತಾಂಬೆಯ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸೋಣ,
ಅದಕ್ಕಾಗಿ ಜಾತಿ, ಧರ್ಮ ಮರೆತು ನಾವೆಲ್ಲರೂ
ಭಾರತೀಯರು ಎಂಬ ಮನೋಭಾವನೆಯಿಂದ ಬಾಳಿ ಬದುಕೋಣ

ಸರ್ವರಿಗೂ

ಸ್ವಾತಂತ್ರ್ಯ ಅಮೃತ ಮಹೋತ್ಸವ

75 ದಿನಾಚರಣೆಯ ಶುಭಾಶಯಗಳು

Har Ghar Thiranga

ಜನನಾಯಕ ಎಂ.ರುದ್ರೇಶ್

ಅಧ್ಯಕ್ಷರು, ಕರ್ನಾಟಕ ಗ್ರಾಮೀಣ ಮೂಲಭೂತ
ಸೌಕರ್ಯ ನಿಗಮ
ಬೆಂಗಳೂರು

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮಾರ್ಗದರ್ಶನ, ರಾಜ್ಯ ಉಪಾಧ್ಯಕ್ಷ ವಿಜಯೇಂದ್ರ ಸಾರಥ್ಯದಲ್ಲಿ ಸಂಘಟನೆ

ಚಾ.ನಗರ ಜಿಲ್ಲೆಗೆ ಆಕ್ಸಿಜನ್ ಘಟಕ ಸ್ಥಾಪನೆ ಹೆಗ್ಗಳಿಕೆ. ಸೋಂಪುರದಲ್ಲಿ ಕಡೆಲೆಕಾಯಿ ಪರಿಷೆ ಆಚರಣೆ ಮೂಲಕ ಖ್ಯಾತಿ.

ಕೋವಿಡ್ ವೇಳೆ ಸಾಮಾಜಿಕ ಕಾರ್ಯ, ಪ್ರಾಣಿಗಳಿಗೂ ಆಹಾರ ನೀಡಿ ಹಸಿವು ನೀಗಿಸಿದ ನಾವಿಕ

ಕಂಠೀರವ ಸ್ಟುಡಿಯೋಗೆ ಗತಕಾಲದ ಸ್ಪರ್ಶ, ಲಾಭದತ್ತ ಕೊಂಡೊಯ್ದ ಖ್ಯಾತಿ



Promotional Feature

ಕರ್ನಾಟಕ ಗ್ರಾಮೀಣ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಜನಮನ್ನಣೆಗಳಿಸಿರುವ ಎಂ. ರುದ್ರೇಶ್ ಅವರು ಮಾಜಿ ಮುಖ್ಯಮಂತ್ರಿಗಳಾದ ಶ್ರೀಯುತ ಯಡಿಯೂರಪ್ಪ ಸೇರಿದಂತೆ ಹಿರಿಯ ಬಿಜೆಪಿ ನಾಯಕರ ಮಾರ್ಗದರ್ಶನ, ಆಶೀರ್ವಾದದೊಂದಿಗೆ ಮತ್ತು ರಾಜ್ಯ ಉಪಾಧ್ಯಕ್ಷ ಬಿವೈ ವಿಜಯೇಂದ್ರ ಅವರ ಮಾರ್ಗದರ್ಶನದಲ್ಲಿ ನಾನಾ ಸೇವಾ ಕೈಂಕರ್ಯಗಳನ್ನು ಹಮ್ಮಿಕೊಳ್ಳುವ ಮೂಲಕ ಹಾಗೂ ಶ್ರೀಮತಿ ಕಾಳಮ್ಮ ಮತ್ತು ದಿವಂಗತ ಶ್ರೀ ಮಲ್ಲೇಶಯ್ಯ ಸೇವಾ ಟ್ರಸ್ಟ್ ಸ್ಥಾಪಿಸಿ, ಟ್ರಸ್ಟ್ ಮೂಲಕ ಅನೇಕ ಸೇವಾ ಕೈಂಕರ್ಯಗಳನ್ನು ನೆರವೇರಿಸುವ ಮೂಲಕ ಜನನಾಯಕರಾಗಿ ಗುರುತಿಸಿಕೊಂಡಿದ್ದಾರೆ. ಅಧಿಕಾರವಿದೆ ಎಂದು ಅಹಂಪಡದೆ ತಮ್ಮ ಬಳಿ ಬಂದು ಸಂಕಷ್ಟ ಸಂಕಷ್ಟ ತೋಡಿಕೊಂಡ ಸಾವಿರಾರು ಮಂದಿಗೆ ಆರೋಗ್ಯ ಸೇವೆ, ಆರ್ಥಿಕ ನೆರವು ನೀಡಿ ಔದಾರ್ಯತೆ ಮೆರೆದಿದ್ದಾರೆ. ಅದರಲ್ಲೂ ಕೋವಿಡ್ ವೇಳೆಯಲ್ಲಿ ಬಿ. ವೈ. ವಿಜಯೇಂದ್ರ ಅವರ ನಿರ್ದೇಶನದ ಮೇರೆಗೆ ಸಾವಿರಾರು ಮಂದಿಗೆ ಆಹಾರ ಕಿಟ್, ಹಣ್ಣು, ತರಕಾರಿ, ಮನೆ ಮನೆಗೆ ತೆರಳಿ ಔಷಧಿ ವಿತರಿಸಿ ವಿತರಿಸಿ ಮಾನವೀಯ ಸೇವೆಗೂ ನಾ ಸೈ ಎಂದು ಸಾಬೀತು ಮಾಡಿದ್ದಾರೆ. ಜೊತೆಗೆ ತಮ್ಮದೇ ಟ್ರಸ್ಟ್ ಮೂಲಕ ಅಂಧರು, ವಿಕಲಚೇತನರು, ಆಟೋಚಾಲಕರು, ಶ್ರಮಿಕ ಕೂಲಿ ಕಾರ್ಮಿಕರಿಗೂ ಸಹಾ ಅಗತ್ಯ ಆಹಾರ ಪದಾರ್ಥ, ಬೆಡ್‌ಶೀಟ್, ಬಟ್ಟೆ ವಿತರಿಸಿದ್ದಾರೆ. ನಡೆದಾಡುವ ದೇವರಂತೆಲ್ಲಾ ಖ್ಯಾತರಾದ ಸಿದ್ದಗಂಗಾ ಶ್ರೀಗಳು ಜನ್ಮ ತಾಳಿದ ವೀರಾಪುರ ಗ್ರಾಮದ ಅಭಿವೃದ್ಧಿ ಮತ್ತು 111 ಅಡಿ ಎತ್ತರದ ಪ್ರತಿಮೆ ಮಾಡುವ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತಾ ಶ್ರೀಗಳು ಬಿ.ಎಸ್.ವೈ. ತೋರಿದ ಮಾರ್ಗದಲ್ಲಿ ಹೆಜ್ಜೆ ಹಾಕುವ ಜೊತೆಗೆ ಮಠ, ಮಾನ್ಯಗಳು, ಬಡವರ ಸೇವೆಗೂ ಅಸ್ತು ಎಂಬ ರೀತಿಯಲ್ಲಿ ಕಾರ್ಯವೈಖರಿ ಮುಂದುವರೆಸಿದ್ದಾರೆ.





ಕಡಲೆಕಾಯಿ ಪರಿಷೆ ಮೂಲಕ ಖ್ಯಾತಿ

ಸೋಂಪುರ ಮರುಳಸಿದ್ದಯ್ಯ ರುದ್ರೇಶ್ ಹೊರ ಜಗತ್ತಿಗೆ ಎಂ.ರುದ್ರೇಶ್ ಎಂತಲೇ ಪರಿಚಿತರು. ಶ್ರೀಮತಿ ಗೌರಮ್ಮ, ಮರುಳಸಿದ್ದಯ್ಯನವರ ಕಿರಿಯ ಮಗನಾದ ಅವರು ಬಾಲ್ಯದಿಂದಲೇ ಅನೇಕ ಜವಾಬ್ದಾರಿಗಳನ್ನು ಸ್ವೀಕರಿಸಿ ಯಶಸ್ವಿಯಾಗಿ ನಿಭಾಯಿಸುವ ಗುಣ ಹೊಂದಿದ್ದ ಕಾರಣ ಇವರಿಗೆ ರಾಜಕೀಯ ಬಹುಬೇಗ ಕರತಲಾಮಲಕವಾಯಿತು. ನೈಸ್ ಸರ್ಕಲ್ ಸೋಂಪುರದಲ್ಲಿ ಶ್ರೀ ನಂದಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಸಂಕ್ರಾಂತಿ ಹಬ್ಬದ ದಿನದಂದು ಕಡಲೇಕಾಯಿ ಪರಿಷೆಯನ್ನ ಪ್ರಾರಂಭಿಸಿ ಕಳೆದ 17 ವರ್ಷಗಳಿಂದಲೂ ಬಂದಂತಹ ಭಕ್ತಾದಿಗಳು, ಕಬ್ಬು, ಗೆಣ್ಣು ಹಾಗೂ ಕಡಲೆಕಾಯಿ ನೀಡಿ ಸತ್ಕರಿಸುವ ಕಾರ್ಯಕ್ರಮವನ್ನು ಮಾಡುತ್ತಲೇ ಬಂದಿದ್ದಾರೆ. ಜೊತೆಗೆ ನಾನಾ ರೈತ ಹೋರಾಟ, ಪಾದಯಾತ್ರೆ, ಪ್ರತಿಭಟನೆಗಳ ಮೂಲಕವೂ ಆಳುವ ಸರ್ಕಾರಗಳನ್ನು ಎಚ್ಚರಿಸುವ ಕೆಲಸ ಮಾಡುತ್ತಾ ಬಂದಿದ್ದಾರೆ. ಪಿಯುಸಿ ವ್ಯಾಸಂಗದ ವೇಳೆಯೇ ರಾಮಮಂದಿರ ಹೋರಾಟದಲ್ಲಿ ಸಕ್ರಿಯವಾಗಿ ಭಾಗಿಯಾಗುವ ಮೂಲಕ ಸಾರ್ವಜನಿಕ ಜೀವನ ಪ್ರವೇಶಿಸಿ, ನಂತರ ಸಂಘಟನಾ ಸಾಮರ್ಥ್ಯ, ನಾಯಕತ್ವ ಗುಣ ಒಂದೊಂದೇ ಜವಾಬ್ದಾರಿಯನ್ನು ಹೊರುತ್ತಿದ್ದಾರೆ.

ಹೆಮ್ಮಿಗೆಪುರ ಪಂಚಾಯ್ತಿ ಬಿಜೆಪಿ ಘಟಕದ ಕಾರ್ಯದರ್ಶಿ ಹುದ್ದೆಯಿಂದ ಶುರುವಾದ ಚೈತ್ರಯಾತ್ರೆ, ಕೆಂಗೇರಿ ಹೋಬಳಿ ಯುವ ಮೋರ್ಚಾ ಅಧ್ಯಕ್ಷ ಪಟ್ಟ, ಬೆಂಗಳೂರು ನಗರ ಜಿಲ್ಲೆಯ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ, ರಾಮನಗರ ಜಿಲ್ಲಾಧ್ಯಕ್ಷ, ತಾಲೂಕು ಅಧ್ಯಕ್ಷ ಹೀಗೆ ನಾನಾ ಹುದ್ದೆಗಳನ್ನು ಹೊರುವ ಮೂಲಕ ವರಿಷ್ಠರು ನೀಡಿದ ಕೆಲಸವನ್ನು ಕಾಯಾ, ವಾಚಾ ಮನಸಾ ಮಾಡುವ ಮೂಲಕ ನಾನು ಸೇವೆ ಜೊತೆ ಎಲ್ಲರ ಸಹಕಾರದೊಂದಿಗೆ ಸಂಘಟನೆಗೂ ಸೈ ಎಂದು ಸಾಬೀತು ಮಾಡಿದ್ದಾರೆ.





ಸಂಘಟನಾ ಚತುರ

2008 ರ ಚುನಾವಣೆಯಲ್ಲಿ ರಾಮನಗರದಲ್ಲಿ ನಿಕಟಪೂರ್ವ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರ ವಿರುದ್ಧ ಸ್ಪರ್ಧಿಸಿ ಎರಡನೇ ಸ್ಥಾನ ಪಡೆದು, ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಮಗಳು ಮಮತಾ ನಿಚ್ಚಾನಿಯವರನ್ನು ಮೂರನೇ ಸ್ಥಾನಕ್ಕೆ ತಳ್ಳಿದ್ದು ಇವರ ಸಂಘಟನಾ ಚತುರತೆಗೆ ಉದಾಹರಣೆ.
ಬಳಿಕ ಕಂಠೀರವ ಸ್ಟುಡಿಯೋ ಅಧ್ಯಕ್ಷರಾಗಿ ಸ್ಟುಡಿಯೋಗೆ ಗತಕಾಲದ ವೈಭವವನ್ನು ಮರುಸೃಷ್ಟಿ ಮಾಡಿ, ಲಾಭದ ಹಾದಿಗೆ ಸಾಗುವಂತೆ ಮಾಡಿದ ಖ್ಯಾತಿ ಇವರದ್ದು. ಪ್ರಸ್ತುತ ಕರ್ನಾಟಕ ಗ್ರಾಮೀಣ ಮೂಲಭೂತ ನಿಗಮದ ಅಧ್ಯಕ್ಷರಾಗಿಯೂ ಗಮನ ಸೆಳೆಯುವ ಕೆಲಸ ಮಾಡಿದ್ದಾರೆ.



ರುದ್ರೇಶ್ ಹೃದಯ ವೈಶಾಲ್ಯತೆ

ಕೋವಿಡ್ ಎಂಬ ಮಹಾಮಾರಿಯಿಂದ ಸಂಕಷ್ಟಕ್ಕೆ ಸಿಲುಕಿ ನಲುಗುತ್ತಿದ್ದಾಗ ನಾನಾ ಸೇವೆ ಮಾಡುವ ಮೂಲಕ ಗಮನ ಸೆಳೆದಿದ್ದ ರುದ್ರೇಶ್ ಅವರು ಹಸಿವು ಕೇವಲ ಮನುಷ್ಯನಿಗೆ ಮಾತ್ರವಲ್ಲ, ಪ್ರಾಣಿಗಳಿಗೂ ಸಹ ಎಂಬುದನ್ನು ಅರಿತು ಕೋವಿಡ್ ಸಮಯದಲ್ಲಿ ಕಾಡಿನ ಪ್ರಾಣಿಗಳಿಗೂ ಸಹ ಅಗತ್ಯ ಆಹಾರವನ್ನು ಒದಗಿಸಿದ್ದರು. ಕೋತಿಗಳಿಗೆ ಹಣ್ಣು , ಬ್ರೆಡ್ ಮುಂತಾದವುಗಳನ್ನು ವಿತರಿಸಿ ಹಸಿವನ್ನು ನೀಗಿಸಿದ ವಿಡಿಯೋ ಒಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಇದು ರುದ್ರೇಶ್ ರವರ ಹೃದಯವೈಶಾಲ್ಯತೆಗೆ ಮತ್ತೊಂದು ಉದಾಹರಣೆ.

ಗಡಿಜಿಲ್ಲೆಗೆ ಆಕ್ಸಿಜನ್ ಘಟಕ ಸ್ಥಾಪನೆ ಹೆಗ್ಗಳಿಕೆ

ಚಾಮರಾಜನಗರ ಗಡಿಜಿಲ್ಲೆಯಾಗಿದ್ದು ಈ ಜಿಲ್ಲೆಯಲ್ಲಿ ಆಕ್ಸಿಜನ್ ಕೊರತೆಯಿಂದ ಅನೇಕ ಸಾವು, ನೋವುಗಳು ಘಟಿಸಿದವು. ಆ ಘಟನೆ ಸಂಪೂರ್ಣ ರಾಜ್ಯವನ್ನೇ ಶೋಕಸಾಗರದಲ್ಲಿ ಮುಳುಗಿಸಿತ್ತು. ಅಂತಹ ಸುಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಸೂಚನೆ, ಮಾರ್ಗದರ್ಶನದ ಮೇರೆಗೆ ಕೆ.ಆರ್.ಐ.ಡಿ.ಎಲ್ ನ ಸಿ.ಎಸ್.ಆರ್ ಅನುದಾನದಲ್ಲಿ ಕೊಳ್ಳೇಗಾಲ, ಮಾಗಡಿ, ಕನಕಪುರ, ಹೊನ್ನಾಳಿ, ಶಿಗ್ಗಾಂವಿ –ಸವಣೂರು ಮುಂತಾದ ಕಡೆ ಸರ್ಕಾರಿ ಆಸ್ಪತ್ರೆಗಳಲ್ಲಿ ಶಾಶ್ವತವಾಗಿ ಆಕ್ಸಿಜನ್ ಘಟಕಗಳನ್ನು ಸ್ಥಾಪಿಸಿದರು. ಜೊತೆಗೆ ಹನೂರು ಗಡಿಯಂಚಿನ ನೂರಾರು ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಟ್ಯಾಬ್ ವಿತರಿಸಿ ಗಮನ ಸೆಳೆದರು.










ಮೈಸೂರಲ್ಲೂ ಸ್ವಾತಂತ್ರ್ಯ ಹೋರಾಟದ ಹೆಜ್ಜೆ ಗುರುತು

ಹೆಚ್.ಎಸ್.ದೊರೆಸ್ವಾಮಿ ಅವರ ಕೆಚ್ಚೆದೆಯ ಹೋರಾಟ





ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯದ ಕಿಚ್ಚು ಹೊತ್ತಿಸಿದ್ದ ನಂಜನಗೂಡಿನ ಸಮ್ಮೇಳನ

1945ರಲ್ಲಿ ಮೈಸೂರು ಜಿಲ್ಲೆ ನಂಜನಗೂಡಿನಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ನಡೆದ ವಿದ್ಯಾರ್ಥಿ ಸಮ್ಮೇಳನದಲ್ಲಿ ದೊರೆಸ್ವಾಮಿ ಸಮ್ಮೇಳನದ ಸಮಿತಿಯೊಂದರ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ವಿದ್ಯಾರ್ಥಿ ಸಮುದಾಯದಲ್ಲಿ ಸ್ವಾತಂತ್ರ್ಯದ ಕಿಚ್ಚು ಹೆಚ್ಚಿಸಿದ ಸಮ್ಮೇಳನ ಇದಾಗಿತ್ತು. ವಿದ್ಯಾರ್ಥಿ ಕಾಂಗ್ರೆಸ್ ಮುಖಂಡರು ಏರ್ಪಡಿಸಿದ್ದ ಈ ಸಮ್ಮೇಳನದಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಅಶೋಕ ಮೆಹ್ತ ಮತ್ತು ರಾವ್ ಸಾಹೇಬ್ ಪಟವರ್ಧನ್ ತಮ್ಮ ತೀಕ್ಷ್ಣ ಭಾಷಣದ ಮೂಲಕ ಸ್ವಾತಂತ್ರ್ಯ ಕಿಚ್ಚು ಪ್ರಖರಗೊಳ್ಳುವಂತೆ ಮಾಡಿದ್ದರು.

■ ಎಂ.ಬಿ.ಪವನ್‌ಮೂರ್ತಿ

ಬ್ರಿಟಿಷರ ಕಪಿಮುಷ್ಟಿಯಲ್ಲಿ ಸಿಲುಕಿದ್ದ ಭಾರತದಲ್ಲಿ ಸ್ವಾತಂತ್ರ್ಯದ ಕಿಚ್ಚು ವ್ಯಾಪಿಸಿದ್ದ ದಿನಗಳವು. ಅಂದು 1942ರ ಡಿಸೆಂಬರ್ 24ರಂದು ಬೆಂಗಳೂರಿನ ಸೆಂಟ್ರಲ್ ಜೈಲು ಸೇರಿದ ಹೋರಾಟಗಾರ ತರುಣನೊಬ್ಬ 1944ರ ಮೇ 14ಕ್ಕೆ ಬಿಡುಗಡೆಗೊಂಡು ಬಳಿಕ ಮೈಸೂರಿನಲ್ಲಿ ಆ ಯುವಕ ಚಳುವಳಿಯ ಹೆಜ್ಜೆ ಇಡತೊಡಗಿದ.

ಹೌದು, ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್.ದೊರೆಸ್ವಾಮಿ ಅವರ ಚಳವಳಿಯ ಹೆಜ್ಜೆ ಗುರುತುಗಳು ಮೈಸೂರಿನಲ್ಲೂ ಇವೆ. ದೇಶಕ್ಕೆ ಸ್ವಾತಂತ್ರ್ಯ ದೊರೆತ ಬಳಿಕ ಒಕ್ಕೂಟ ವ್ಯವಸ್ಥೆಯೊಳಗೆ ಅಂದಿನ ಮೈಸೂರು ಸಂಸ್ಥಾನ ಸೇರ್ಪಡೆಯಾಗಲು ನಡೆದ 'ಮೈಸೂರು ಚಲೋ' ಚಳವಳಿಯಲ್ಲಿಯೂ ದೊರೆಸ್ವಾಮಿ ಮಹತ್ತರ ಪಾತ್ರ ವಹಿಸಿದವರು.

1942ರ ಕ್ವಿಟ್ ಇಂಡಿಯಾ ಚಳವಳಿಯ ಹಿನ್ನೆಲೆಯಲ್ಲಿ ಬೆಂಗಳೂರು ಸೆಂಟ್ರಲ್ ಜೈಲು ಸೇರಿದ್ದ ದೊರೆಸ್ವಾಮಿಯವರು ಬಿಡುಗಡೆ ಬಳಿಕ ಮೈಸೂರಿನಲ್ಲಿ ನೆಲೆಸಬೇಕಾದ ಸನ್ನಿವೇಶ ನಿರ್ಮಾಣವಾಯಿತು. ತಮ್ಮ ಅಣ್ಣನ ಮಗಳ ಅನಾರೋಗ್ಯ ಕಾರಣಕ್ಕೆ ಮೈಸೂರಿಗೆ ಬಂದ ಅವರು ಯಾವುದಾದರೂ ವೃತ್ತಿ ಆರಂಭಿಸಲು ಪ್ರಯತ್ನದಲ್ಲಿದ್ದಾಗ, ಅಂದಿನ ಮೈಸೂರು ಪುರಸಭೆಯ ಅಧ್ಯಕ್ಷರೂ ಆದ ಸ್ವಾತಂತ್ರ್ಯ ಹೋರಾಟಗಾರ ಬಿ.ನಾರಾಯಣಸ್ವಾಮಿ ಅವರ ಮೂಲಕ ಸಾಫ್ಟ್‌ವುಡ್ ಕಟಾಯಿಸಿ ಬೆಂಗಳೂರಿನ ಪ್ಲೈವುಡ್ ಕಾರ್ಖಾನೆಯೊಂದಕ್ಕೆ ಸರಬರಾಜು ಮಾಡುವ ಕೆಲಸ ಗಿಟ್ಟಿಸಿಕೊಳ್ಳುತ್ತಾರೆ. ಆದರೆ ಇದರಲ್ಲಿ ಯಶಸ್ವಿಯಾಗದ ಹಿನ್ನೆಲೆಯಲ್ಲಿ ಅವರು ಮೈಸೂರಿನಲ್ಲಿ ಪುಸ್ತಕ ಮಳಿಗೆ ಮತ್ತು ಪ್ರಕಾಶನ ಕಾರ್ಯಕ್ಕೆ ಕೈಹಾಕಿದರು.

ಜಗನ್ಮೋಹನ ಅರಮನೆ ರಸ್ತೆಯಲ್ಲಿ ಸಾಹಿತ್ಯ ಮಂದಿರ ಹೆಸರಿನಲ್ಲಿ ಪುಸ್ತಕ ವ್ಯಾಪಾರ ಆರಂಭಿಸಿ, ಇದರ ಜೊತೆಗೆ ಪುಸ್ತಕ ಪ್ರಕಾಶನದ ಕೆಲಸವನ್ನೂ ನಡೆಸತೊಡಗಿದರು. ಮೈಸೂರು ಮಲ್ಲಿಗೆ ರಚಿಸಿದ ಖ್ಯಾತ ಕವಿ ನರಸಿಂಹಸ್ವಾಮಿಯವರ ಎರಡನೇ ಕವನ ಸಂಕಲನ 'ಐರಾವತ' ಸೇರಿದಂತೆ ಇನ್ನು ಹಲವರ ಸಾಹಿತ್ಯ ಪ್ರಕಟಣೆ ಮಾಡಿದವರು ಇವರು. ದೊರೆಸ್ವಾಮಿಯವರ ಪುಸ್ತಕದ ಮಳಿಗೆಗೆ ಅಂದಿನ ಖ್ಯಾತ ಸಾಹಿತಿಗಳು ಭೇಟಿ ನೀಡುತ್ತಿದ್ದರು. ಆರ್.ಕೆ.ನಾರಾಯಣ್, ತ.ಸು.ಶಾಮರಾಯರು, ಪರಮೇಶ್ವರ ಭಟ್ಟರು, ಕೆ.ಎಸ್.ನರಸಿಂಹಸ್ವಾಮಿ ಮೊದಲಾದವರಿಗೆ ಚರ್ಚಾ ಕೇಂದ್ರವಾಗಿತ್ತು ಇವರ ಮೈಸೂರಿನ ಪುಸ್ತಕ ಮಳಿಗೆ.

ಸ್ವಾತಂತ್ರ್ಯ ಚಳವಳಿಗೆ ಪೂರಕವಾದ ರಾಜಕೀಯ ಚಟುವಟಿಕೆಗಳಲ್ಲಿಯೂ ದೊರೆಸ್ವಾಮಿ ತೊಡಗಿಸಿಕೊಂಡಿದ್ದ ಹಿನ್ನೆಲೆಯಲ್ಲಿ ಇವರ ಮಳಿಗೆ ರಾಜಕೀಯ ವಿಷಯಗಳ ಚರ್ಚೆಯ ಕೇಂದ್ರವೂ ಆಗಿತ್ತು. ದೊರೆಸ್ವಾಮಿಯವರ ದಿಟ್ಟ ಸ್ವಭಾವದ ಕಾರಣ ಅವರು ಅಂದಿನ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ (ಎಎಂಸಿಸಿ) ಸದಸ್ಯರಾಗಿಯೂ ಆಯ್ಕೆಯಾದರು. ಹೀಗೆ ಮೈಸೂರಿನಲ್ಲಿ ಕಾಂಗ್ರೆಸ್ ಚಟುವಟಿಕೆಯಲ್ಲಿ ನಿರತರಾಗಿದ್ದ ಅವರು ಮುಂದೊಂದು ದಿನ ಮತ್ತೆ ಬೆಂಗಳೂರಿಗೆ ಹಿಂದಿರುಗುವ ಸನ್ನಿವೇಶ ಸೃಷ್ಟಿಯಾಯಿತು.

ತಮ್ಮ ಸ್ನೇಹಿತರಾದ 'ಪೌರವಾಣಿ' ಪತ್ರಿಕೆ ಸಂಪಾದಕ ದೊಡ್ಡಬಳ್ಳಾಪುರದ ಭದ್ರಣ್ಣ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದ ಹಿನ್ನೆಲೆಯಲ್ಲಿ ದೊರೆಸ್ವಾಮಿಯವರು ಬೆಂಗಳೂರಿಗೆ ವಾಪಸ್ಸಾಗಬೇಕಾಯಿತು. ಸ್ವಾತಂತ್ರ್ಯ ಚಳುವಳಿಗೆ ಪ್ರೇರಣೆ ನೀಡುವ ಧ್ಯೇಯದೊಂದಿಗೆ ಪೌರವಾಣಿ ಆರಂಭಿಸಲಾಗಿತ್ತು. ಭದ್ರಣ್ಣನವರ ನಿಧನ ನಂತರ ಪೌರವಾಣಿ ಪತ್ರಿಕೆ ಸಂಪಾದಕ ಸ್ಥಾನದ ಜವಾಬ್ದಾರಿಯನ್ನು ದೊರೆಸ್ವಾಮಿ ವಹಿಸಿಕೊಂಡರು. ಮೈಸೂರು ಚಲೋ ಚಳವಳಿಗೆ ಶಕ್ತಿ ನೀಡಲೆಂದು ಸಾಪ್ತಾಹಿಕ ಪತ್ರಿಕೆಯಾಗಿದ್ದ ಪೌರವಾಣಿಯನ್ನು ದಿನಪತ್ರಿಕೆಯಾಗಿ ಪರಿವರ್ತಿಸಿದ ದೊರೆಸ್ವಾಮಿಯುವರು, ತಿರುಮಲೆ ತಾತಾಚಾರ್ಯ ಶರ್ಮ ಅವರ ಲೇಖನ ಮಾಲೆ ಆರಂಭಿಸುವ ಮೂಲಕ ಮೈಸೂರು ಚಲೋ ಚಳವಳಿಗೆ ಪ್ರೇರಣಾಶಕ್ತಿಯಾದರು.

ಮೈಸೂರು ಚಲೋಗೆ ಪ್ರೇರಕ ಶಕ್ತಿ ಪೌರವಾಣಿ: ದೇಶದ ಸ್ವಾತಂತ್ರ್ಯದ ಬಳಿಕ ಒಕ್ಕೂಟಕ್ಕೆ ಸೇರದೇ ಇದ್ದ ಮೈಸೂರು ಸಂಸ್ಥಾನದ ವಿರುದ್ಧ ಆರಂಭವಾದ ಮೈಸೂರು ಚಲೋ ಚಳುವಳಿಗೆ ದೊರೆಸ್ವಾಮಿ ಅವರ ಸಂಪಾದಕತ್ವದ ಪೌರವಾಣಿ ಪತ್ರಿಕೆ ಪ್ರೇರಕಶಕ್ತಿಯಾಗಿ ಕೆಲಸ ಮಾಡಿತು. ಚಳವಳಿಗೆ ಚಾಲನಾಶಕ್ತಿಯಾಗಿದ್ದ ಪೌರವಾಣಿ ಮೇಲೆ ಕಣ್ಣಿಟ್ಟಿದ್ದ ಅಂದಿನ ಮೈಸೂರು ಸರ್ಕಾರ, ಯಾವುದೇ ಲೇಖನ, ಅಗ್ರಲೇಖನ ಪ್ರಕಟಿಸುವ ಮುನ್ನ ಅದನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ತೋರಿಸಿ ಅವರು ಅನುಮತಿ ನೀಡಿದರೆ ಮಾತ್ರವೇ ಪ್ರಕಟಿಸಬೇಕೆಂಬ ಕಟ್ಟಾಜ್ಞೆ ಹೊರಡಿಸಿತ್ತು. ಆದರೆ ಇದಕ್ಕೆ ಜಗ್ಗದೇ ದೊರೆಸ್ವಾಮಿ ಲೇಖನಗಳನ್ನು ಪ್ರಕಟಿಸಿದ್ದರು. ಹೀಗಾಗಿ ಬೆಂಗಳೂರಿನ ಪೌರವಾಣಿ ಪತ್ರಿಕಾ ಕಚೇರಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತು.

ಹಿಂದೂಪುರದಿಂದ ಪ್ರಕಟಗೊಂಡ ಪೌರವಾಣಿ: ಪೌರವಾಣಿ ಪತ್ರಿಕೆ ಕಾರ್ಯಾಲಯಕ್ಕೆ ಬೀಗಮುದ್ರೆ ಬಿದ್ದ ಬಳಿಕ ತಮ್ಮ ಮಿತ್ರ ಕೆ.ಆರ್.ಶ್ರೀಧರಮೂರ್ತಿಯವರ ಸಹಕಾರದೊಂದಿಗೆ ನೆರೆರಾಜ್ಯ ಆಂಧ್ರ ಪ್ರದೇಶದ ಹಿಂದೂಪುರದಿಂದ ಪೌರವಾಣಿ ಪತ್ರಿಕೆ ಹೊರತರುವ ಸಾಹಸಕ್ಕೆ ಕೈಹಾಕಿ ಯಶಸ್ಸನ್ನು ಕಂಡರು ದೊರೆಸ್ವಾಮಿ. 1947ರ ಸೆಪ್ಟೆಂಬರ್ 1ರಂದು ಬೆಂಗಳೂರಿನಲ್ಲಿ ನಡೆದ ಹರತಾಳದಲ್ಲಿ ಪಾಲ್ಗೊಂಡಿದ್ದ ದೊರೆಸ್ವಾಮಿ ಮತ್ತು ಇವರ ಸ್ನೇಹಿತ ಕೆ.ಆರ್.ಶ್ರೀಧರಮೂರ್ತಿ, ಅದೇ 4ರಂದು ಆರಂಭಗೊಳ್ಳುವ ಸತ್ಯಾಗ್ರಹದ ಬಗ್ಗೆ ಜನತೆಯಲ್ಲಿ ಹೋರಾಟದ ಕಿಚ್ಚು ಮೂಡಿಸುವ ಚಿಂತನೆ ನಡೆಸುತ್ತಿದ್ದರು. ಅಷ್ಟೊತ್ತಿಗೆ ತಮ್ಮಿಬ್ಬರ ಬಂಧನವಾಗುವ ಮುನ್ಸೂಚನೆ ಅರಿತು ರೈಲಿನಲ್ಲಿ ಹಿಂದೂಪುರಕ್ಕೆ ಪ್ರಯಣ ಬೆಳೆಸಿದರು.

ನಂತರ, ಇಲ್ಲಿನ ಸುದರ್ಶನ ಪ್ರಿಂಟಿಂಗ್ ಪ್ರೆಸ್‌ಗೆ ಭೇಟಿ ನೀಡಿದರು. ಪ್ರೆಸ್‌ನಲ್ಲಿರುವುದು ತೆಲುಗು ಮುದ್ರಣ ಯಂತ್ರವಾದ ಕಾರಣ, ಕನ್ನಡ ಪತ್ರಿಕೆ ಹೊರತರುವ ಕನಸು ಕೈಗೂಡದು ಎಂದು ನಿರಾಸೆಗೊಂಡಿದ್ದ ದೊರಸ್ವಾಮಿ ಅವರಿಗೆ ಹೊಚ್ಚ ಹೊಸ ಕನ್ನಡ ಟೈಪ್ಸ್ ಫಾಂಟ್ ಇರುವುದು ಕಂಡಿತು. ಇದರಿಂದ ಹರ್ಷಚಿತ್ತರಾದ ಅವರು, ಬಳಿಕ ಪ್ರೆಸ್ ಮಾಲೀಕರನ್ನು ಕರೆದುಕೊಂಡು ತಮ್ಮ ಪತ್ರಿಕೆಯ ಡಿಕ್ಲೇರೇಷನ್‌ಗಾಗಿ ಅಲ್ಲಿನ ಜಿಲ್ಲಾ ಕೇಂದ್ರ ಅನಂತಪುರಕ್ಕೆ ಹೊರಟರು.

5 ಪತ್ರಿಕೆ ಪ್ರಕಟಣೆಗೆ ಮನವಿ ಸಲ್ಲಿಕೆ: ಮೈಸೂರು ಸರ್ಕಾರ ತಡೆಯೊಡ್ಡಿದರೆ ಮತ್ತೊಂದು ಹೆಸರಿನಲ್ಲಿ ಪತ್ರಿಕೆ ಹೊರತರುವ ಸಲುವಾಗಿ ಉಪಾಯ ಹೂಡಿದ ದೊರೆಸ್ವಾಮಿಯವರು, ಅನಂತಪುರ ಜಿಲ್ಲಾ ಕಲೆಕ್ಟರ್ ಮುಂದೆ 'ಪೌರವಾಣಿ', ಪೌರವೀರ, ಪೌರಭಾಸ್ಕರ್, ಪೌರಮಾರ್ತಾಂಡ, ಪೌರದೂತ ಹೀಗೆ ಐದು ಪತ್ರಿಕೆಗಳಿಗೆ ಸಂಪಾದಕನಾಗಿ ನೋಂದಣಿ ಮಾಡಿಕೊಳ್ಳಲು ಪ್ರಮಾಣಪತ್ರ ಸಲ್ಲಿಸಿದರು. ಐದು ಪತ್ರಿಕೆಗಳಿಗೇಕೆ ಪ್ರಮಾಣಪತ್ರ ಎಂದು ಜಿಲ್ಲಾ ಕಲೆಕ್ಟರ್ ಪ್ರಶ್ನಿಸಿದ ಹಿನ್ನೆಲೆಯಲ್ಲಿ ಈ ಕಾರ್ಯದಲ್ಲಿ ದೊರೆಸ್ವಾಮಿ ಸಫಲರಾದರು.

ಪತ್ರಿಕೆ ಪ್ರಕಟಣೆಗೆ ಸಿದ್ಧತೆಗಳು ಪೂರ್ಣಗೊಳ್ಳುತ್ತಿದ್ದಂತೆ ದೊರೆಸ್ವಾಮಿಯವರ ಸಂಗಡಿಗರು ಬಂದು ಸೇರಿಕೊಂಡರು. ಗೆಳೆಯರ ನೆರವಿನಿಂದ 1942ರ ಸೆಪ್ಟೆಂಬರ್ 7ರಂದು ಪೌರವಾಣಿ ಪತ್ರಿಕೆ ಪ್ರಕಟಣೆಗೊಂಡಿತು. ದಿನವೂ ಒಬ್ಬ ಸತ್ಯಾಗ್ರಹಿ ಪತ್ರಿಕೆಯನ್ನು ಖುದ್ದು ಬೆಂಗಳೂರಿಗೆ ತೆಗೆದುಕೊಂಡು ಹೋಗಬೇಕಿತ್ತು. ಈ ನಡುವೆ ಮೈಸೂರು ರೈಲ್ವೆ ನೌಕರರ ಮುಷ್ಕರ ಆರಂಭವಾದ ಹಿನ್ನೆಲೆಯಲ್ಲಿ ಬೆಂಗಳೂರು–ಹಿಂದೂಪುರ ರೈಲು ಸಂಚಾರ ಸ್ಥಗಿತಗೊಂಡಿತು. ಖಾಸಗಿ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಿ ಪತ್ರಿಕೆ ತಲುಪಿಸುವ ಅವಕಾಶ ಸಿಕ್ಕಿದ್ದ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಪತ್ರಿಕೆ ತಲುಪಿಸಲು ಮತ್ತೊಂದು ದಾರಿ ಪ್ರಾಪ್ತವಾಯಿತು. ದಿನಕ್ಕೊಬ್ಬ ಸತ್ಯಾಗ್ರಹಿ ಬೆಂಗಳೂರಿಗೆ ಬಸ್‌ನಲ್ಲಿ ಹೋಗಿ ಪೌರವಾಣಿ ತಲುಪಿಸುವ ಜವಾಬ್ದಾರಿ ನಿಭಾಯಿಸುತ್ತಿದ್ದರು.

ಸೈಕಲ್‌ನಲ್ಲಿ ಬೆಂಗಳೂರು ತಲುಪಿದ ಪತ್ರಿಕೆ: ಹಿಂದೂಪುರದಲ್ಲಿ ಫೋನ್ ಮೂಲಕ ಸತ್ಯಾಗ್ರಹದ ಸಮಾಚಾರ ಪಡೆಯುವುದು, ರೇಡಿಯೋ ಕೇಳಿ ಸರ್ಕಾರದ ಸುದ್ದಿ ಸಂಗ್ರಹಿಸುವ ಜೊತೆಗೆ ಮೈಸೂರು ಸಂಸ್ಥಾನದ ನಾನಾ ಕಡೆಗಳಿಂದ ಅಂಚೆ, ಟೆಲಿಗ್ರಾಂ ಮೂಲಕ ಸುದ್ದಿಗಳು ಸಂಗ್ರಹ ನಡೆಯುತ್ತಿತ್ತು. ಹೀಗಿದ್ದ ಸಂದರ್ಭದಲ್ಲಿ ಒಂದು ದಿನ, ನಾಳೆ ಮೈಸೂರು ಸಂಸ್ಥಾನದಲ್ಲಿ ಕರ್ಫ್ಯೂ ವಿಧಿಸಲಾಗಿದೆ ಎಂಬ ಸುದ್ದಿ ರೇಡಿಯೋ ಮೂಲಕ ತಿಳಿಯಿತು. ಇದರಿಂದ ಬೆಂಗಳೂರಿಗೆ ಪತ್ರಿಕೆ ತಲುಪಿಸುವ ಬಗೆ ಹೇಗೆ ಎಂದು ದೊರೆಸ್ವಾಮಿಯವರಿಗೆ ಚಿಂತೆ ಕಾಡತೊಡಗಿತು. ಆಗ ಸೈಕಲ್‌ನಲ್ಲಿ ಯಾರಾದರು ಒಬ್ಬರು ಬೆಂಗಳೂರಿಗೆ ಪತ್ರಿಕೆಗಳನ್ನು ಕೊಂಡೊಯ್ಯುವ ತೀರ್ಮಾನ ಮಾಡಲಾಯಿತು. ಅದರಂತೆ ಉಪಾಧ್ಯಾಯರಾಗಿದ್ದ ಶೇಷಗಿರಿ ಅವರು ಪೇಪರ್ ಬಂಡಲ್‌ನೊಂದಿಗೆ ಸೈಕಲ್ ಸವಾರಿ ಆರಂಭಿಸಿದರು. ರಾತ್ರಿ 11ಕ್ಕೆ ಬೆಂಗಳೂರು ತಲುಪಿದ ಶೇಷಗಿರಿಯವರು ಪೇಪರ್ ಏಜೆಂಟ್ ಶಾಮಣ್ಣನವರಿಗೆ ಪತ್ರಿಕೆಗಳನ್ನು ತಲುಪಿಸಿದರು. ಬೆಳಗ್ಗೆ 5 ಗಂಟೆಗೆ ಪತ್ರಿಕೆ ಮಾರಾಟ ಮಾಡಲಾಯಿತು. ಸೆಪ್ಟೆಂಬರ್ 24ರಂದು ಪೌರವಾಣಿ ಪತ್ರಿಕೆ ಮೈಸೂರು ಸಂಸ್ಥಾನದೊಳಗೆ ಬರಕೂಡದೆಂದು ಮಹಾರಾಜರು ಆದೇಶವಿತ್ತರು. ಆ ಬಳಿಕ 'ಪೌರವೀರ' ಹೆಸರಿನಲ್ಲಿ ಪತ್ರಿಕೆ ಪ್ರಕಟಿಸಲಾಯಿತು.

(ಮಾಹಿತಿ ಮೂಲ: ಹೆಚ್.ಎಸ್.ದೊರೆಸ್ವಾಮಿ ಅವರ 'ನೆನಪಿನ ಸುರುಳಿ ತೆರೆದಾಗ' ಪುಸ್ತಕ. ಮೊದಲ ಆವೃತ್ತಿ 1998)



ಹಿಂದೂಪುರದಿಂದ ಪ್ರಕಟಗೊಳ್ಳುತ್ತಿದ್ದ ಪೌರವಾಣಿ ಮತ್ತು ಪೌರವೀರ ಪತ್ರಿಕೆಗಳ ಮುಖಪುಟಗಳು

ಸ್ವಾತಂತ್ರ್ಯ ಸಂಗ್ರಾಮದಲ್ಲಿ ವೀರಮಹಿಳೆ ಕಿತ್ತೂರು ರಾಣಿ ಚೆನ್ನಮ್ಮ ಸಾಹಸ ಗಾಥೆ



ಕಾಕತಿ ಗ್ರಾಮದ ಧೂಳಪ್ಪಗೌಡರ ಪುತ್ರಿಯಾಗಿ 1778ರ ಅಕ್ಟೋಬರ್ 23ರಂದು ಜನಿಸಿದ ಚೆನ್ನಮ್ಮ, ಚಿಕ್ಕ ವಯಸ್ಸಿನಲ್ಲೇ ಕುದುರೆ ಸವಾರಿ ಹಾಗೂ ಬಿಲ್ಲುವಿದ್ಯೆಯನ್ನು ಕರಗತ ಮಾಡಿಕೊಂಡಿದ್ದಳು. ಮಲ್ಲಸರ್ಜನ ವರಿಸಿದ ನಂತರ ಕಿತ್ತೂರಿನ ರಕ್ಷಣೆಗೆ ನಿಂತರು. ಬೆಳಗಾವಿಯ ಕಿತ್ತೂರಿನ ಇತಿಹಾಸವು ಕ್ರಿ.ಶ. 1586ರಿಂದ ಆರಂಭಗೊಳ್ಳುವುದಾದರೂ ಬ್ರಿಟಿಷರ ವಿರುದ್ಧದ ಹೋರಾಟದಿಂದ ಪ್ರಸಿದ್ಧಿ ಪಡೆಯಿತು. 1857ರಲ್ಲಿ ನಡೆದ ಮೊದಲ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಿತ್ತೂರಿನ ಕೊಡುಗೆ ಮಹತ್ವವಾದದ್ದು.

ಚೆನ್ನಮ್ಮ ವಿವಾಹವಾದ ಕೆಲವೇ ವರ್ಷಗಳಲ್ಲಿ ಪತಿ ಮಲ್ಲಸರ್ಜ ದೇಸಾಯಿ ಅವರನ್ನು ಪೇಶ್ವೆಗಳು ಬಂಧಿಸುತ್ತಾರೆ. ಮೂರು ವರ್ಷಗಳ ಕಾಲ ಕಾರಾಗೃಹ ಶಿಕ್ಷೆ ಅನುಭವಿಸಿ ಪುಣೆಯಿಂದ ತಪ್ಪಿಸಿಕೊಂಡು ಬರುವಾಗ 1816ರಲ್ಲಿ ಅರಬಾವಿ ಬಳಿ ಮಲ್ಲಸರ್ಜ ಸಾವನ್ನಪ್ಪುತ್ತಾರೆ. ಇದರಿಂದಾಗಿ ಅನಿವಾರ್ಯವಾಗಿ ಸಂಸ್ಥಾನದ ಹೊಣೆಯನ್ನು ರಾಣಿ ಚೆನ್ನಮ್ಮ ವಹಿಸಿಕೊಳ್ಳುತ್ತಾರೆ. ಸ್ವಂತ ಮಕ್ಕಳಿಲ್ಲದ ರಾಣಿ ಚೆನ್ನಮ್ಮ ಸಂಸ್ಥಾನದ ಉಳಿವಿಗಾಗಿ ಮಾಸ್ತಮರಡಿ ಗೌಡ ಮನೆತನದ ಶಿವಲಿಂಗ ರುದ್ರ ಸರ್ಜನನ್ನು ದತ್ತು ಪಡೆಯುತ್ತಾರೆ. ರಾಜನಿಷ್ಠರಾಗಿದ್ದ ಗುರುಸಿದ್ದಪ್ಪ, ಹಿಮ್ಮತಸಿಂಗ, ಸಂಗೊಳ್ಳಿ ರಾಯಣ್ಣ, ನರಸಿಂಗರಾವ, ಗುರುಪುತ್ರ ಇತರ ಬೆಂಬಲಿಗರ ನೆರವಿನಿಂದ ದತ್ತು ಮಗನಿಗೆ ಪಟ್ಟ ಕಟ್ಟಿ, ಚೆನ್ನಮ್ಮ ಅವರೇ ಆಡಳಿತ ನಡೆಸುತ್ತಾರೆ.

ಇದೇ ಸಂದರ್ಭದಲ್ಲಿ ಬ್ರಿಟಿಷರು 'ದತ್ತು ಮಕ್ಕಳಿಗೆ ಹಕ್ಕಿಲ್ಲ' ಎನ್ನುವ ಕಾಯ್ದೆಯನ್ನು ಜಾರಿಗೆ ತರುತ್ತಾರೆ. ಈ ನಿಯಮವನ್ನು ಕಿತ್ತೂರು ಸಂಸ್ಥಾನದ ಮೇಲೂ ಜಾರಿಗೊಳಿಸಿದ್ದರಿಂದ ರಾಣಿ ಚೆನ್ನಮ್ಮ ಕುಪಿತರಾಗುತ್ತಾರೆ. ಪರಿಣಾಮ ಚೆನ್ನಮ್ಮ ಹಾಗೂ ಬ್ರಿಟಿಷರ ನಡುವೆ ಸಂಘರ್ಷ ಉಂಟಾಗುತ್ತದೆ. ಧಾರವಾಡದ ಕಲೆಕ್ಟರ್ ಆಗಿದ್ದ ಥ್ಯಾಕರೆ, ಕಿತ್ತೂರು ಸಂಸ್ಥಾನಕ್ಕೆ ಬಂದು ಮಲ್ಲಪ್ಪ ಶೆಟ್ಟಿ ಹಾಗೂ ವೆಂಕಟರಾವ್ ಅವರನ್ನು ಆಡಳಿತ ಅಧಿಕಾರಿಗಳನ್ನಾಗಿ ನೇಮಕ ಮಾಡಿದಲ್ಲದೆ ಸಂಸ್ಥಾನದ ಭಂಡಾರಕ್ಕೆ ಬೀಗಮುದ್ರೆ ಹಾಕಿಸುತ್ತಾನೆ.

ಕಿತ್ತೂರಿಗೆ 1824ರ ಅಕ್ಟೋಬರ್ 21 ರಂದು ಬಂದಿದ್ದ ಕಲೆಕ್ಟರ್ ಥ್ಯಾಕರೆ, 2 ದಿನದ ಬಳಿಕ ಅಂದರೆ ಅ.23ರಂದು ಕೋಟೆ ಮೇಲೆ ತೋಪು ಹಾರಿಸಲು ತನ್ನ ಸೈನ್ಯಕ್ಕೆ ಅಪ್ಪಣೆ ನೀಡುತ್ತಾನೆ. ಆದರೆ ಕೋಟೆ ಬಾಗಿಲು ತೆರೆಯುತ್ತಿದ್ದಂತೆ ಸರ್ದಾರ ಗುರುಸಿದ್ದಪ್ಪನವರ ನೇತೃತ್ವದಲ್ಲಿ ಕಿತ್ತೂರು ವೀರರು, ಥ್ಯಾಕರೆ ಸೈನ್ಯದತ್ತ ಮುನ್ನುಗ್ಗುತ್ತಾರೆ. ಆ ವೇಳೆ ರಾಣಿ ಚೆನ್ನಮ್ಮರ ಅಂಗರಕ್ಷಕನೊಬ್ಬ ಥ್ಯಾಕರೆಗೆ ಗುಂಡಿಕ್ಕುತ್ತಾನೆ. ಆತನ ಜೊತೆಗಿದ್ದ ಸ್ಟೀವನ್ಸ್ ಹಾಗೂ ಈಲಿಯಟ್‌ನನ್ನು ಸೆರೆ ಹಿಡಿಯಲಾಗುತ್ತದೆ. ದೇಶದ್ರೋಹಿ ಕೃತ್ಯವೆಸಗಿದ್ದ ಕನ್ನೂರು ವೀರಪ್ಪ ಹಾಗೂ ಸರದಾರ ಮಲ್ಲಪ್ಪ ಇದೇ ವೇಳೆ ಹತರಾಗುತ್ತಾರೆ.

ಥ್ಯಾಕರೆ ಹತ್ಯೆಯಿಂದ ಆಘಾತಕ್ಕೊಳಗಾದ ಬ್ರಿಟಿಷರು, ರಾಣಿ ಚೆನ್ನಮ್ಮರ ಮೇಲೆ ಮತ್ತಷ್ಟು ಕೆಂಡಾಮಂಡಲರಾಗಿ ಹೆಚ್ಚಿನ ಸೈನಿಕರನ್ನು ಕಳುಹಿಸಿ ಕಿತ್ತೂರು ಸಂಸ್ಥಾನವನ್ನು ವಶಪಡಿಸಿಕೊಳ್ಳಲು ಮುಂದಾಗುತ್ತಾರೆ. ರಾಣಿ ಚೆನ್ನಮ್ಮ, ಅವರ ಸೊಸೆಯಂದಿರಾದ ವೀರಮ್ಮ ಹಾಗೂ ಜಾನಕಿ, ಸರ್ದಾರ ಗುರುಸಿದ್ಧಪ್ಪ ಸೇರಿ ಅನೇಕರನ್ನು ಸೆರೆ ಹಿಡಿಯುತ್ತಾರೆ. ಚೆನ್ನಮ್ಮ ಅವರನ್ನು ಬೈಲಹೊಂಗಲದಲ್ಲಿ ಬಂಧಿಸಿಡಲಾಗುತ್ತದೆ. ದುರಂತವೆಂದರೆ ಬಂಧಿಯಾಗಿದ್ದ ರಾಣಿ ಚೆನ್ನಮ್ಮ 4 ವರ್ಷಗಳ ಬಳಿಕ ಜೈಲಿನಲ್ಲಿಯೇ 1825 ಫೆಬ್ರವರಿ 2ರಂದು ಸಾವನ್ನಪ್ಪುತ್ತಾರೆ. ಕೆಲ ತಿಂಗಳ ಬಳಿಕ ಸೊಸೆ ಜಾನಕಿ ನಿಧನರಾಗುತ್ತಾರೆ.

1831 ಜನವರಿ 26ರಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನನ್ನೂ ಗಲ್ಲಿಗೇರಿಸಲಾಗುತ್ತದೆ. ಏನೇ ಆಗಲಿ ರಾಣಿ ಚೆನ್ನಮ್ಮ ಹಾಗೂ ನಿಷ್ಠ ಸೇನಾನಿಗಳ ದೇಶಪ್ರೇಮದ ಕಿಚ್ಚು, ಧೈರ್ಯ, ಸಾಹಸ ಸದಾ ಸ್ಮರಣೀಯ.

ಹೋರಾಟ ಭೂಮಿ ಸುಬ್ಬರಾಯನ ಕೆರೆಗೆ ಶತಮಾನೋತ್ಸವ ಸಂಭ್ರಮ



ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ಹೋರಾಟದ ಸಂದರ್ಭದಲ್ಲಿ ಅತಿರಥ– ಮಹಾರಥ ನಾಯಕರ ಸಮಾಗಮಕ್ಕೆ ಕೇಂದ್ರ ಬಿಂದುವಾಗಿದ್ದ ಮೈಸೂರಿನ ಸುಬ್ಬರಾಯನ ಕೆರೆಗೆ ನೂರಾರು ವರ್ಷಗಳ ಇತಿಹಾಸ. ಈ ಅಮೃತ ಮಹೋತ್ಸವದಲ್ಲಿ ಮೈಸೂರಲ್ಲಿ ಸ್ವಾತಂತ್ರ್ಯ ಚಳವಳಿಯ ಕೇಂದ್ರ ಬಿಂದುವಾಗಿದ್ದ ಸುಬ್ಬರಾಯನ ಕೆರೆ ಜಾಗದ ಮಹತ್ವವನ್ನು ಮರೆಯುವುದುಂಟೇ....!

1920ರ ನಂತರ ನಡೆದ 'ಸ್ವಾತಂತ್ರ್ಯ ಹೋರಾಟ', 'ಮೈಸೂರು ಚಲೋ' ಸೇರಿದಂತೆ ಹಲವು ಹೋರಾಟಗಳಿಗೆ ಸಾಕ್ಷಿಯಾಗಿದ್ದ ಮೈಸೂರು ಸುಬ್ಬರಾಯನ ಕೆರೆಗೆ ಸ್ವಾತಂತ್ರ್ಯ ಪೂರ್ವದಲ್ಲಿ 'ಲಾಟ' ಮೈದಾನ, 'ಲಜಪತ್' ಮೈದಾನ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದಿತ್ತು. ತದನಂತರ 'ಪಂಡಿತ್ ಅಂಬಳೆ ಅಣ್ಣಯ್ಯ ಪಾರ್ಕ್' ಹೆಸರಿನಿಂದ ನಾಮಕರಣಗೊಂಡಿತ್ತು. ಬದಲಾದ ಕಾಲಘಟ್ಟದಲ್ಲಿ ಪ್ರಸ್ತುತ ಈ ಜಾಗಕ್ಕೆ 'ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ' ಎಂದು ಹೆಸರು ಬದಲಾವಣೆ ಮಾಡಲಾಗಿದೆ. ಈ ಭಾಗದ ಸ್ವಾತಂತ್ರ್ಯ ಹೋರಾಟಗಾರರು ಒಂದೆಡೆ ಜಮಾಯಿಸಿ (ಸ್ವಾತಂತ್ರ್ಯ ಪೂರ್ವದಲ್ಲಿ)ಬ್ರಿಟಿಷ್ ಸರ್ಕಾರದ ವಿರುದ್ಧ ಪ್ರತಿಭಟನೆ, ಜಾಥಾ ಆರಂಭಿಸುವ ಕೇಂದ್ರ ಸ್ಥಾನ ಅದುವೇ ಸುಬ್ಬರಾಯನಕೆರೆ. ಇಲ್ಲಿನ ಹೋರಾಟಗಳಿಗೆ ಮೈಸೂರಿನ ಮಹಾರಾಜ, ಯುವರಾಜ, ಹಾರ್ಡ್‌ವಿಕ್ ಶಾಲೆಯ ವಿದ್ಯಾರ್ಥಿಗಳು, ಮಹಾತ್ಮ ಗಾಂಧಿ ಸೇರಿದಂತೆ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಮಾತುಗಳಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಹೋರಾಟದ ಘೋಷಣೆಗಳು ಕಾಲೇಜಿನ ವಿದ್ಯಾರ್ಥಿಗಳ ಕಿವಿಗೆ ಬಿದ್ದ ತಕ್ಷಣ ತರಗತಿಗಳಿಗೆ ಚಕ್ಕರ್ ಹಾಕಿ, ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಈ ಭಾಗದ ಅಂದಿನ ಹೋರಾಟಗಳಿಗೆ ಜಯಪ್ರಕಾಶ್ ನಾರಾಯಣ ಅವರು, ಸ್ವಾತಂತ್ರ್ಯ ಪೂರ್ವ ಹಾಗೂ ನಂತರದ ಪ್ರಗತಿಪರ ಹೋರಾಟಗಳಿಗೂ ನೇತೃತ್ವ ವಹಿಸುತ್ತಿದ್ದರು ಎಂಬ ಕಾರಣಕ್ಕೆ ಮೈಸೂರಿನ ಹೋರಾಟಗಾರರೆಲ್ಲರೂ ಸುಬ್ಬರಾಯನ ಕೆರೆ ಜಾಗಕ್ಕೆ 'ಲಾಟ' ಅಥವಾ 'ಲಜಪತ್' ಹೆಸರಿಂದ ಕರೆಯುತ್ತಿದ್ದುದು ವಾಡಿಕೆ. ಈ ಹೋರಾಟಗಳ ಸವಿನೆನಪಿಗಾಗಿ 15–08–1988 ರಂದು ನಾಗರಿಕ ಪರಿಷತ್ ವತಿಯಿಂದ 'ಶಿಲಾಶಾಸನ' ಸ್ಥಾಪಿಸಲಾಗಿದೆ ಎನ್ನುತ್ತಾರೆ ಮೈಸೂರು ನಗರ ಮತ್ತು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಸಂಚಾಲಕ ಯೋಗಾನಂದ ಎ.ನಾರಾಯಣ.

ಕ್ವಿಟ್ ಇಂಡಿಯಾ ಚಳವಳಿ ಪೂರ್ವ ಸಿದ್ಧತೆಗಾಗಿ ಮಹಾತ್ಮ ಗಾಂಧೀಜಿ ಅವರು ಮೈಸೂರಿಗೆ ಭೇಟಿ ನೀಡಿ, ಸ್ವಾತಂತ್ರ್ಯ ಸಂಗ್ರಾಮದ ಕುರಿತು ಮೈಸೂರಿನ ಹೋರಾಟಗಾರರಿಗೆ ಜಾಗೃತಿ ಮೂಡಿಸಿದರು. ಈ ಸಂಬಂಧ 1928ರಲ್ಲಿ ಮೊದಲ ಮೈಸೂರು ಕಾಂಗ್ರೆಸ್ ಅಧಿವೇಶನ ಜರುಗಿತು. ಈ ಹೋರಾಟದ ಫಲವಾಗಿ ನಮ್ಮ ತ್ರಿವರ್ಣ ಧ್ವಜವನ್ನು ಪ್ರಪ್ರಥಮವಾಗಿ ಸುಬ್ಬರಾಯನ ಕೆರೆಯಲ್ಲಿ ಹಾರಿಸಿದ್ದು ಈಗ ಇತಿಹಾಸ. ಅಂತೆಯೇ ಮೈಸೂರು ಸಂಸ್ಥಾನದ ಕೊನೆಯ ಅರಸು ಶ್ರೀ ಜಯಚಾಮರಾಜ ಒಡೆಯರ್ ಅವರು, ಪ್ರಜಾಪ್ರಭುತ್ವದ ಸರ್ಕಾರ ರಚಿಸಲು ಒಪ್ಪಿಗೆ ಸೂಚಿಸಿ, 'ಮೈಸೂರು ಚಲೋ' ಹೋರಾಟದ ಅಂತ್ಯಕ್ಕೆ ಸಾಕ್ಷಿಯಾಗಿದ್ದು, ಇದೇ ಸುಬ್ಬರಾಯನ ಕೆರೆ.

ಸುಬ್ಬರಾಯನ ಕೆರೆ ಹೆಸರು ಹೇಗೆ ಬಂತು?: ವಿದ್ವಾನ್ ಭಾಗವತ ಸುಬ್ಬರಾಯರು 1799ರಿಂದ 1868ರವರೆಗೆ ಬದುಕಿದ್ದರು. ಈ ವೇಳೆ ಮುಮ್ಮಡಿ ಕೃಷ್ಣರಾಯ ಒಡೆಯರ್ ಆಳ್ವಿಕೆ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ವೇದ–ಉಪನಿಷತ್, ಸಂಸ್ಕೃತದಲ್ಲಿ ಅಪಾರ ಪಾಂಡಿತ್ಯ ಗಳಿಸಿದ್ದ ಭಾಗವತ ಸುಬ್ಬರಾಯರು, ಅರಮನೆಯಲ್ಲಿ ರಾಜರ ಸಲಹೆಗಾರರಾಗಿ ಕೆಲಸಕ್ಕೆ ಸೇರಿದ್ದರು. ಇವರು, ಆ ಕಾಲಘಟ್ಟಕ್ಕೆ ಸರಿ ಹೊಂದುವಂಥಹ ಕೆರೆಯನ್ನು ತಮ್ಮ ಸ್ವಂತ ದುಡಿಮೆಯಿಂದ ಸುಬ್ಬರಾಯರು ಕಟ್ಟಿಸಿದ್ದರು. ಇವರ ಜನಸೇವೆಗೆ ಮೆಚ್ಚಿದ ಅಂದಿನ ಮಹಾರಾಜರು ಆ ಕೆರೆಗೆ 'ಸುಬ್ಬರಾಯನ ಕೆರೆ' ಎಂದು ಹೆಸರು ನಾಮಕರಣ ಮಾಡಿರುವ ಸಂಗತಿ ಅರಮನೆ ದಾಖಲೆಗಳಲ್ಲಿ ಉಲ್ಲೇಖವಾಗಿದೆ.

2 ಬಾರಿ ಬಂಧನವಾಗಿತ್ತು: ಅಂದಿನ ಹೋರಾಟಗಳಲ್ಲಿ ತಗಡೂರು ರಾಮಚಂದ್ರರಾಯರು, ಎಂ.ಎನ್.ಜೋಯಿಸ್, ಟಿ.ಎಸ್.ರಾಜಗೋಪಾಲ ಅಯ್ಯಂಗಾರ್, ಯಶೋದರಮ್ಮ ದಾಸಪ್ಪ, ತುಳಸೀದಾಸಪ್ಪ, ನಾರಾಯಣಸ್ವಾಮಿ, ಅಗರಂ ರಂಗಯ್ಯ, ಎಂ. ವೆಂಕಟಕೃಷ್ಣಯ್ಯ, ಕೆ.ಎಸ್.ಸೀತಾರಾಮ ಅಯ್ಯಂಗಾರ್, ಟಿ.ಎಸ್.ಸುಬ್ಬಣ್ಣ, ಪತ್ರಕರ್ತ ಖಾದ್ರಿ ಶಾಮಣ್ಣ, ಎಚ್.ವೈ.ಶಾರದಾ ಪ್ರಸಾದ್, ಎಂ.ವಿ.ಕೃಷ್ಣಪ್ಪ, ಬಿ.ಶ್ರೀಕಂಠಪ್ಪ, ಟಿ.ವಿ.ಶ್ರೀನಿವಾಸರಾವ್, ಎ.ರಾಮಣ್ಣ ಮೊದಲಾದ ಯುವ ಹೋರಾಟಗಾರರ ನಾಯಕತ್ವದಲ್ಲಿ ಹೋರಾಟಗಳು ರೂಪುಗೊಳ್ಳುತ್ತಿತ್ತು. ಅಲ್ಲದೆ, ಈ ಜಾಗದಲ್ಲಿ ಪ್ರಚೋದನಾಕಾರಿ ಭಾಷಣ ಮಾಡಿದರು ಎಂಬ ಕಾರಣಕ್ಕೆ ಮಾಜಿ ಶಾಸಕ ವೇದಾಂತ ಹೆಮ್ಮಿಗೆ 2 ಬಾರಿ ಬಂಧನವಾಗಿದ್ದ ಸಂದರ್ಭವನ್ನು ಅವರ ಸಮಕಾಲೀನ ಹೋರಾಟಗಾರರು ಇಂದಿಗೂ ನೆನಪಿಸಿಕೊಳ್ಳುತ್ತಾರೆ.

ಅಂದಿನ ಡಿಸಿಎಂ ಅವರಿಂದ ಶಿಲಾನ್ಯಾಸ: ಸಿದ್ದರಾಮಯ್ಯ ಉಪ ಮುಖ್ಯಮಂತ್ರಿಯಾಗಿದ್ದಾಗ ಅಂದಿನ ಮೇಯರ್ ಮಣಿರಾಜು, ಮಾಜಿ ಶಾಸಕರಾದ ಎ.ರಾಮಣ್ಣ, ವೇದಾಂತ ಹೆಮ್ಮಿಗೆ ಮತ್ತಿತರರ ಪ್ರಯತ್ನದ ಫಲವಾಗಿ ಸುಬ್ಬರಾಯನ ಕೆರೆ ಜಾಗದಲ್ಲಿ 'ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ ಭವನ'ಕ್ಕೆ 15–08–1999ರಂದು ಶಿಲಾನ್ಯಾಸ ನೆರವೇರಿಸಿ, 26–01–1999ರಂದು ಅಂದಿನ ಡಿಸಿಎಂ ಸಿದ್ದರಾಮಯ್ಯ ಭವನ ಉದ್ಘಾಟಿಸಿದ್ದರು. ಈಗಲೂ ಆ ಸ್ಥಳದಲ್ಲಿ 'ಗಣರಾಜ್ಯೋತ್ಸವ', 'ಸ್ವಾತಂತ್ರ್ಯೋತ್ಸವ', 'ಕ್ವಿಟ್ ಇಂಡಿಯಾ ಚಳವಳಿ', 'ಮೈಸೂರು ಚಲೋ ಚಳವಳಿ'ಗಳ ನೆನಪಿನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

2009ರ ಅ.2ರಂದು ಅಂದಿನ ಮೈಸೂರು ಮೇಯರ್ ಪುರುಷೋತ್ತಮ್ ಹಾಗೂ ಮೈಸೂರು ನಗರ ಮತ್ತು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಂದಿನ ಅಧ್ಯಕ್ಷ ವೇದಾಂತ ಹೆಮ್ಮಿಗೆ ನೇತೃತ್ವದಲ್ಲಿ ಮಹಾತ್ಮಗಾಂಧಿ ಪ್ರತಿಮೆ ಸ್ಥಾಪಿಸಲಾಗಿದೆ. ಈ ಸ್ಮಾರಕ ಭವನದಲ್ಲಿ ಎಂ.ಎನ್.ಜೋಯಿಸ್ ವಾಚನಾಲಯ, ಗಾಂಧೀಜಿ ಮತ್ತವರ ಅನುಯಾಯಿಗಳ 'ದಂಡಿಯಾತ್ರೆಯ ನೆನಪಿಸುವ ಪ್ರತಿಮೆ'ಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ 2022ರ ಜೂ.25ರಂದು 'ಸ್ವಾತಂತ್ರ್ಯ ಅಮೃತ ಮಹೋತ್ಸವ' ಅಂಗವಾಗಿ 'ಅಮೃತ ಭಾರತಿಗೆ ಕನ್ನಡದಾರತಿ' ಅಭಿಯಾನದ ಸಾಕ್ಷಿಯಾಗಿ ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ವತಿಯಿಂದ ಶಿಲಾಶಾಸನ ಸ್ಥಾಪಿಸಿ, ಇದನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದ್ದಾರೆ ಎಂದು ಸಂಚಾಲಕ ಯೋಗಾನಂದ ಎ.ನಾರಾಯಣ ತಿಳಿಸಿದರು.

ಪಿಂಗಾಳಿ ವೆಂಕಯ್ಯ ರೂಪಿಸಿದ ನಮ್ಮ ಹೆಮ್ಮೆಯ ರಾಷ್ಟ್ರಧ್ವಜ

ನಮ್ಮ ಬಾವುಟ
ಏರುತಿಹುದು ಹಾರುತಿಹುದು
ನೋಡು ನಮ್ಮ ಬಾವುಟ
ತೋರುತಿಹುದು ಹೊಡೆದು ಹೊಡೆದು
ಬಾನಿನಗಲ ಪಟಪಟ

–ಕಯ್ಯಾರ ಕಿಞ್ಞಣ್ಣ ರೈ



ಬಾಲ್ಯದಲ್ಲಿ ಕವಿ ಕಯ್ಯಾರ ಕಿಞ್ಞಣ್ಣರೈರವರ 'ನಮ್ಮ ಬಾವುಟ ಪದ್ಯ'ವನ್ನು ಓದದವರೇ ಇಲ್ಲ. ಹಾರುತಿಹುದು ಬಾವುಟವಷ್ಟೇ ಅಲ್ಲ, ದೇಶಪ್ರೇಮದ, ರಾಷ್ಟ್ರ ಗೌರವದ, ರಾಷ್ಟ್ರವನ್ನು ಪ್ರತಿನಿಧಿಸುವ ಸಾಂಕೇತಿಕ ರಾಷ್ಟ್ರಧ್ವಜ. ಕನ್ನಡ ಭಾಷೆಯಲ್ಲಿ ತ್ರಿವರ್ಣ ಧ್ವಜವೆಂದು, ಹಿಂದಿ ಭಾಷೆಯಲ್ಲಿ ತಿರಂಗ ಎಂದೂ ಹೆಮ್ಮೆಯಿಂದ ಹೇಳಲಾಗುವುದು. ಧ್ವಜದ ಕಲ್ಪನೆ ಸನಾತನ ಭಾರತದಲ್ಲಿ ಹೊಸದೇನಲ್ಲ. ಆದಿಕಾಲದ ಪುರಾಣ, ರಾಮಾಯಣ, ಮಹಾಭಾರತದ ನಂತರ ಆಳಿದ ವಿವಿಧ ಪ್ರಾಂತ್ಯಗಳ, ಧರ್ಮದ ರಾಜರುಗಳೂ ಸಹ ತಮ್ಮದೇ ಆದ ವೈಶಿಷ್ಟ್ಯ, ವೈವಿಧ್ಯಮಯ ಧ್ವಜಗಳನ್ನು ಬಳಕೆ ಮಾಡಿರುವುದು ಕಂಡುಬರುತ್ತದೆ. ವಿಶೇಷವಾಗಿ ಅವರ ರಥಗಳಲ್ಲಿ ಧ್ವಜಗಳು ಕಡ್ಡಾಯವಾಗಿ ಹಾರಲ್ಪಡುತ್ತಿದ್ದುದನ್ನು ಕಾಣಬಹುದಾಗಿದೆ. ಪುರಾಣದಲ್ಲಿ ಬ್ರಹ್ಮ ದೇವರದು ಹಂಸಧ್ವಜವಾದರೆ, ಮಹಾವಿಷ್ಣುವಿನದು ಗರುಡ ಧ್ವಜ, ಈಶ್ವರನದು ವೃಷಕೇತನ ಧ್ವಜ ಎಂದು ತಿಳಿದು ಬರುತ್ತದೆ. ತ್ರೇತಾಯುಗದಲ್ಲಿ ದಶರಥ ಮಹಾರಾಜರು ಅಗ್ನಿ ಪ್ರತೀಕವಾದ ಖಾವಿ ಬಣ್ಣದ ಧ್ವಜದಲ್ಲಿ ಸೂರ್ಯೋದಯದ ಲಾಂಛನವನ್ನು ಬಳಸುತ್ತಿದ್ದರು. ದ್ವಾಪರ ಯುಗದ ಆಳ್ವಿಕೆ ಕಾಲದಲ್ಲಿ ಪಿತಾಮಹ ಭೀಷ್ಮರು ಐದು ನಕ್ಷತ್ರಗಳ ತಾಳ ಧ್ವಜವನ್ನು, ದ್ರೋಣರು ಕಮಂಡಲು ಚಿತ್ರವನ್ನು ಹೊಂದಿದ ಖಾವಿ ಧ್ವಜವನ್ನು, ಕೃಪಾಚಾರ್ಯರು ನೀಲಧ್ವಜವನ್ನು, ಅಶ್ವತ್ಥಾಮನು ಸಿಂಹ ಧ್ವಜವನ್ನು, ಶ್ರೀ ಕೃಷ್ಣನು ಗರುಡ ಧ್ವಜವನ್ನು, ದುರ್ಯೋಧನನು ಉರಗಪತಾಕವನ್ನು, ಅರ್ಜುನನು ಹನುಮಂತನ ಚಿತ್ರವುಳ್ಳ ಧ್ವಜವನ್ನು ತಮ್ಮಗಳ ಧ್ವಜವನ್ನಾಗಿ ಬಳಸುತ್ತಿದ್ದರು ಎಂಬುದು ಉಲ್ಲೇಖವಾಗಿದೆ.

ಭಾರತ ದೇಶದ ಇತ್ತೀಚೆಗಿನ ಇತಿಹಾಸವನ್ನು ಗಮನಿಸಿದಾಗ ಈಸ್ಟ್ ಇಂಡಿಯಾ ಕಂಪೆನಿಯಿಂದ ಹಿಡಿದು ಬ್ರಿಟೀಷರವರೆವಿಗೂ ಯಾವುದಾದರೊಂದು ರೀತಿಯ ಧ್ವಜ ಬಳಕೆಯ ಪ್ರಾಮುಖ್ಯತೆಯನ್ನು ಕಾಣಬಹುದು. ದೇಶದಲ್ಲಿನ ಸಂಪೂರ್ಣ ಸ್ವಾತಂತ್ರ್ಯ ಹೋರಾಟದಲ್ಲಿಯೂ ಸಹ ಹೋರಾಟಗಾರರಲ್ಲಿ ಹುಮ್ಮಸ್ಸು ನೀಡುವ ವಿವಿಧ ರೀತಿಯ ಧ್ವಜಗಳು ಕಾಲಕಾಲಕ್ಕೆ ರೂಪುಗೊಂಡವು. ಮಹಾತ್ಮ ಗಾಂಧೀಜಿಯವರು 1921 ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ನಾಯಕತ್ವವನ್ನು ವಹಿಸಿಕೊಂಡರು. ಅಂದಿನಿಂದ ಸ್ವಾತಂತ್ರ್ಯ ಹೋರಾಟಕ್ಕೆ ಪೂರಕವಾಗಿ ಧ್ವಜದ ಸ್ವರೂಪವು ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಚರ್ಚೆಯಾಗುತ್ತಿದ್ದುದು ಗಮನಾರ್ಹ. ಹಲವಾರು ಬಾರಿ ಧ್ವಜದ ವಿನ್ಯಾಸವು ಬದಲಾಗುತ್ತಾ ನಿರ್ದಿಷ್ಟ ರಾಷ್ಟ್ರಧ್ವಜದ ಬಗ್ಗೆ ಚರ್ಚೆಯಾಗಿ 1947ರ ಹೊತ್ತಿಗೆ ಅಂತಿಮವಾಗಿ ರೂಪುಗೊಂಡಿತು. ಆಂಧ್ರಪ್ರದೇಶದ ಸ್ವಾತಂತ್ರ್ಯ ಹೋರಾಟಗಾರರಾದ ಪಿಂಗಳಿ ವೆಂಕಯ್ಯ ಅವರು ಹಲವಾರು ಬಾರಿ ವಿವಿಧ ವಿನ್ಯಾಸದ ಧ್ವಜದ ವರಾದರಿಗಳನ್ನು ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸುತ್ತಿದ್ದರು. ಕೇಸರಿ, ಬಿಳಿ, ಹಸಿರು ಬಣ್ಣಗಳ ಮಧ್ಯದಲ್ಲಿ ಚರಕ ಚಿಹ್ನೆ ಇರುವ ತ್ರಿವರ್ಣ ಧ್ವಜವನ್ನು 1931ರ ಅಧಿವೇಶನದಲ್ಲಿ ಅಂಗೀಕರಿಸಿ ಇದು ಸ್ವರಾಜ್ ಧ್ವಜ ಎಂದು ಘೋಷಿಸಿ ಆರೋಹಣ ಮಾಡಲಾಯಿತು. ನಂತರದಲ್ಲಿ ಧ್ವಜವು ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಸಂಕೇತವಾಯಿತು. ಇದೇ ಸಮಯದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್‌ರವರ ನೇತೃತ್ವದಲ್ಲಿನ ಸ್ವಾತಂತ್ರ್ಯ ಹೋರಾಟದಲ್ಲಿಯೂ ಕೇಸರಿ, ಬಿಳಿ ಬಣ್ಣದ ಆಜಾದ್ ಹಿಂದ್ ಘೋಷಣೆಯೊಂದಿಗೆ ಹುಲಿಯ ಚಿತ್ರವಿರುವ ಧ್ವಜವೂ ಬಳಕೆಯಾಗುತ್ತಿತ್ತು.

1947ರ ಹೊತ್ತಿಗೆ ದೇಶವು ಸ್ವಾತಂತ್ರ್ಯ ಪಡೆಯುವುದು ನಿಶ್ಚಿತವಾಗುತ್ತಿದ್ದಂತೆಯೇ ಬಹುಪಾಲು ಜನರು ಗೌರವಿಸುತ್ತಿದ್ದ ಧ್ವಜವು ಕಾಂಗ್ರೆಸ್ ಧ್ವಜವೆಂದು ಸ್ವತಂತ್ರ ರಾಷ್ಟ್ರಕ್ಕೆ ಧ್ವಜದಲ್ಲಿ ಸೂಕ್ತ ಬದಲಾವಣೆಯ ಅವಶ್ಯಕತೆ ಇದ್ದು ಎಲ್ಲಾ ಪಕ್ಷಗಳೂ ಹಾಗೂ ಸಮುದಾಯವೂ ಒಪ್ಪಿಕೊಳ್ಳುವಂತೆ ಇರಬೇಕೆಂದು ಎಲ್ಲೆಡೆ ಒತ್ತಾಯ ಕೇಳಿಬಂತು. ಹಾಗಾಗಿ ನೂತನ ಧ್ವಜವನ್ನು ರೂಪಿಸಲು ಡಾ.ಬಾಬು ರಾಜೇಂದ್ರ ಪ್ರಸಾದ್‌ರವರ ನೇತೃತ್ವದಲ್ಲಿ ಡಾ.ಬಿ.ಆರ್.ಅಂಬೇಡ್ಕರ್, ಅಬ್ದುಲ್ ಕಲಾಂ ಅಜಾದ್, ಸರೋಜಿನಿ ನಾಯ್ಡು, ಚಕ್ರವರ್ತಿ ಸಿ. ರಾಜಗೋಪಾಲಾಚಾರಿ, ಮತ್ತು ಕೆ.ಎಂ. ಮುನ್ಷಿ ಅವರುಗಳನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಲಾಯಿತು. ಆ ವೇಳೆಗೆ ಪಿಂಗಳಿ ವೆಂಕಯ್ಯರವರು ಪರಿಷ್ಕರಿಸಿದ ಸತ್ಯ, ಶಾಂತಿ ಹಾಗೂ ತ್ಯಾಗದ ಸಂಕೇತವಾದ ಕೇಸರಿ, ಬಿಳಿ, ಹಸಿರು ಬಣ್ಣದ, ಹಾಗೂ ಬಿಳಿ ಬಣ್ಣದ ಮಧ್ಯಭಾಗದಲ್ಲಿ ನೀಲಿ ಬಣ್ಣದಲ್ಲಿನ 24 ಸಮಾನಾಂತರ ಅರಗಳಿರುವ ಅಶೋಕ ಚಕ್ರವನ್ನು ಹೊಂದಿರುವ ಭಾರತ ದೇಶದ ರಾಷ್ಟ್ರಧ್ವಜವನ್ನು ಅಂತಿಮವಾಗಿ ಆಯ್ಕೆ ಮಾಡಲಾಯಿತು. ಈ ನೂತನ ರಾಷ್ಟ್ರಧ್ವಜವನ್ನು ಭಾರತ ದೇಶವು ಬ್ರಿಟೀಷರ ಆಡಳಿತದಿಂದ ಮುಕ್ತಿಯನ್ನು ಪಡೆದ ಆಗಸ್ಟ್ 15, 1947ರ ಸ್ವಾತಂತ್ರ್ಯ ದಿನಾಚರಣೆಯಂದು ದೆಹಲಿಯ ಕೆಂಪುಕೋಟೆಯ ಮೇಲೆ ಪ್ರಥಮವಾಗಿ ಅಂದಿನ ಪ್ರಧಾನಿಗಳಾಗಿದ್ದ ಪಂಡಿತ್ ಜವಾಹರಲಾಲ್ ನೆಹರುರವರು ಧ್ವಜಾರೋಹಣ ಮಾಡಿದರು. ಹಾಗೆಯೇ ನಮ್ಮ ರಾಷ್ಟ್ರಧ್ವಜವನ್ನು ವಿಶ್ವಸಂಸ್ಥೆಯ ಕಚೇರಿಯಲ್ಲೂ ಆರೋಹಣ ಮಾಡುವ ಮೂಲಕ ಸ್ವತಂತ್ರ ಭಾರತ ದೇಶಕ್ಕೆ ಗೌರವ ಸಲ್ಲಿಸಲಾಯಿತು. ರಾಷ್ಟ್ರಧ್ವಜದ ವಿನ್ಯಾಸಕರಾದ ಪಿಂಗಳಿ ವೆಂಕಯ್ಯರವರು ದಿನಾಂಕ 02–08–1876 ರಂದು ಆಂಧ್ರಪ್ರದೇಶದ ಕೃಷ್ಣ ಜಿಲ್ಲೆಯ ದಿವಿ ತಾಲೂಕಿನ ಭಟ್ಲಪೆನ್ನುಮಾರು ಗ್ರಾಮದಲ್ಲಿನ ಹನುಮಂತರಾಯಡು ಮತ್ತು ವೆಂಕಟರತ್ನಮ್ಮ ದಂಪತಿಯ ಪುತ್ರರಾಗಿ ಜನಿಸಿದರು. ಮುಂದೆ ತಮ್ಮ ಕುಟುಂಬದ ಮೂಲ ಕೃಷಿಯನ್ನು ಪಿಂಗಳಿಯವರು ಮುಂದುವರೆಸಿ ಉತ್ತಮ ಹತ್ತಿ ಬೆಳೆಗಾರರಾಗಿ ಹತ್ತಿ ಬೆಳೆಯುವಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಮಾಡಿ ಆ ಭಾಗದ ಜನಪ್ರಿಯ ರೈತರಾಗಿದ್ದರು. ಸ್ವಲ್ಪ ಕಾಲ ರೈಲ್ವೆ ಸಿಬ್ಬಂದಿಯಾಗಿಯೂ ಸೇವೆ ಸಲ್ಲಿಸಿದ ಇವರು ಮಹಾತ್ಮ ಗಾಂಧೀಜಿಯವರ ಆದರ್ಶಗಳಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹಾಗೆಯೇ ಮಚಲೀಪಟ್ಟಣದಲ್ಲಿ ಸಾರ್ವಜನಿಕ ಶಿಕ್ಷಣ ಸಂಸ್ಥೆಯನ್ನು ತೆರೆದು ಸಮಾಜ ಸೇವೆಗೆ ತಮ್ಮ ಜೀವನವನ್ನು ಮುಡುಪಾಗಿಟ್ಟರು. ನಂತರ ವಯೋಧರ್ಮದ ನಿಮಿತ್ತ ಜುಲೈ 4, 1963 ರಲ್ಲಿ ವಿಜಯವಾಡದಲ್ಲಿ ನಿಧನರಾದರು. ಶ್ರೀಯುತರ ಸ್ಮರಣಾರ್ಥವಾಗಿ 2009 ರಲ್ಲಿ ಕೇಂದ್ರ ಸರ್ಕಾರವು ಅಂಚೆ ಚೀಟಿಯನ್ನು ಬಿಡುಗಡೆ ಮಾಡಿ ಗೌರವವನ್ನು ಸಮರ್ಪಿಸಿರುವುದು ಸಂತಸದ ವಿಷಯ. ಆದರೂ, ಕೇಂದ್ರ ಸರ್ಕಾರವು ಇವರ ಕೊಡುಗೆಯನ್ನು ಗಮನಿಸಿ ರಾಷ್ಟ್ರದ ಉನ್ನತ ಪ್ರಶಸ್ತಿಯಾದ ಪದ್ಮ ಪ್ರಶಸ್ತಿಯನ್ನು ಮರಣೋತ್ತರವಾಗಿ ನೀಡಿ ಗೌರವಿಸಬೇಕಾಗಿದೆ.

ಕೇಂದ್ರ ಸರ್ಕಾರವು ರಾಷ್ಟ್ರಗೌರವ ಸಂರಕ್ಷಣಾ ಕಾಯ್ದೆ–1971, ರಾಷ್ಟ್ರಧ್ವಜ ಸಂಹಿತೆ–2002 ಕಾಯಿದೆಯನ್ನು ರೂಪಿಸಿದ್ದು ಅದರಲ್ಲಿ ಮೂರು ಪ್ರತ್ಯೇಕ ಭಾಗಗಳಲ್ಲಿ ರಾಷ್ಟ್ರಧ್ವಜ ಬಳಸುವ ಸಂಬಂಧ ಸೂಕ್ತ ನಿರ್ದೇಶನ ನೀಡಿದೆ. ರಾಷ್ಟ್ರಧ್ವಜವನ್ನು ಚರಕದಿಂದಾಗಲೀ, ನೂಲಿನಿಂದಾಗಲೀ, ಉಣ್ಣೆ, ರೇಷ್ಮೆ ಅಥವಾ ಖಾದಿ ಬಟ್ಟೆಯಿಂದಾಗಲೀ ತಯಾರಿಸಿದ ಧ್ವಜವನ್ನು ಬಳಸಬೇಕು. ರಾಷ್ಟ್ರೀಯ ದಿನಗಳಾದ ಸ್ವಾತಂತ್ರ್ಯ ದಿನಾಚರಣೆ ಮತ್ತು ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿನ ಕೆಂಪುಕೋಟೆಯ ಮೇಲೆ ವಿಶೇಷವಾಗಿ ಧ್ವಜಾರೋಹಣ ಮಾಡಲಾಗುವುದು. ಅದೇ ರೀತಿ ಶಿಕ್ಷಣ ಸಂಸ್ಥೆಗಳಲ್ಲೂ ಸಹ ಧ್ವಜಾರೋಹಣ ಮಾಡಿ ಮಕ್ಕಳಲ್ಲಿ ರಾಷ್ಟ್ರಭಕ್ತಿಯನ್ನು ಮೂಡಿಸುವ ಕೆಲಸ ಮಾಡಲಾಗುತ್ತಿದೆ. ಅಂತಹ ಸಂದರ್ಭದಲ್ಲಿ ಮಾತ್ರ ಹೂವಿನಿಂದ ಮಡಿಸಿದ ಧ್ವಜವನ್ನು ಆರೋಹಣ ಮಾಡಲಾಗುವುದು. ಅಲ್ಲದೇ ಪ್ರತಿನಿತ್ಯ ರಾಷ್ಟ್ರಪತಿ ಭವನ, ಸಂಸತ್ ಭವನ, ಸರ್ವೋಚ್ಚ ನ್ಯಾಯಾಲಯ, ರಾಜಭವನ, ವಿಧಾನಸೌಧ, ಉಚ್ಚನ್ಯಾಯಾಲಯ, ಕೇಂದ್ರ ಮತ್ತು ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲೂ ಯಾವುದೇ ಹವಾಮಾನವಿದ್ದರೂ ಸರಿ, ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಧ್ವಜಕ್ಕೆ ಯಾವುದೇ ಅಗೌರವವಾಗದಂತೆ ಹಾರಿಸಬೇಕೆಂಬುದು ನಿಯಮ. ಹಾಗೆಯೇ ರಾಷ್ಟ್ರಧ್ವಜವನ್ನು ಹಾರಿಸುವಾಗ ರಾಷ್ಟ್ರಕವಿ ರವೀಂದ್ರನಾಥ ಟಾಗೋರ್ ವಿರಚಿತ 52 ಸೆಕೆಂಡುಗಳಲ್ಲಿ ಹಾಡಬಹುದಾದ ರಾಷ್ಟ್ರಗೀತೆಯನ್ನು ಕಡ್ಡಾಯವಾಗಿ ಹಾಡುವುದು ಪದ್ಧತಿಯಾಗಿದೆ. ರಾಷ್ಟ್ರೀಯ ಹಬ್ಬಗಳು, ರಾಷ್ಟ್ರೀಯ ಕ್ರೀಡೋತ್ಸವ ಮತ್ತು ರಾಷ್ಟ್ರೀಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಾಗದದಿಂದ ತಯಾರಿಸಿದ ಕೈಯಲ್ಲಿ ಹಿಡಿಯಬಹುದಾದ ರಾಷ್ಟ್ರಧ್ವಜವನ್ನು ಅಗೌರವವಾಗದಂತೆ ಬಳಸಬಹುದಾಗಿದ್ದು, ಪ್ಲಾಸ್ಟಿಕ್‌ನಿಂದ ತಯಾರಿಸಿದ ರಾಷ್ಟ್ರಧ್ವಜವನ್ನು ಬಳಸುವುದು ನಿಷೇಧಿಸಲಾಗಿದೆ.

ರಾಷ್ಟ್ರಧ್ವಜದ ಬಳಕೆಗಾಗಿ ವಿವಿಧ ಒಂಭತ್ತು ಅಳತೆಯ ನಮೂನೆಯನ್ನು ಸಂಹಿತೆಯಲ್ಲಿ ತಿಳಿಸಲಾಗಿದೆ. ರಾಷ್ಟ್ರದ ಗಣ್ಯಾತಿಗಣ್ಯರು ಬಳಸುವ ವಾಹನಗಳ ಬ್ಯಾನೆಟ್ ಮುಂಭಾಗದಲ್ಲಿ ಸ್ಥಿರವಾಗಿರುವಂತೆ ಧ್ವಜವನ್ನು ಬಳಸಬಹುದಾಗಿದೆ. ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು, ರಾಜ್ಯಪಾಲರು, ಲೆಫ್ಟಿನೆಂಟ್ ಗೌರ್ನರ್‌ಗಳವರ ಅಧಿಕೃತ ನಿವಾಸಗಳ ಮೇಲೆಯೂ ರಾಷ್ಟ್ರಧ್ವಜವನ್ನು ಪ್ರತಿನಿತ್ಯ ಹಾರಿಸಲಾಗುವುದು. ಹಾಗೂ ಗಣ್ಯಾತಿಗಣ್ಯರುಗಳು ಪ್ರವಾಸ ಕೈಗೊಂಡ ಪರಸ್ಥಳಗಳಲ್ಲಿ ತಂಗುವ ಕಟ್ಟಡದ ಮೇಲೆಯೂ ಸಹ ಅವರುಗಳು ತಂಗುವ ಅವಧಿಯ ದಿನಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲಾಗುವುದು. ರಾಷ್ಟ್ರಧ್ವಜವನ್ನು ವಾಣಿಜ್ಯ ಉದ್ದೇಶಗಳಿಗಾಗಿ ಬಳಸುವುದನ್ನು ನಿಷೇಧಿಸಲಾಗಿದ್ದು, ರಾಷ್ಟ್ರಧ್ವಜವನ್ನು ದುರ್ಬಳಕೆ ಮಾಡುವುದು, ಸುಡುವುದು, ವಿರೂಪಗೊಳಿಸುವುದು ಶಿಕ್ಷಾರ್ಹ ಅಪರಾಧವಾಗುತ್ತದೆ. ರಾಷ್ಟ್ರಧ್ವಜವು ಬಳಕೆಯ ನಂತರ ಕಾಲಕ್ರಮೇಣ ಸಹಜವಾಗಿ ಹರಿದಿದ್ದು ಅಥವಾ ವಿರೂಪಗೊಂಡಿದ್ದರೆ ಅಂತಹ ಧ್ವಜವನ್ನು ಗೌರವಯುತವಾಗಿ ನಾಶಪಡಿಸಲು ನಿಯಮದಲ್ಲಿ ಸೂಚಿಸಲಾಗಿದೆ. ರಾಷ್ಟ್ರದ ಗಣ್ಯಾತಿಗಣ್ಯರು, ವೀರ ಮರಣವನ್ನು ಹೊಂದಿದ ಯೋಧರ ಪಾರ್ಥಿವ ಶರೀರದ ಮೇಲೆ ರಾಷ್ಟ್ರಧ್ವಜವನ್ನು ಹೊದಿಸುವ ಮೂಲಕ ಸರಕಾರವು ಅಂತಹ ಮೃತಪಟ್ಟ ಗಣ್ಯರು ಮತ್ತು ಯೋಧರಿಗೆ ಅಂತಿಮವಾಗಿ ರಾಷ್ಟ್ರಗೌರವವನ್ನು ನೀಡಲಾಗುವುದು. ಹಾಗೂ ರಾಷ್ಟ್ರಧ್ವಜವನ್ನು ಅರ್ಧಮಟ್ಟದಲ್ಲಿ ಹಾರಿಸಿ ಸಂತಾಪ ಸೂಚಿಸುವ ಸಂಪ್ರದಾಯವೂ ಇದೆ. ರಾಷ್ಟ್ರದ ರಕ್ಷಣಾ ಇಲಾಖೆಗೆ ಸಂಬಂಧಿಸಿದಂತೆ ರಾಷ್ಟ್ರಧ್ವಜ ಹಾಗೂ ರಕ್ಷಣಾ ಇಲಾಖೆಯ ಧ್ವಜ ಬಳಕೆಗೆ ಪ್ರತ್ಯೇಕ ಧ್ವಜ ನಿಯಮಾವಳಿಗಳನ್ನು ರೂಪಿಸಲಾಗಿದೆ. ದೇಶದ ರಕ್ಷಣಾ ಮತ್ತು ಪೊಲೀಸ್ ಇಲಾಖೆಯಲ್ಲಿಯೂ ಸಹ ವಿಶೇಷ ಸಂದರ್ಭದಲ್ಲಿ ರಾಷ್ಟ್ರಧ್ವಜಕ್ಕೆ ನ್ಯಾಷನಲ್ ಸೆಲ್ಯೂಟ್ ಮುಖಾಂತರ ಗೌರವವನ್ನು ಸಲ್ಲಿಸಲಾಗುತ್ತದೆ.

–ನಂ. ಶ್ರೀಕಂಠ ಕುಮಾರ್
ಚಲನವಾಣಿ: 9481067333


ಸ್ವಾತಂತ್ರ್ಯದ
ಅಮೃತ ಮಹೋತ್ಸವ
ಪ್ರಪಂಚದ ಭೂಪಟದಲ್ಲಿ ತನ್ನದೇ
ಆದ ವಿಶೇಷ ಸ್ಥಾನಮಾನ
ಪಡೆದಿರುವ
ಭಾರತ 75ನೇ
ಸ್ವಾತಂತ್ರ್ಯೋತ್ಸವದ
ಅಮೃತ
ಮಹೋತ್ಸವ
ಆಚರಿಸಿಕೊಳ್ಳುತ್ತಿರುವ ಈ
ಶುಭಘಳಿಗೆಯಲ್ಲಿ ನಾಡಿನ
ಸಮಸ್ತ ಜನತೆಗೆ
ಸ್ವಾತಂತ್ರ್ಯೋತ್ಸವ ಅಮೃತ
ಮಹೋತ್ಸವದ ಶುಭಾಶಯಗಳು
ಸ್ವಾತಂತ್ರ್ಯ ಸ್ವೇಚ್ಛಾಚಾರವಾಗದೆ
ಘನತೆ – ಗೌರವದಿಂದ
ಅನುಭವಿಸೋಣ, ಪ್ರತಿಯೊಬ್ಬರು
ಸ್ವಾತಂತ್ರ್ಯ ಸವಿಯಲು
ಒತ್ತಾಸೆಯಾಗೋಣ. ಸಹ
ಜೀವನ ನಮ್ಮ ಧ್ಯೇಯವಾಗಲಿ.
ಜಿ.ಡಿ.ಹರೀಶ್‌ಗೌಡರು
ಉಪಾಧ್ಯಕ್ಷರು
ರಾಜ್ಯ ಅಪೆಕ್ಸ್ ಬ್ಯಾಂಕ್
ಹಾಗೂ ಅಧ್ಯಕ್ಷರು
ಎಂ.ಸಿ.ಡಿ.ಸಿ.ಸಿ ಬ್ಯಾಂಕ್,
ಮೈಸೂರು
ಜಿ.ಟಿ.ದೇವೇಗೌಡರು
ಮಾಜಿ ಸಚಿವರು ಹಾಗೂ
ಹಾಲಿ ಶಾಸಕರು
ಚಾಮುಂಡೇಶ್ವರಿ
ವಿಧಾನಸಭಾ ಕ್ಷೇತ್ರ
ಪ್ರಕಟಣೆ: ಹೆಚ್.ಸಿ.ರಾಜು, ಹಿನಕಲ್,
ಮಾಜಿ ಅಧ್ಯಕ್ಷರು, ಜೆ.ಡಿ.ಎಸ್. ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು